ಸೋಮವಾರ, ಡಿಸೆಂಬರ್ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 358 | ಪುಟ 12

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ಮನೆ, ಸಮಾಜದಲ್ಲಿನ ಹಿರಿಯರು, ಶಾಲಾ ಸಿಬ್ಬಂದಿ ಸೇರಿದಂತೆ ಎಲ್ಲರ ವರ್ತನೆ, ನಡೆನುಡಿಗಳೂ ನೈತಿಕ ಮೌಲ್ಯಗಳನ್ನು ಪ್ರತಿನಿಧಿಸುವಂತಿದ್ದರೆ ಮಾತ್ರ ಮಕ್ಕಳಿಗೆ ನೈತಿಕ ಶಿಕ್ಷಣ ದೊರಕುತ್ತದೆ.

ಆಳ-ಅಗಲ: ಲಸಿಕೆಯ ರಕ್ಷಣೆ ಮಕ್ಕಳಿಗೂ ವಿಸ್ತರಣೆ

5 ಜಿಲ್ಲಿ ಉತ್ಪನ್ನಗಳಿಗೆ ಹೆಚ್ಚುವರಿ ತೆರಿಗೆ 11

ಮಹಿಳಾ ಮ್ಯಾರಥಾನ್‌ಗೆ ಅವಕಾಶ ನೀಡದ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

‘ಓಮೈಕ್ರಾನ್ ವಿರುದ್ಧ ಜನ ಜಾಗೃತಿಯೇ ಶಕ್ತಿ’ 6

‘ಬುಲ್ಡೋಜರ್‌ನಾಥ ವಿಧ್ವಂಸಕ ಸರ್ಕಾರ’ 11

ರಾತ್ರಿ 10 ರಿಂದ ಬೆಳಿಗ್ಗೆ 5ರವರೆಗೆ ಸಾರ್ವಜನಿಕರ ಓಡಾಟ ನಿಷಿದ್ಧ • ಅಗತ್ಯ ಸೇವೆಗಳಿಗೆ ಅವಕಾಶ

ನಾಳೆಯಿಂದ ರಾತ್ರಿ ಕರ್ಫ್ಯೂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಡಿಸೆಂಬರ್ 28ರಿಂದ (ಮಂಗಳವಾರ) 10 ದಿನಗಳ ಕಾಲ ರಾತ್ರಿ 10 ಗಂಟೆಯಿಂದ ಬೆಳಿಗ್ಗೆ 5ರವರೆಗೆ ರಾತ್ರಿ ಕರ್ಫ್ಯೂ ವಿಧಿಸಿ ಸರ್ಕಾರ ಆದೇಶ ಹೊರಡಿಸಿದೆ.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಸಭೆಯ ಬಳಿಕ ಈ ನಿರ್ಧಾರವನ್ನು ಪ್ರಕಟಿಸಿದರು. ನಂತರ ರಾತ್ರಿ ಕರ್ಫ್ಯೂ ಜಾರಿ ಕುರಿತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಆದೇಶ ಹೊರಡಿಸಿದ್ದಾರೆ.

ಮಂಗಳವಾರದಿಂದ ರಾತ್ರಿ 10ರ ಬಳಿಕ ಸಾರ್ವಜನಿಕ ಸಾರಿಗೆ ಸೇವೆ ಹೊರತುಪಡಿಸಿ ಇತರ ವಾಣಿಜ್ಯ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ. 2022ರ ಜನವರಿ 7ರವರೆಗೂ ಈ ನಿರ್ಬಂಧ ಜಾರಿಯಲ್ಲಿರಲಿದೆ. ರಾತ್ರಿ ಕರ್ಫ್ಯೂವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು, ವಿವಿಧ ನಗರಗಳ ಪೊಲೀಸ್ ಕಮಿಷನರ್‌ಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಮತ್ತು ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ.

10ನೇ ಪುಟ ನೋಡಿ

ಹೊಸ ವರ್ಷಾಚರಣೆಯ ಕಣ್ಗಾವಲಿಗೆ ಬೆಂಗಳೂರಿನ ಚರ್ಚ್ ಸ್ಟ್ರೀಟ್‌ನಲ್ಲಿ ಭಾನುವಾರ ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸಲಾಯಿತು ಪ್ರಜಾವಾಣಿ ಚಿತ್ರ/ ರಂಜು ಪಿ.

ಹೊಸ ವರ್ಷಾಚರಣೆಗೆ ನಿರ್ಬಂಧ

ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆ ನಿಷೇಧ ಮತ್ತು ಹೋಟೆಲ್, ರೆಸ್ಟೋರೆಂಟ್, ಪಬ್ ಮತ್ತು ಕ್ಲಬ್‌ಗಳಲ್ಲಿ ಸಾಮರ್ಥ್ಯದ ಶೇ 50ರಷ್ಟು ಜನರಿಗೆ ಮಾತ್ರ ಅವಕಾಶ ಕಲ್ಪಿಸಬೇಕೆಂಬ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಭಾನುವಾರದ ಆದೇಶದಲ್ಲಿ ಮುಖ್ಯ ಕಾರ್ಯದರ್ಶಿ ಮತ್ತೊಮ್ಮೆ ನಿರ್ದೇಶನ ನೀಡಿದ್ದಾರೆ.

ಸಭೆ, ಸಮಾರಂಭಕ್ಕೆ 300 ಜನರ ಮಿತಿ

ಮದುವೆ ಸೇರಿದಂತೆ ಯಾವುದೇ ಸಭೆ, ಸಮಾರಂಭಗಳಿಗೆ ಸೇರಬಹುದಾದ ಜನಸಂಖ್ಯೆಯ ಮಿತಿಯನ್ನು 300ಕ್ಕೆ ಇಳಿಕೆ ಮಾಡಲಾಗಿದೆ.

ಯಾವುದಕ್ಕೆಲ್ಲ ನಿರ್ಬಂಧ?

- ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಅಗತ್ಯ ಸೇವೆಗಳ ಉದ್ದೇಶದ ಹೊರತಾಗಿ ಸಾರ್ವಜನಿಕರ ಓಡಾಟ ನಿಷಿದ್ಧ. ಹೋಟೆಲ್, ರೆಸ್ಟೋರೆಂಟ್, ಪಬ್ ಸೇರಿದಂತೆ ಎಲ್ಲ ಚಟುವಟಿಕೆಗಳೂ ರಾತ್ರಿ 10ಕ್ಕೆ ಅಂತ್ಯ.

ಯಾವುದಕ್ಕೆಲ್ಲ ಅವಕಾಶ?

- ಬಸ್, ರೈಲು, ಮೆಟ್ರೊ ರೈಲು ಮತ್ತು ವಿಮಾನ ಸೇರಿದಂತೆ ಎಲ್ಲ ಬಗೆಯ ಸಾರ್ವಜನಿಕ ಸಾರಿಗೆ ಸೇವೆಗೆ ಅವಕಾಶ. ಪ್ರಯಾಣಿಕರು ಟಿಕೆಟ್ ತೋರಿಸಿ ಬಸ್, ರೈಲು ಮತ್ತು ವಿಮಾನ ನಿಲ್ದಾಣ ತಲುಪಬಹುದು.
- ರೋಗಿಗಳು ಮತ್ತು ಅವರ ಸಹಾಯಕರು ಅಥವಾ ಜತೆಗಿರುವವರು ಚಿಕಿತ್ಸೆಯ ಉದ್ದೇಶಕ್ಕೆ ಪ್ರಯಾಣ ಮಾಡಲು ನಿರ್ಬಂಧಿಸುವಂತಿಲ್ಲ.
- ರಾತ್ರಿ ವೇಳೆ ಕೆಲಸ ಮಾಡಲೇಬೇಕಾದ ಕೈಗಾರಿಕೆಗಳು ಮತ್ತು ಕಂಪನಿಗಳಿಗೆ ನಿರ್ಬಂಧ ಅನ್ವಯವಾಗದು.ಇಂತಹ ಉದ್ದಿಮೆಗಳ ನೌಕರರು ಸಂಸ್ಥೆಯ ಗುರುತಿನ ಚೀಟಿ ಅಥವಾ ಅನುಮತಿ ಪತ್ರ ತೋರಿಸಿ ಓಡಾಡಬಹುದು.
- ಟೆಲಿಕಾಂ ಮತ್ತು ಇಂಟರ್‌ನೆಟ್ ಸೇವೆಗೆ ಸಂಬಂಧಿಸಿದ ಸಂಸ್ಥೆಗಳ ನೌಕರರು ಓಡಾಡಲು ಅವಕಾಶ.
- ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಕಂಪನಿಗಳಲ್ಲಿ ಅನಿವಾರ್ಯ ಎನಿಸಿದ ನೌಕರರು ಮಾತ್ರ ಕಚೇರಿಯಿಂದ ಕೆಲಸ ನಿರ್ವಹಿಸಬೇಕು. ಉಳಿದವರಿಗೆ ಮನೆಯಿಂದಲೇ ಕೆಲಸ ಮಾಡಲು ಅವಕಾಶ ನೀಡಬೇಕು.
- ವೈದ್ಯಕೀಯ, ತುರ್ತು ಸೇವೆಗಳು ಮತ್ತು ಔಷಧ ಉತ್ಪಾದನಾ ಕಂಪನಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬಹುದು. ಇತರ ಎಲ್ಲ ವಾಣಿಜ್ಯ ಚಟುವಟಿಕೆಗಳೂ ನಿಷೇಧ.
- ಸರಕು ಸಾಗಣೆ, ಇ- ಕಾಮರ್ಸ್ ಕಂಪನಿಗಳಿಂದ ಸರಕುಗಳನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಸೇವೆಗೆ ಸಂಪೂರ್ಣ ಅವಕಾಶ.

ಶೇ 50ರ ಮಿತಿಗೆ ಆಕ್ರೋಶ

ಬೆಂಗಳೂರು: ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಅವುಗಳ ಒಟ್ಟು ಸಾಮರ್ಥ್ಯದ ಶೇಕಡ 50ರಷ್ಟಕ್ಕಿಂತ ಹೆಚ್ಚಿನ ಜನರಿಗೆ ಸೇವೆ ಒದಗಿಸುವಂತಿಲ್ಲ ಎಂಬ ನಿರ್ಬಂಧಕ್ಕೆ ಬೃಹತ್ ಬೆಂಗಳೂರು ಹೋಟೆಲ್ ಮಾಲೀಕರ ಸಂಘ ವಿರೋಧ ವ್ಯಕ್ತಪಡಿಸಿದೆ. ‘ನಮ್ಮ ಜೊತೆ ಚರ್ಚೆಯನ್ನೇ ನಡೆಸದೆ ಸರ್ಕಾರ ಈ ತೀರ್ಮಾನ ಕೈಗೊಂಡಿದೆ’ ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಬೇಸರ ವ್ಯಕ್ತಪಡಿಸಿದ್ದಾರೆ.

6ನೇ ಪುಟ ನೋಡಿ

9–12 ತಿಂಗಳ ನಡುವೆ ಮುನ್ನೆಚ್ಚರಿಕೆ ಡೋಸ್

ನವದೆಹಲಿ (ಪಿಟಿಐ): ಕೋವಿಡ್–19 ತಡೆ ಲಸಿಕೆಯ ಎರಡನೇ ಡೋಸ್ ಪಡೆದುಕೊಂಡ ನಂತರದ 9 ತಿಂಗಳಿಂದ 12 ತಿಂಗಳ ಒಳಗೆ ‘ಮುನ್ನೆಚ್ಚರಿಕೆ ಡೋಸ್’ ಅಥವಾ ಬೂಸ್ಟರ್ ಡೋಸ್ ಅನ್ನು ನೀಡುವ ಸಾಧ್ಯತೆ ಇದೆ. ಎರಡನೇ ಡೋಸ್ ಮತ್ತು ಮೂರನೇ ಡೋಸ್ ನಡುವಣ ಅಂತರ ಎಷ್ಟು ಇರಬೇಕು ಎಂಬ ಬಗ್ಗೆ ವಿಶ್ಲೇಷಣೆ ನಡೆಯುತ್ತಿದೆ. ಈ ಬಗ್ಗೆ ಅಂತಿಮ ನಿರ್ಧಾರ ಶೀಘ್ರ ಆಗಲಿದೆ ಎಂದು ಮೂಲಗಳು ತಿಳಿಸಿವೆ.

ಸುನಾಮಿ ನೆನಪು 2004ರಲ್ಲಿ ಸಂಭವಿಸಿದ ಸುನಾಮಿ ದುರಂತದಲ್ಲಿ ಮೃತಪಟ್ಟವರ ಸ್ಮರಣಾರ್ಥ ಚೆನ್ನೈನ ಪಟ್ಟಿನಪಕ್ಕಾಂ ಸಮುದ್ರತೀರದಲ್ಲಿ ಭಾನುವಾರ ಮಹಿಳೆಯರು ಸಮುದ್ರಕ್ಕೆ ಹೂವು ಅರ್ಪಿಸಿ ವಿಧಿ ವಿಧಾನಗಳನ್ನು ನೆರವೇರಿಸಿದರು –ಎಎಫ್‌ಪಿ ಚಿತ್ರ

ಕೇಂದ್ರ ಶಿಕ್ಷಣ ಸಚಿವಾಲಯ ಸೂಚನೆ

ಪಿಯು ಕಾಲೇಜುಗಳಲ್ಲಿ ‘ಸೂರ್ಯ ನಮಸ್ಕಾರ’

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಎಲ್ಲ ಪದವಿ ಪೂರ್ವ ಕಾಲೇಜುಗಳಲ್ಲಿ ಜ. 1ರಿಂದ ಫೆ. 7ರವರೆಗೆ ‘ಸೂರ್ಯ ನಮಸ್ಕಾರ’ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಪದವಿಪೂರ್ವ ಶಿಕ್ಷಣ ಇಲಾಖೆ ಸೂಚಿಸಿದೆ. ಅಲ್ಲದೆ, ಜ 26ರಂದು ‘ಸಂಗೀತದೊಂದಿಗೆ ಸೂರ್ಯ ನಮಸ್ಕಾರ’ (ಮ್ಯೂಸಿಕಲ್ ಪರ್ಫಾರ್ಮೆನ್ಸ್ ಆನ್ ಸೂರ್ಯ ನಮಸ್ಕಾರ) ಆಯೋಜಿಸಬೇಕು ಎಂದೂ ತಿಳಿಸಿದೆ.

75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ‘ಸೂರ್ಯ ನಮಸ್ಕಾರ’ ಕಾರ್ಯಕ್ರಮ ಆಯೋಜಿಸುವಂತೆ ಕೇಂದ್ರ ಶಿಕ್ಷಣ ಸಚಿವಾಲಯ ಎಲ್ಲ ರಾಜ್ಯಗಳ ಶಿಕ್ಷಣ ಇಲಾಖೆಗಳ ಮುಖ್ಯಸ್ಥರಿಗೆ ಡಿ.16ರಂದು ಪತ್ರ ಬರೆದು ಸೂಚಿಸಿತ್ತು. ಅದರಂತೆ, ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಬಳಿಕ ಕಾರ್ಯಕ್ರಮದ ಕ್ರೋಡೀಕೃತ ಮಾಹಿತಿಯನ್ನು ಇಲಾಖೆಯ ಶೈಕ್ಷಣಿಕ ಶಾಖೆಗೆ ಸಲ್ಲಿಸಬೇಕು ಎಂದು ಎಲ್ಲ ಜಿಲ್ಲಾ ಉಪ ನಿರ್ದೇಶಕರಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರು (ಶೈಕ್ಷಣಿಕ) ತಿಳಿಸಿದ್ದಾರೆ.

ಪ್ರಜಾವಾಣಿ ವಿಶೇಷ

‘ಸೂರ್ಯ ನಮಸ್ಕಾರವು ಯೋಗಾಸನದ 10 ಭಂಗಿಗಳನ್ನು ಒಳಗೊಂಡಿದ್ದು, ವಿದ್ಯಾರ್ಥಿಗಳ ಆರೋಗ್ಯ ವೃದ್ಧಿಗೆ ಹಾಗೂ ಮನೋಬಲ ಹೆಚ್ಚಿಸುವುದಕ್ಕೆ ನೆರವಾಗಲಿದೆ. ಕೇಂದ್ರದ ಸೂಚನೆಯಂತೆ ಜ. 1ರಿಂದ ಫೆ. 7ರವರೆಗಿನ ಒಟ್ಟು 38 ದಿನಗಳ ಪೈಕಿ, 21 ದಿನ ಬೆಳಗ್ಗಿನ ಅಸೆಂಬ್ಲಿ ಅವಧಿಯಲ್ಲಿ ವಿದ್ಯಾರ್ಥಿಗಳು ಸೂರ್ಯ ನಮಸ್ಕಾರ ಮಾಡಬೇಕಿದೆ. ಪ್ರತಿ ದಿನ 13 ಸೂರ್ಯ ನಮಸ್ಕಾರಗಳಂತೆ ಒಟ್ಟು 273 (21 ದಿನಗಳಲ್ಲಿ) ಸೂರ್ಯ ನಮಸ್ಕಾರಗಳನ್ನು ಮಾಡಿದವರಿಗೆ ಇ-ಪ್ರಮಾಣಪತ್ರ ನೀಡುವುದಾಗಿ ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಫೆಡರೇಷನ್ ತಿಳಿಸಿದೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಉಪನ್ಯಾಸಕರ ಅಪಸ್ವರ: ಆದರೆ, ಪದವಿ ಪೂರ್ವ ಕಾಲೇಜುಗಳಲ್ಲಿ ‘ಸೂರ್ಯ ನಮಸ್ಕಾರ’ ಕಾರ್ಯಕ್ರಮಕ್ಕೆ ಉಪನ್ಯಾಸಕರ ವಲಯದಿಂದ ವಿರೋಧ ವ್ಯಕ್ತವಾಗಿದೆ.

10ನೇ ಪುಟ ನೋಡಿ

ಕೇಂದ್ರದ ಪತ್ರದಲ್ಲಿ ಏನಿದೆ?

‘ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಫೆಡರೇಷನ್ (ಎನ್‌ವೈಎಸ್‌ಎಫ್) ಡಿ. 9ರಂದು ಪತ್ರ ಬರೆದು 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ‘ಸೂರ್ಯ ನಮಸ್ಕಾರ’ ಕಾರ್ಯಕ್ರಮ ಆಯೋಜಿಸುವ ಬಗ್ಗೆ ತಿಳಿಸಿದೆ. 30 ರಾಜ್ಯಗಳಲ್ಲಿ 30 ಸಾವಿರ ಸಂಸ್ಥೆಗಳ 3 ಲಕ್ಷ ವಿದ್ಯಾರ್ಥಿಗಳನ್ನು ಸೇರಿಸಿ 75 ಕೋಟಿ ಸೂರ್ಯ ನಮಸ್ಕಾರ ಮಾಡಿಸಲು ಫೆಡರೇಷನ್ ನಿರ್ಧರಿಸಿದೆ.

ಜ 26ರಂದು ತ್ರಿವರ್ಣ ಧ್ವಜದ ಎದುರು ಸಂಗೀತದೊಂದಿಗೆ ಸೂರ್ಯ ನಮಸ್ಕಾರದ ಮೂಲಕ ತಾಯಿ ಭಾರತಾಂಬೆಗೆ ಭಾವಪೂರ್ಣ ನಮನ ಸಲ್ಲಿಸಬೇಕು ಎಂದೂ ಫೆಡರೇಷನ್ ತಿಳಿಸಿದೆ. ಹೀಗಾಗಿ, ನಿಮ್ಮ ವ್ಯಾಪ್ತಿಯಲ್ಲಿರುವ ಕಾಲೇಜುಗಳು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ನಿರ್ದೇಶನ ನೀಡುವ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡಬೇಕು’ ಎಂದು ಕೇಂದ್ರ ಶಿಕ್ಷಣ ಸಚಿವಾಲಯ ಸೂಚಿಸಿದೆ.

ಒಳ ಪುಟಗಳು

‘ಬ್ರಹ್ಮೋಸ್: ದಾಳಿ ಮಾಡುವ ಉದ್ದೇಶವಿಲ್ಲ’ 10

ಶಬರಿಮಲೆಯಲ್ಲಿ ಮಂಡಲ ಪೂಜೆ ಸಂಪನ್ನ 11

58 ನಗರ ಸ್ಥಳೀಯ ಸಂಸ್ಥೆ ಚುನಾವಣೆ: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರಸಭೆಗಳೂ ಸೇರಿದಂತೆ ಅವಧಿ ಪೂರ್ಣಗೊಂಡಿರುವ 58 ನಗರ ಸ್ಥಳೀಯ ಸಂಸ್ಥೆಗಳು ಹಾಗೂ 57 ಗ್ರಾಮ ಪಂಚಾಯಿತಿಗಳ ಸದಸ್ಯರ ಆಯ್ಕೆಗೆ ಸೋಮವಾರ ಮತದಾನ ನಡೆಯಲಿದೆ.

ವಿವಿಧ ಕಾರಣಗಳಿಂದ ತೆರವಾಗಿರುವ ನಗರ ಸ್ಥಳೀಯ ಸಂಸ್ಥೆಗಳ ಎಂಟು ಸ್ಥಾನಗಳು ಮತ್ತು ಹಲವು ಗ್ರಾಮ ಪಂಚಾಯಿತಿಗಳ 386 ಸದಸ್ಯ ಸ್ಥಾನಗಳಿಗೂ ಸೋಮವಾರ ಉಪ ಚುನಾವಣೆ ನಡೆಯಲಿದೆ.

ಚಿಕ್ಕಮಗಳೂರು, ತುಮಕೂರು ಜಿಲ್ಲೆಯ ಶಿರಾ, ಗದಗ- ಬೆಟಗೇರಿ, ಬೆಂಗಳೂರು ನಗರ ಜಿಲ್ಲೆಯ ಹೆಬ್ಬಗೋಡಿ, ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರಸಭೆಗಳು, ವಿವಿಧ ಜಿಲ್ಲೆಗಳ 19 ಪುರಸಭೆಗಳು ಮತ್ತು 34 ಪಟ್ಟಣ ಪಂಚಾಯಿತಿಗಳಿಗೆ ಚುನಾವಣೆ ನಡೆಯುತ್ತಿದೆ. 1,185 ವಾರ್ಡ್‌ಗಳಲ್ಲಿ 4,961 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಉಪ ಚುನಾವಣೆ ನಡೆಯುತ್ತಿರುವ ಎಂಟು ಕ್ಷೇತ್ರಗಳಲ್ಲಿ 37 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ನಗರ ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿಗಳ ಚುನಾವಣೆಗೆ ಸೋಮವಾರ ಬೆಳಿಗ್ಗೆ 7ರಿಂದ ಸಂಜೆ 5ರವರೆಗೂ ಮತದಾನ ನಡೆಯಲಿದೆ. ಅಗತ್ಯವಿದ್ದಲ್ಲಿ ಬುಧವಾರ (ಡಿಸೆಂಬರ್ 29) ಮರು ಮತದಾನ ನಡೆಯಲಿದೆ. ಗುರುವಾರ (ಡಿ.30) ಬೆಳಿಗ್ಗೆ 8 ರಿಂದ ಮತ ಎಣಿಕೆ ನಡೆಯಲಿದೆ.

ಚುನಾವಣೆ ನಡೆಯುತ್ತಿರುವ ಎಲ್ಲ ಜಿಲ್ಲೆಗಳಲ್ಲಿ ಆಯಾ ತಾಲ್ಲೂಕು ಕೇಂದ್ರಗಳ ಮಸ್ಟರಿಂಗ್ ಕೇಂದ್ರಗಳಿಂದ ಚುನಾವಣಾ ಸಿಬ್ಬಂದಿ ಭಾನುವಾರವೇ ಮತಗಟ್ಟೆಗಳಿಗೆ ತೆರಳಿದ್ದಾರೆ. ಮತಗಟ್ಟೆಗಳಿಗೆ ಬಿಗಿ ಭದ್ರತೆ ಒದಗಿಸಲಾಗಿದೆ.

ರಾಹುಲ್ ಶತಕ ಸಂಭ್ರಮ

ಸೆಂಚುರಿಯನ್: ಕನ್ನಡಿಗ ಕೆ.ಎಲ್. ರಾಹುಲ್ (ಬ್ಯಾಟಿಂಗ್ 122) ಶತಕದ ಬಲದಿಂದ ಭಾನುವಾರ ದಕ್ಷಿಣ ಆಫ್ರಿಕಾ ಎದುರು ಆರಂಭವಾದ ಟೆಸ್ಟ್‌ನಲ್ಲಿ ಭಾರತ ತಂಡವು ಉತ್ತಮ ಮೊತ್ತ ಗಳಿಸಿತು.

ಕೆ.ಎಲ್. ರಾಹುಲ್

ವಿರಾಟ್ ಕೊಹ್ಲಿ ಬಳಗವು ದಿನದಾಟದ ಮುಕ್ತಾಯಕ್ಕೆ 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 272 ರನ್ ಗಳಿಸಿದೆ. ರಾಹುಲ್ ಮತ್ತು ಮಯಂಕ್ ಅಗರವಾಲ್ (60; 123ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 117 ರನ್ ಗಳಿಸಿದರು. 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ: ಆರು ಬಾಲಕರು ವಶಕ್ಕೆ

ಧಾರವಾಡ: ಬಾಲಕಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ 17 ವರ್ಷದ ಆರು ಬಾಲಕರನ್ನು ಪೊಲೀಸರು ಭಾನುವಾರ ವಶಕ್ಕೆ ಪಡೆದು ವಿಚಾರಣೆ ಕೈಗೊಂಡಿದ್ದಾರೆ.

ಶನಿವಾರ ಈ ಘಟನೆಯ ಕುರಿತು ಬಾಲಕಿಯ ಪೋಷಕರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

‘ಖಾಸಗಿ ಶಾಲೆಯೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂಬ ದೂರು ದಾಖಲಾಗಿತ್ತು. ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರು ಮಂದಿ ಬಾಲಕರನ್ನು ವಶಕ್ಕೆ ಪಡೆದು ವಿಚಾರಿಸಲಾಯಿತು. ಬೇರೆ ಬೇರೆ ಸ್ಥಳಗಳಲ್ಲಿ ಮೂರು ತಿಂಗಳ ಕಾಲ ಈ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವುದಾಗಿ ಆರೋಪಿಗಳು ತಿಳಿಸಿದ್ದಾರೆ. ಇದಲ್ಲದೇ ಈ ಕೃತ್ಯವನ್ನು ಗೋಪ್ಯವಾಗಿಡಲು ಬಾಲಕಿಗೆ ಅವರು ಪ್ರಾಣ ಬೆದರಿಕೆ ಒಡ್ಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ. ಬಾಲಕಿಯನ್ನು ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ.

ವರ್ಣಭೇದ ವಿರೋಧಿ ಹೋರಾಟಗಾರ ಡೆಸ್ಮಂಡ್ ಟೂಟೂ ನಿಧನ



ಜೊಹಾನ್ಸ್‌ಬರ್ಗ್ (ಎಪಿ): ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಹೋರಾಡಿದ್ದ ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ, ನಿವೃತ್ತ ಆರ್ಚ್ ಬಿಷಪ್ ಡೆಸ್ಮಂಡ್ ಟೂಟೂ (90) ಅವರು ಭಾನುವಾರ ನಿಧನರಾದರು.

ಜೊಹಾನ್ಸ್‌ಬರ್ಗ್‌ನ ಮೊದಲ ಕಪ್ಪು ವರ್ಣೀಯ ಬಿಷಪ್ ಆದ ಟೂಟೂ ಅವರು, ಬಳಿಕ ಕೇಪ್‌ಟೌನ್‌ನ ಆರ್ಚ್‌ಬಿಷಪ್ ಆದರು. ದೇಶದಲ್ಲಿ ಮತ್ತು ಜಾಗತಿಕವಾಗಿ ಜನಾಂಗೀಯ ಅಸಮಾನತೆ ವಿರುದ್ಧ ಧ್ವನಿ ಎತ್ತಿದ್ದ ಅವರು, ಈ ಸಂಬಂಧ ಮೊನಚಿನ ಮಾತುಗಳ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದರು.

ಮೋದಿ ಕಂಬನಿ: ಟೂಟೂ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಕಂಬನಿ ಮಿಡಿದಿದ್ದಾರೆ. ‘ಜಾಗತಿಕವಾಗಿ ಅಸಂಖ್ಯಾತ ಜನರಿಗೆ ಮಾರ್ಗದರ್ಶಕರಾಗಿದ್ದ, ಮಾನವನ ಘನತೆ ಮತ್ತು ಸಮಾನತೆಗಾಗಿ ಒತ್ತು ನೀಡಿದ ಮಹಾನ್ ವ್ಯಕ್ತಿಯ ಸಾಧನೆ ಶಾಶ್ವತವಾಗಿ ಸ್ಮರಣೀಯವಾಗಿರುತ್ತದೆ’ ಎಂದಿದ್ದಾರೆ.

ನೆಟ್ ಪರೀಕ್ಷೆಯಲ್ಲಿ ಎಡವಟ್ಟು • ಪರೀಕ್ಷಾರ್ಥಿಗಳ ಪ್ರತಿಭಟನೆ

ಕನ್ನಡ ಐಚ್ಛಿಕ ಪತ್ರಿಕೆಯಲ್ಲಿ ‘ಹಿಂದಿ’ ಪ್ರಶ್ನೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಭಾನುವಾರ ನಡೆಸಿದ ‘ಯುಜಿಸಿ-ಎನ್‌ಇಟಿ’ ಕನ್ನಡ ಐಚ್ಛಿಕ ಭಾಷೆಯ ಪ್ರಶ್ನೆ ಪತ್ರಿಕೆಯ 100ರಲ್ಲಿ 90 ಪ್ರಶ್ನೆಗಳು ಹಿಂದಿ ಭಾಷೆಯಲ್ಲಿದ್ದ ಕಾರಣ ಗೊಂದಲಕ್ಕೊಳಗಾದ ಸಾವಿರಾರು ಅಭ್ಯರ್ಥಿಗಳು ಪರೀಕ್ಷೆಯನ್ನು ಅರ್ಧಕ್ಕೆ ಬಿಟ್ಟು ಹೊರನಡೆದರು.

ರಾಜ್ಯದಾದ್ಯಂತ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಕನ್ನಡ ಐಚ್ಛಿಕ ಭಾಷೆಯ ಪರೀಕ್ಷೆ ಬರೆದ ಅಭ್ಯರ್ಥಿಗಳು ಪರೀಕ್ಷಾ ಪ್ರಾಧಿಕಾರದ ಈ ಗಂಭೀರ ಲೋಪದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಪರೀಕ್ಷೆಗೆ ಮತ್ತೊಮ್ಮೆ ಅವಕಾಶ ಕಲ್ಪಿಸುವಂತೆ ಪರೀಕ್ಷಾರ್ಥಿಗಳು ಪಟ್ಟು ಹಿಡಿದರು. ಕೆಲವೆಡೆ ಪ್ರತಿಭಟನೆಯನ್ನು ನಡೆಸಿದರು.

‘ಪ್ರಶ್ನೆ ಪತ್ರಿಕೆಯಲ್ಲಿ 10 ಪ್ರಶ್ನೆಗಳು ಮಾತ್ರಗಳು ಕನ್ನಡದಲ್ಲಿದ್ದವು. ಉಳಿದದ್ದು ಹಿಂದಿ ಭಾಷೆಯಲ್ಲಿದ್ದವು’ ಎಂದು ವಿದ್ಯಾರ್ಥಿಗಳು ಆಕ್ರೋಶ ಹೊರಹಾಕಿದರು.

‘ಎರಡು ವರ್ಷಗಳಿಂದ ಪರೀಕ್ಷೆಗಾಗಿ ನಡೆಸಿದ್ದೆ. ಪರೀಕ್ಷಾ ಏಜೆನ್ಸಿಯ ತಾಂತ್ರಿಕ ಲೋಪದಿಂದಾಗಿ ಸಾವಿರಾರು ಮಂದಿ ಶಿಕ್ಷೆ ಅನುಭವಿಸುವಂತಾಗಿದೆ. ಪರೀಕ್ಷಾ ಕೇಂದ್ರದಲ್ಲಿ ನೋಡಲ್ ಅಧಿಕಾರಿಗಳೇ ಇರಲಿಲ್ಲ. ಅಲ್ಲಿದ್ದ ಸಿಬ್ಬಂದಿಗೂ ಸರಿಯಾದ ಮಾಹಿತಿ ಇರಲಿಲ್ಲ. ಆನ್‌ಲೈನ್ ಮೂಲಕ ಪರೀಕ್ಷೆ ಆಯೋಜಿಸುತ್ತಿರುವುದರಿಂದ ತಾಂತ್ರಿಕ ದೋಷಗಳು ಹೆಚ್ಚಾಗಿವೆ. ಮೊದಲಿನಂತೆ ಲಿಖಿತ ಪರೀಕ್ಷೆ ನಡೆಸುವುದೇ ಒಳ್ಳೆಯದು’ ಎಂದು ಬೆಂಗಳೂರಿನಲ್ಲಿ ಪರೀಕ್ಷೆಗೆ ಹಾಜರಾಗಿದ್ದ ಆರ್.ಅರ್ಚನಾ ಅಳಲು ತೋಡಿಕೊಂಡರು.

ಅರ್ಧ ಗಂಟೆ ತಡ: ಧಾರವಾಡದಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಬೆಳಿಗ್ಗೆ 9ಕ್ಕೆ ಆರಂಭವಾಗಬೇಕಿದ್ದ ಆನ್‌ಲೈನ್ ಪರೀಕ್ಷೆ ತಾಂತ್ರಿಕ ತೊಂದರೆಯಿಂದ ಅರ್ಧ ಗಂಟೆ ತಡವಾಗಿ ಆರಂಭಗೊಂಡಿತು. ಜತೆಗೆ ಬೇರೆ ಬೇರೆ ಕೊಠಡಿಗಳಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಪ್ರಶ್ನೆಗಳು ಪುನರಾವರ್ತನೆಗೊಂಡಿದ್ದವು. ಹೀಗಾಗಿ ಮತ್ತೊಮ್ಮೆ ಪರೀಕ್ಷೆ ನಡೆಸುವಂತೆ ವಿದ್ಯಾರ್ಥಿಗಳು ಪಟ್ಟು ಹಿಡಿದರು.

‘ವಿಶ್ವವಿದ್ಯಾಲಯ ಅನುದಾನ ಆಯೋಗದ ತಾಂತ್ರಿಕ ದೋಷದಿಂದ ತೊಂದರೆ ಉಂಟಾಗಿದೆ’ ಎಂದು ಪರೀಕ್ಷಾ ಕೇಂದ್ರದ ಸಿಬ್ಬಂದಿ ಸಮಜಾಯಿಷಿ ನೀಡಿದರು. ಜಮಖಂಡಿ, ಕೊಪ್ಪಳ, ಬಾಗಲಕೋಟೆ ಸೇರಿದಂತೆ ವಿವಿಧ ಜಿಲ್ಲೆಗಳಿಂದ 80ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಪರೀಕ್ಷಾರ್ಥಿಗಳ ಪ್ರತಿಭಟನೆ: ತುಮಕೂರಿನ ಸಿದ್ಧಗಂಗಾ ತಾಂತ್ರಿಕ ವಿದ್ಯಾಲಯದ ಕೇಂದ್ರದಲ್ಲಿ ನಡೆದ ಪರೀಕ್ಷೆಯಲ್ಲಿ 97 ಮಂದಿ ಹಾಜರಾಗಿದ್ದರು. ಸಾಮಾನ್ಯ ಜ್ಞಾನ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಯಾವುದೇ ದೋಷ ಕಂಡುಬಂದಿಲ್ಲ. ಆದರೆ ಐಚ್ಛಿಕ ಕನ್ನಡ ವಿಷಯದ ಪ್ರಶ್ನೆಪತ್ರಿಕೆಯಲ್ಲಿ ಪ್ರಶ್ನೆಗಳು ಹಿಂದಿ ಭಾಷೆಯಲ್ಲಿ ಇದ್ದದ್ದನ್ನು ಕಂಡು ವಿದ್ಯಾರ್ಥಿಗಳಿಗೆ ದಿಕ್ಕು ತೋಚದಂತಾಗಿತ್ತು. ತಕ್ಷಣವೇ ಪರೀಕ್ಷೆಯನ್ನು ಬಹಿಷ್ಕರಿಸಿ ಮರುಪರೀಕ್ಷೆ ನಡೆಸುವಂತೆ ಅವರು ಪ್ರತಿಭಟನೆ ನಡೆಸಿದರು.

ಅಸಹಾಯಕರಾದ ಮೇಲ್ವಿಚಾರಕರು: ಬಳ್ಳಾರಿಯಲ್ಲಿ ಪರೀಕ್ಷೆ ಬರೆಯಲು ಬೆಂಗಳೂರಿನಿಂದ ಬಂದಿದ್ದ ಪರೀಕ್ಷಾರ್ಥಿ ಜ್ಯೋತಿ ಮಾತನಾಡಿ, ‘ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ 100 ಪ್ರಶ್ನೆಗಳಿಗೆ ಉತ್ತರಿಸಬೇಕಿತ್ತು. ಆದರೆ, 11 ನೇ ಪ್ರಶ್ನೆಯಿಂದ ಹಿಂದಿ ಭಾಷೆಯಲ್ಲಿ ಪ್ರಶ್ನೆ ಡೌನ್‌ಲೋಡ್ ಆರಂಭವಾಯಿತು. ತಕ್ಷಣ ಮೇಲ್ವಿಚಾರಕರ ಗಮನಕ್ಕೆ ತರಲಾಯಿತು. ‘ಸ್ವಲ್ಪ ಸಮಯ ನಿರೀಕ್ಷಿಸಿ’ ಎಂದು ಅಸಹಾಕತೆ ವ್ಯಕ್ತಪಡಿಸಿದರು. ಒಂದು ಗಂಟೆಯಾದರೂ ಈ ಕುರಿತು ಯಾವುದೇ ಉತ್ತರ ದೊರೆಯಲಿಲ್ಲ. ನೆಟ್ ಪರೀಕ್ಷೆ ಈ ರೀತಿ ನಡೆಯುತ್ತದೆ ಎಂದು ಊಹಿಸಿರಲಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಕೆಲವರು ಪ್ರಶ್ನೆಗಳಿಗೆ ಉತ್ತರಿಸಿದ್ದರೂ ಆನ್‌ಲೈನ್‌ನಲ್ಲಿ ಸಬ್‌ಮಿಟ್ ಆಗದೆ ಗೊಂದಲಕ್ಕೆ ಒಳಗಾದರು ಎಂದು ಪರೀಕ್ಷಾ ಕೊಠಡಿಯಿಂದ ಹೊರಬಂದ ಪರೀಕ್ಷಾರ್ಥಿಗಳು ಮಾಹಿತಿ ನೀಡಿದರು.

ತುಮಕೂರಿನಲ್ಲಿ ‘ನೆಟ್’ ಪರೀಕ್ಷೆ ಬಹಿಷ್ಕರಿಸಿ ಪ್ರತಿಭಟಿಸಿದ ಪರೀಕ್ಷಾರ್ಥಿಗಳು

‘ಮರು ಪರೀಕ್ಷೆ ನಡೆಸುತ್ತೇವೆ’

ಯುಜಿಸಿ ‘ನೆಟ್’ ಕನ್ನಡ ಐಚ್ಛಿಕ ಪರೀಕ್ಷೆಯಲ್ಲಿ ಉಂಟಾದ ಗೊಂದಲದ ಬಗ್ಗೆ ವೆಬ್‌ಸೈಟ್‌ನಲ್ಲಿ ಪ್ರತಿಕ್ರಿಯಿಸಿರುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ‘ಮುಂದಿನ ದಿನಗಳಲ್ಲಿ ದಿನಾಂಕ ನಿಗದಿಪಡಿಸಿ ಮತ್ತೆ ಪರೀಕ್ಷೆ ನಡೆಸಲಾಗುವುದು’ ಎಂದು ತಿಳಿಸಿದೆ.

ಇಂಗ್ಲೆಂಡ್‌ನಿಂದ ಬಂದ 8 ಮಂದಿಗೆ ಸೋಂಕು

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಡಿ. 26ರಂದು ಮುಂಜಾನೆ ಇಂಗ್ಲೆಂಡ್‌ನಿಂದ ಬಂದಿರುವ ಪ್ರಯಾಣಿಕರ ಪೈಕಿ 8 ಮಂದಿಗೆ ಕೋವಿಡ್ ಸೋಂಕು ದೃಢಪಟ್ಟಿದೆ ಎಂದು ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

28 ವರ್ಷದ ಮಹಿಳೆ, 28 ವರ್ಷದ ಪುರುಷ, 45 ವರ್ಷದ ಪುರುಷ, 11 ವರ್ಷದ ಬಾಲಕಿ, 12 ವರ್ಷದ ಬಾಲಕಿ, 23 ವರ್ಷದ ಯುವಕ, 33 ವರ್ಷದ ಪುರುಷ ಮತ್ತು 25 ವರ್ಷದ ಪುರುಷನಿಗೆ ಸೋಂಕು ದೃಢಪಟ್ಟಿದ್ದು, ಎಲ್ಲಾ ಸೋಂಕಿತರನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದಿದ್ದಾರೆ.

CONNECT

Teju

Mango Pickle | Mixed Pickle | Lime Pickle

ಸುಪ್ರಸಿದ್ಧ ತೇಜು ಮಸಾಲ ಕಂಪನಿಗೆ
ಡಿಸ್ಟ್ರಿಬ್ಯೂಟರ್ ಮತ್ತು ಸೇಲ್ಸ್ ರೆಪ್ರೆಸೆಂಟೇಟಿವ್ಸ್
ಬೆಂಗಳೂರು ನಗರ ಮತ್ತು ಕರ್ನಾಟಕ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಿಗೆ ಬೇಕಾಗಿದ್ದಾರೆ
ನಿಮ್ಮ ರಿಸ್ಯೂಮ್ ಮತ್ತು ಫೋಟೊದೊಂದಿಗೆ ಬನ್ನಿರಿ
2 ರಿಂದ 3 ವರ್ಷ ಅನುಭವವಿರಬೇಕು,
ಉತ್ತಮ ಸಂಬಳದೊಂದಿಗೆ ESI, PF ಸೌಲಭ್ಯವಿದೆ.
J.S. FOODS
Venue: #2, Srigandakaval, sunkadakatte, Bangalore-91
Email: Jsfoods@tejumasala.com
Mahadev ASM - 80507 00256 / Office - 91086 29999

ಬೆಂಗಳೂರಿನ ಬನಶಂಕರಿಯಲ್ಲಿ ಮಾರಾಟ
ಕಾಂಚೀಪುರಂ
ಎ.ಜಿ. ಬಾಬು ಸಾಹ್
ರೇಷ್ಮೆ ಸೀರೆ ವ್ಯಾಪಾರಿಗಳು
ಮೇರಿ ಕ್ರಿಸ್‌ಮಸ್, ಹೊಸ ವರ್ಷ ಮತ್ತು ಸಂಕ್ರಾಂತಿ ಹಬ್ಬದ ಮಾರಾಟ
ಶ್ರೀ ಹರಿ ಕಲ್ಯಾಣ ಮಂಟಪ
ನಂ. 5-136/17, 30ನೇ ಮೈನ್, ಬನಶಂಕರಿ 3ನೇ ಹಂತ, ಬೆಂಗಳೂರು-560 085. ಮೊ. : 6385697571
ದಿನಾಂಕ: 26,27,28,29 & 30ನೇ ಡಿಸೆಂಬರ್ 2021
ಕೊನೆಯ ದಿನ ಸಂಜೆ 5.00 ಗಂಟೆಗೆ ಮುಕ್ತಾಯ
ಬೆಳಿಗ್ಗೆ 11.00 ರಿಂದ ರಾತ್ರಿ 7.00 ರವರೆಗೆ
ಯಾವುದೇ ವಿನಿಮಯವಿಲ್ಲ, ಹಿಂತಿರುಗಿಸುವುದಿಲ್ಲ
ಮಾಸ್ಕ್ ಕಡ್ಡಾಯ
ಎ.ಜಿ. ಬಾಬು ಸಾಹ್ YouTube

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in. ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ವಿನಾಯಕ ಬಡಾವಣೆಯಲ್ಲಿ ರಸ್ತೆ ಉಬ್ಬು

ರಸ್ತೆ ಉಬ್ಬನ್ನು ತಗ್ಗಿಸಿ

ವಿಜಯನಗರದ ವಿನಾಯಕ ಬಡಾವಣೆಯ 4ನೇ ಮುಖ್ಯರಸ್ತೆ ಮಾರ್ಗದಲ್ಲಿ ಈ ಹಿಂದೆ ಚರಂಡಿ ಕಾಮಗಾರಿ ನಡೆದಿತ್ತು. ಚರಂಡಿ ಮಾರ್ಗವನ್ನು ಎತ್ತರಿಸಿರುವುದರಿಂದ ರಸ್ತೆಯಲ್ಲಿ ಉಬ್ಬು ನಿರ್ಮಾಣವಾಗಿ, ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗಿದೆ. ಬೈಕ್ ಸವಾರರು ರಸ್ತೆಯಲ್ಲಿ ಸಾಗುವಾಗ ಬಿದ್ದಿರುವ ಘಟನೆಗಳೂ ಸಾಕಷ್ಟಿವೆ. ಇದೇ ರಸ್ತೆಯಲ್ಲಿ ಶಾಲೆಯೂ ಇದ್ದು, ಮಕ್ಕಳ ಸಂಚಾರಕ್ಕೂ ತೊಂದರೆಯಾಗಿದೆ. ಉಬ್ಬನ್ನು ತಗ್ಗಿಸುವುದು ಅಥವಾ ರಸ್ತೆಯನ್ನು ಆ ಮಟ್ಟಕ್ಕೆ ಎತ್ತರಿಸಿದರೆ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ.

ಕೃಷ್ಣಮೂರ್ತಿ, ಸ್ಥಳೀಯ



ಅಂಜನಾಪುರ ಬಿಡಿಎ ಬಡಾವಣೆ ಸಂಪರ್ಕಿಸುವ ಡಾಂಬರು ಇಲ್ಲದ ರಸ್ತೆ

ಮಣ್ಣಿನ ರಸ್ತೆಯಲ್ಲಿ ಪರದಾಟ

ಅಂಜನಾಪುರ ಬಿಡಿಎ ಬಡಾವಣೆಯಿಂದ ವೈಭವ ಬಡಾವಣೆಗೆ ಹೋಗುವ ರಸ್ತೆಯು ತಗ್ಗು ಹಾಗೂ ಇಳಿಜಾರಿನಿಂದ ಕೂಡಿದೆ. ಡಾಂಬರು ಕಾಣದ ಈ ಮಣ್ಣಿನ ರಸ್ತೆಯಲ್ಲಿ ಸಂಚರಿಸುವುದೇ ವಾಹನ ಸವಾರರಿಗೆ ಸವಾಲು. ವಾಹನಗಳ ಏಕಮುಖ ಸಂಚಾರಕ್ಕೆ ಮಾತ್ರ ಈ ಕಿರಿದಾದ ರಸ್ತೆ ಯೋಗ್ಯವಾಗಿದ್ದು, ದೊಡ್ಡ ವಾಹನಗಳು ಬಂದರೆ ಎದುರಿನಿಂದ ಬೇರೆ ವಾಹನಗಳು ಬರುವಂತಿಲ್ಲ. ಈ ಪ್ರದೇಶದಲ್ಲಿರುವ ನಿವಾಸಿಗಳು ಅನಿವಾರ್ಯವಾಗಿ ಇದೇ ರಸ್ತೆ ಬಳಸುತ್ತಾರೆ.

ಅಪಾರ್ಟ್‌ಮೆಂಟ್ ಸಮುಚ್ಚಯಗಳು ಹಾಗೂ ಶಿಕ್ಷಣ ಸಂಸ್ಥೆಗಳನ್ನು ಸಂಪರ್ಕಿಸುವ ಈ ಹದಗೆಟ್ಟ ರಸ್ತೆಯಲ್ಲೇ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇಲ್ಲಿ ಉತ್ತಮವಾದ ರಸ್ತೆ ನಿರ್ಮಿಸಿಕೊಟ್ಟರೆ, ವಾಹನಗಳ ಸಂಚಾರಕ್ಕೆ ಅನುಕೂಲವಾಗಲಿದೆ.

ಸಿದ್ರಾಮಪ್ಪ ದಿನ್ನಿ, ಅಂಜನಾಪುರ ಬಿಡಿಎ ಬಡಾವಣೆ

ಕಸದ ತೊಟ್ಟಿಯಾದ ರಸ್ತೆಗಳು

ಇಂದಿರಾನಗರದ ಬಿಡಿಎ ಸಂಕೀರ್ಣ, ಎಲ್‌ಐಸಿ ಕಚೇರಿ ಸುತ್ತ-ಮುತ್ತಲಿನ ರಸ್ತೆ ಹಾಗೂ ಬಸ್ ನಿಲ್ದಾಣದ ಹತ್ತಿರದ ರಸ್ತೆಗಳೆಲ್ಲ ಹದಗೆಟ್ಟಿವೆ. ಇತ್ತೀಚಿನ ವರ್ಷಗಳಲ್ಲಿ ಇಲ್ಲಿನ ರಸ್ತೆಗಳೆಲ್ಲ ಕಸ ವಿಲೇವಾರಿ ಮಾಡುವ ತಾಣಗಳಾಗಿ ಮಾರ್ಪಟ್ಟಿವೆ. ಹಳೆಯ ಹಾಗೂ ಕೆಟ್ಟು ನಿಂತ ವಾಹನಗಳು, ಕಟ್ಟಡ ಅವಶೇಷಗಳನ್ನೂ ಇದೇ ಜಾಗದಲ್ಲಿ ಹಾಕಲಾಗುತ್ತಿದೆ. ಇದರಿಂದ ಈ ರಸ್ತೆಯಲ್ಲಿ ಸಂಚರಿಸಲು ಜನ ಹಿಂದೇಟು ಹಾಕುತ್ತಿದ್ದಾರೆ. ಇಲ್ಲಿನ ದುರ್ನಾತದಿಂದ ಮೂಗು ಮುಚ್ಚಿಕೊಂಡೇ ಕಚೇರಿಗಳಿಗೆ ಹೋಗಬೇಕಾಗಿದೆ. ಈ ರಸ್ತೆಯಲ್ಲಿ ಕಸ ಹಾಕುವುದನ್ನು ತಡೆದು, ಮುಕ್ತ ಸಂಚಾರಕ್ಕೆ ಅನುವು ಮಾಡಿಕೊಡಿ.

ಗೋಪಾಲ್, ಇಂದಿರಾನಗರ

ಇಂದಿರಾನಗರದ ಬಿಡಿಎ ಸಂಕೀರ್ಣ ಸಮೀಪದ ರಸ್ತೆಯಲ್ಲಿ ಕಸ, ಹಳೆಯ ವಾಹನಗಳು ಹಾಗೂ ಕಟ್ಟಡ ಅವಶೇಷಗಳ ವಿಲೇವಾರಿ ಮಾಡಿರುವುದು.

ಕಳಪೆ ಕಾಮಗಾರಿ:ಕಿತ್ತು ಹೋದ ಡಾಂಬರು

ಸೋಮಶೇಖರ್ ಬಡಾವಣೆ ಹಾಗೂ ರಾಜೀವ್‌ಗಾಂಧಿ ನಗರ ನಡುವಿನ ಹದಗೆಟ್ಟ ರಸ್ತೆ

ಬ್ಯಾಟರಾಯನಪುರ ಕ್ಷೇತ್ರದ ಸೋಮಶೇಖರ ಬಡಾವಣೆ ಹಾಗೂ ರಾಜೀವ್‌ಗಾಂಧಿ ನಗರದ ನಡುವಿನ ಹೊಸ ರಸ್ತೆಗೆ ಡಾಂಬರು ಹಾಕಲಾಗಿತ್ತು. ಕೇವಲ ಎರಡೇ ತಿಂಗಳಲ್ಲಿ ಮಳೆಯ ರಭಸಕ್ಕೆ ರಸ್ತೆ ಹಾಳಾಗಿದ್ದು, ತುಂಬಾ ಕಳಪೆಯಾಗಿ ಈ ಕಾಮಗಾರಿ ನಡೆಸಲಾಗಿದೆ. ಹೆಸರಿಗೆ ಮಾತ್ರ ಡಾಂಬರು ಹಾಕಿ ಹಣ ದೋಚಿದ್ದಾರೆ. ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೆ, ಅದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಒಬ್ಬರ ಮೇಲೊಬ್ಬರು ದೂಷಿಸುತ್ತಿದ್ದಾರೆ. ಇವರ ಜಗಳ ಏನೇ ಇದ್ದರೂ ಸಮಸ್ಯೆಯಾಗಿರುವುದು ಈ ರಸ್ತೆಯಲ್ಲಿ ಸಂಚರಿಸುವ ಜನರಿಗೆ ಮಾತ್ರ. ಸಂಬಂಧಪಟ್ಟವರು ಈ ರಸ್ತೆಯನ್ನು ಶೀಘ್ರವಾಗಿ ಸರಿಪಡಿಸಬೇಕು. ಈ ಕಳಪೆ ಕಾಮಗಾರಿ ನಡೆಸಿರುವ ಗುತ್ತಿಗೆದಾರನ ಮೇಲೂ ಕ್ರಮ ಕೈಗೊಳ್ಳಬೇಕು.

ಅಯುಬ್, ಸ್ಥಳೀಯ

ಬೈರಸಂದ್ರದಲ್ಲಿ ಬಿಡಾಡಿ ದನಗಳಿಂದ ವಾಹನ ಸಂಚಾರಕ್ಕೆ ಸಮಸ್ಯೆಯಾಗಿರುವುದು

ಬಿಡಾಡಿ ದನಗಳ ಹಾವಳಿ ತಪ್ಪಿಸಿ

ಜಯನಗರ ಮೊದಲನೇ ಬ್ಲಾಕ್‌ನ ಬೈರಸಂದ್ರದಲ್ಲಿ ಬಿಡಾಡಿ ದನಗಳಿಂದ ಹೆಚ್ಚು ತೊಂದರೆಯಾಗುತ್ತಿದೆ. ಗುಂಪಾಗಿ ಬರುವ ದನಗಳು ವಾಹನಗಳ ಸಂಚಾರಕ್ಕೆ ಅವಕಾಶ ನೀಡುವುದಿಲ್ಲ. ಶಬ್ದ ಮಾಡಿದರೂ ಪಕ್ಕಕ್ಕೆ ಸರಿಯುವುದಿಲ್ಲ. ಇದು ಕೇವಲ ಬೈರಸಂದ್ರದಲ್ಲಿನ ಸಮಸ್ಯೆ ಅಲ್ಲ. ನಗರದ ಬಹುತೇಕ ಬಡಾವಣೆಗಳಲ್ಲೂ ಈ ಸಮಸ್ಯೆ ಮಿತಿಮೀರಿದೆ.

ದನಗಳ ಮಾಲೀಕರು ಹಾಗೂ ಪಾಲಿಕೆಯವರ ಬೇಜವಾಬ್ದಾರಿತನದಿಂದ ದನಗಳು ಎಲ್ಲೆಂದರಲ್ಲಿ ಅಡ್ಡಾದಿಡ್ಡಿಯಾಗಿ ಸಂಚರಿಸಿ, ಸಾರ್ವಜನಿಕರಿಗೆ ತೊಂದರೆ ಮಾಡುತ್ತಿವೆ. ಮೊನ್ನೆ ತುರ್ತಾಗಿ ತೆರಳಬೇಕಿದ್ದ ಆಂಬುಲೆನ್ಸ್‌ಗೂ ದನಗಳ ಹಿಂಡು ದಾರಿ ಬಿಡಲಿಲ್ಲ. ಪಾಲಿಕೆ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಿ, ದನಗಳು ಅಡ್ಡಾದಿಡ್ಡಿಯಾಗಿ ಸಂಚರಿಸದಂತೆ ಕ್ರಮ ಕೈಗೊಳ್ಳಬೇಕು. ಅವುಗಳನ್ನು ರಸ್ತೆಗೆ ಬಿಡದಂತೆ ಮಾಲೀಕರಿಗೂ ಸೂಚಿಸಬೇಕು.

ಕಾರ್ತಿಕೇಯನ್, ಬೈರಸಂದ್ರ ನಿವಾಸಿ

ರಂಗಭೂಮಿ, ಸಾಹಿತ್ಯ ವಲಯದ ಪ್ರಮುಖರ ಆಗ್ರಹ

‘ಮೈಸೂರು ರಂಗಾಯಣ ನಿರ್ದೇಶಕರನ್ನು ವಜಾಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನಸಂಸ್ಕೃತಿಯ ಪ್ರತೀಕವಾಗಿ ಉಳಿಯಬೇಕಿರುವ ರಂಗಾಯಣವನ್ನು ಕಲುಷಿತಗೊಳಿಸಿ, ಬಲಪಂಥೀಯ ವಿಚಾರಗಳನ್ನು ಹೇರುತ್ತಿರುವ ಅಡ್ಡಂಡ ಸಿ. ಕಾರ್ಯಪ್ಪ ಅವರನ್ನು ಕೂಡಲೇ ವಜಾ ಮಾಡಬೇಕು’ ಎಂದು ರಂಗಭೂಮಿ, ಸಾಹಿತ್ಯ ವಲಯದ ಪ್ರಮುಖರು ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಮೈಸೂರು ರಂಗಾಯಣದಲ್ಲಿನ ವಿದ್ಯಮಾನಗಳ ಕುರಿತಂತೆ ಜಂಟಿ ಹೇಳಿಕೆ ನೀಡಿದ್ದು, ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ರಾಜೇಂದ್ರ ಚೆನ್ನಿ, ಪುರುಷೋತ್ತಮ ಬಿಳಿಮಲೆ, ಸಿ. ಬಸವಲಿಂಗಯ್ಯ, ಚಿದಂಬರ ರಾವ್ ಜಂಬೆ, ಎಚ್. ಜನಾರ್ದನ್, ಭಾಗೀರಥಿ ಬಾಯಿ ಕದಂ, ಪ್ರೊ.ಬಿ.ಕೆ. ಚಂದ್ರಶೇಖರ್, ಪ್ರೊ.ಆರ್.ಕೆ. ಹುಡ್ಗಿ, ಸಿ.ಕೆ. ಗುಂಡಣ್ಣ, ನಾ. ದಿವಾಕರ್, ನೀಲಾ ಕೆ., ಜೆ. ಲೋಕೇಶ್, ವಿಮಲಾ ಕೆ.ಎಸ್. ಸೇರಿದಂತೆ 57 ಮಂದಿ ರಂಗಾಯಣ ಉಳಿಸಲು ಕ್ರಮಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

‘ರಂಗ ದಿಗ್ಗಜ ಬಿ.ವಿ.ಕಾರಂತರ ಕನಸಿನ ಕೂಸಾದ ರಂಗಾಯಣ, ತನ್ನದೆ ಆದ ಹಿರಿಮೆ ಹೊಂದಿದೆ. ಅವರನ್ನೂ ಒಳಗೊಂಡಂತೆ ಈವರೆಗೆ ನೇಮಕಗೊಂಡ ಯಾವ ನಿರ್ದೇಶಕರೂ ತಮ್ಮ ವೈಯಕ್ತಿಕ ನಂಬಿಕೆ, ಸಿದ್ಧಾಂತಗಳನ್ನು ರಂಗಾಯಣದ ಕಾರ್ಯಚಟುವಟಿಕೆಗಳ ಜೊತೆಗೆ ಬೆಸೆದಿರಲಿಲ್ಲ. ಆದರೆ, ಅಡ್ಡಂಡ ಕಾರ್ಯಪ್ಪ ಅವರು ನಿರ್ದೇಶಕರಾದಾಗಿನಿಂದ ಮೈಸೂರು ರಂಗಾಯಣವು ಒಂದಲ್ಲ ಒಂದು ಕಾರಣದಿಂದ ವಿವಾದದ ಕೇಂದ್ರವಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ರಂಗಾಯಣದ ಬಹುರೂಪಿ ನಾಟಕೋತ್ಸವಕ್ಕೆ ರಂಗಭೂಮಿಗೆ ಸಂಬಂಧವಿಲ್ಲದ ಚಕ್ರವರ್ತಿ ಸೂಲಿಬೆಲೆ ಮತ್ತು ಮಾಳವಿಕಾ ಅವರನ್ನು ಆಹ್ವಾನಿಸಲಾಯಿತು. ರಂಗಾಯಣವನ್ನು ಕೋಮುವಾದಿ ರಾಜಕೀಯಕ್ಕೆ ಬಳಸುವುದು ನಿರ್ದೇಶಕರ ಉದ್ದೇಶವಾಗಿತ್ತು. ಇದನ್ನು ಪ್ರಶ್ನಿಸಿದವರಿಗೆ ಉದ್ಧಟತನದ ಉತ್ತರ ಕೊಟ್ಟರು. ರಂಗಾಯಣದಲ್ಲಿ ಆರೆಸ್ಸೆಸ್‌ನ ಕಾರ್ಯಸೂಚಿಗಳ ಜಾರಿಗೆ ವಿರೋಧ ವ್ಯಕ್ತಪಡಿಸಿದವರನ್ನು ಸಾರ್ವಜನಿಕವಾಗಿ ನಿಂದಿಸತೊಡಗಿದರು. ಅಲ್ಲಿನ ಬೆಳವಣಿಗೆಗಳ ಬಗ್ಗೆ ಮೈಸೂರಿನ ರಂಗಕರ್ಮಿಗಳು ಸಿಡಿದೆದ್ದು, ಚಳವಳಿ ಹಮ್ಮಿಕೊಂಡಿದ್ದಾರೆ. ಇದಕ್ಕೆ ನಮ್ಮ ಬೆಂಬಲವಿದೆ’ ಎಂದು ತಿಳಿಸಿದ್ದಾರೆ.

‘ಜಾತ್ಯತೀತತೆ ಹಾಗೂ ಧರ್ಮ ನಿರಪೇಕ್ಷತೆ ರಂಗಾಯಣದ ಆಶಯ. ರಂಗಭೂಮಿ ವಿಶ್ವ ಮಾನವ ತತ್ವದ ಆದರ್ಶ ಹೊಂದಿದೆ. ಅದನ್ನು ಅಲ್ಪ ಮಾನವತ್ವದೆಡೆಗೆ ಒಯ್ಯಬಾರದು. ಬಹುತ್ವ ಭಾರತವನ್ನು ಗೌರವಿಸುವುದು ಒಬ್ಬ ಯೋಗ್ಯ ರಂಗಕರ್ಮಿಯ ಹೊಣೆಗಾರಿಕೆ. ಇದಕ್ಕೆ ವಿರುದ್ಧವಾಗಿ ನಡೆದುಕೊಂಡಿರುವ ಕಾರ್ಯಪ್ಪ ಅವರನ್ನು ಹುದ್ದೆಯಿಂದ ವಜಾಗೊಳಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಭಾವಗೀತೆ ಶ್ರೀಮಂತಗೊಳಿಸಿದ ಲಕ್ಷ್ಮೀನಾರಾಯಣ ಭಟ್ಟ: ಮೀರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಭಾವಗೀತಾ ಲೋಕಕ್ಕೆ ಮಹತ್ತರ ಕೊಡುಗೆ ನೀಡಿರುವ ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ನವ್ಯಕಾವ್ಯದ ಪ್ರಭಾವದಿಂದ ಭಾವಗೀತೆಗಳು ರಚನೆಯಾಗದಿದ್ದ ಕಾಲದಲ್ಲಿ ಅವುಗಳನ್ನು ರಚಿಸಿ ಮರುಜೀವ ನೀಡಿದರು’ ಎಂದು ಲೇಖಕಿ ಎಲ್.ಜಿ.ಮೀರಾ ಹೇಳಿದರು.

ಅವರು ಕರ್ನಾಟಕ ಸುಗಮ ಸಂಗೀತ ಪರಿಷತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಭಾನುವಾರ ನಗರದ ಅಶ್ವತ್ಥ್ ಕಲಾಭವನದಲ್ಲಿ ಹಮ್ಮಿಕೊಂಡಿದ್ದ ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರಿಗೆ ‘ಗೀತ ಗೌರವ’ ಕಾರ್ಯಕ್ರಮದಲ್ಲಿ ನುಡಿನಮನ ಸಲ್ಲಿಸಿದರು.

‘ಅನೇಕ ಸುಗಮ ಸಂಗೀತ ಕಲಾವಿದರನ್ನು ಬೆಳೆಸಿದ ಅವರು, ನಾಡಿಗೆ ಸಂತ ಶಿಶುನಾಳ ಷರೀಫರನ್ನು ಪರಿಚಯಿಸುವ ಮೂಲಕ ಷರೀಫ ಭಟ್ಟ ಎಂದು ಪ್ರಸಿದ್ಧರಾಗಿದ್ದಾರೆ. ಮಕ್ಕಳ ಸಾಹಿತ್ಯದಿಂದ ಹಿಡಿದು ಅನೇಕ ವಿಮರ್ಶಾತ್ಮಕ, ಸಂಶೋಧನಾ ಸಾಹಿತ್ಯ ಕೃತಿಗಳನ್ನು ಬರೆದ ಅವರು ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ’ ಎಂದರು.

ಕಾರ್ಯಕ್ರಮದಲ್ಲಿ (ಎಡದಿಂದ) ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಅವರು ಎನ್‌.ಎಸ್‌. ಲಕ್ಷ್ಮೀನಾರಾಯಣ ಭಟ್ಟ ಅವರ ಪತ್ನಿ ಜ್ಯೋತಿ ಜತೆಗೆ ಚರ್ಚಿಸಿದರು. ಲೇಖಕಿ ಎಲ್‌.ಜಿ ಮೀರಾ, ಸಾಹಿತಿ ಹಂಪ ನಾಗರಾಜಯ್ಯ ಮತ್ತು ಜಿ.ಎನ್ ರಂಗನಾಥ್ ರಾವ್ ಇದ್ದಾರೆ. ಪ್ರಜಾವಾಣಿ ಚಿತ್ರ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಡಾ.ಹಂಪ ನಾಗರಾಜಯ್ಯ, ‘60ಕ್ಕೂ ಹೆಚ್ಚು ವರ್ಷಗಳಿಂದ ಮಿತ್ರರಾಗಿದ್ದ ಭಟ್ಟರೊಂದಿಗೆ ಕಳೆದ ಕ್ಷಣಗಳು ಅವಿಸ್ಮರಣೀಯ. ಸಾಹಿತ್ಯದ ಜೊತೆಗೆ ಸಂಗೀತದ ಜ್ಞಾನವನ್ನೂ ಹೊಂದಿದ್ದ ಅವರು ಅನೇಕ ಗೀತೆಗಳಿಗೆ ಸಂಗೀತ ಸಂಯೋಜಿಸಿದ್ದರು. ಅವರು ಕನ್ನಡ ಭಾವಗೀತಾ ಲೋಕವನ್ನು ಶ್ರೀಮಂತಗೊಳಿಸಲು ಬಂದ ಅವತಾರ ಪುರುಷ. ಎಲ್ಲಿಯವರೆಗೆ ಭಾವಗೀತೆಗಳನ್ನು ಹಾಡುವ ಕಲಾವಿದರು ಇರುತ್ತಾರೆಯೋ ಅಲ್ಲಿಯವರೆಗೆ ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಜೀವಂತ’ ಎಂದು ಹೇಳಿದರು.

ಲಕ್ಷ್ಮೀನಾರಾಯಣ ಭಟ್ಟ ಅವರ ಪತ್ನಿ ಜ್ಯೋತಿ , ಕವಿ ಬಿ.ಆರ್.ಲಕ್ಷ್ಮಣ ರಾವ್, ಪತ್ರಕರ್ತ ಜಿ.ಎನ್.ರಂಗನಾಥ ರಾವ್, ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, ಕಾರ್ಯದರ್ಶಿ ನಗರ ಶ್ರೀನಿವಾಸ ಉಡುಪ, ಡಾ.ಕಿಕ್ಕೇರಿ ಕೃಷ್ಣಮೂರ್ತಿ ಇದ್ದರು. ಸುಗಮ ಸಂಗೀತ ಗಾಯಕರು ಗೀತ ಗೌರವ ನಡೆಸಿಕೊಟ್ಟರು.



ಪ್ರತಿಮೆಯನ್ನು ಪಾಲಿಕೆ ಮಾಜಿ ಸದಸ್ಯ ಅಶ್ವಥನಾರಾಯಣಗೌಡ ಅನಾವರಣಗೊಳಿಸಿದರು. ಪಿ.ಗೋಪಾಲಸ್ವಾಮಿ, ಮೋಹನ್ ರಾಜ್, ನವೀನ್ ಕುಮಾರ್ ಇತರರು ಇದ್ದರು.

ಕೊಡಿಗೇಹಳ್ಳಿ: ಅಂಬೇಡ್ಕರ್ ಪ್ರತಿಮೆ ಅನಾವರಣ

ಯಲಹಂಕ: ’ದೇಶದ ಒಟ್ಟಾರೆ ಸಮಸ್ಯೆಗಳಿಗೆ ಅಂಬೇಡ್ಕರ್ ಅವರ ತತ್ವ, ಸಿದ್ಧಾಂತಗಳು ಹಾಗೂ ವಿಚಾರಧಾರೆಗಳಲ್ಲಿ ಪರಿಹಾರವಿದೆ‘ ಎಂದು ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಕಾರಹಳ್ಳಿ ಶ್ರೀನಿವಾಸ್ ಅಭಿಪ್ರಾಯ ಪಟ್ಟರು.

ವಾರ್ಡ್‌ನಂ.8ರ ಕೊಡಿಗೇಹಳ್ಳಿಯ ಗೋಪಾಲಸ್ವಾಮಿ ಅವರ ಜಮೀನಿನಲ್ಲಿ ನಿರ್ಮಿಸಿರುವಬಾಬಾಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ಅನಾವರಣ ಸಮಾರಂಭದಲ್ಲಿ ಮಾತನಾಡಿ, ಬಾಬಾ ಸಾಹೇಬ್ ಅವರ ವಿಚಾರ, ಆಲೋಚನೆ, ಬರಹ ಹಾಗೂ ಭಾಷಣಗಳನ್ನು ಇಂದಿನ ಯುವಸಮುದಾಯ ಸರಿಯಾಗಿ ಅರ್ಥೈಸಿಕೊಳ್ಳಬೇಕು ಎಂದರು.

ಪಾಲಿಕೆ ಮಾಜಿ ಸದಸ್ಯ ಅಶ್ವಥನಾರಾಯಣಗೌಡ ಮಾತನಾಡಿದರು. ಕರ್ನಾಟಕ ಪ್ರಜಾಶಕ್ತಿ ಸಮಿತಿಯ ರಾಜ್ಯಘಟಕದ ಅಧ್ಯಕ್ಷ ಪಿ.ಗೋಪಾಲಸ್ವಾಮಿ, ಬ್ಯಾಟರಾಯನಪುರ ವಿ.ಎಸ್.ಎಸ್.ಎನ್ ಅಧ್ಯಕ್ಷ ಮೋಹನ್ ರಾಜ್, ರಾಜ್ಯ ರೈತಸಂಘದ ನವೀನ್ ಕುಮಾರ್ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಎಂ.ಎನ್‌. ರಾಜೇಂದ್ರ ಕುಮಾರ್ ಅವರಿಗೆ ಭಾನುವಾರ ಬೆಂಗಳೂರಿನಲ್ಲಿ ನಡೆದ ದಿ. ನ್ಯೂಸ್ ಪೇಪರ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ಸಂಸ್ಥೆಯ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಬಾರ್ಕೂರು ಮಹಾಸಂಸ್ಥಾನದ ಡಾ. ಸಂತೋಷ್ ಭಾರತಿ ಗುರೂಜಿ ಪ್ರದಾನ ಮಾಡಿದರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವೈದೇಹಿ ವೈದ್ಯಕೀಯ ಮತ್ತು ಸಂಶೋಧನಾ ಸಂಸ್ಥೆಯ ಅಧ್ಯಕ್ಷೆ ಡಿ.ಎ.ಕಲ್ಪಜಾ , ವಿಶ್ರಾಂತ ಉಪ ಕುಲಪತಿ ಡಾ.ಎಸ್‌.ಸಚ್ಚಿದಾನಂದ, ಶ್ರಾವಣ ಲಕ್ಷ್ಮಣ್ ಮತ್ತಿತರರು ಇದ್ದರು.

6ನೇ ವರ್ಷದ ಪುಣ್ಯಸ್ಮರಣೆ

ಬಿ.ಎನ್. ನಂಜುಂಡಪ್ಪ

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದಿದೆ. ಸದಾಕಾಲ ನಮ್ಮೆಲ್ಲರ ಜೊತೆಯಲ್ಲಿಯೇ ನೀವಿದ್ದೀರಾ ಎಂದೇ ಭಾವಿಸಿ ಬದುಕುತ್ತಿದ್ದೇವೆ. ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ ದುಃಖತಪ್ತರಾದ

ದಿ. ಬಚ್ಚೇಗೌಡರ ಕುಟುಂಬದವರು
ಬ್ಯಾಟರಾಯನಪುರ, ಬೆಂಗಳೂರು–92.

ನಗರದಲ್ಲಿ ಇಂದು

ವಿದ್ಯುತ್ ಚಾಲಿತ ಹಾಗೂ ಡೀಸೆಲ್ ಬಸ್‌ಗಳ ಲೋಕಾರ್ಪಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅತಿಥಿಗಳು–ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಂ.ರಾಜೀವ್ ಚಂದ್ರಶೇಖರ್, ಸಾರಿಗೆ ಸಚಿವ ಶ್ರೀರಾಮುಲು, ಬಿಎಂಟಿಸಿ ಅಧ್ಯಕ್ಷ ಎನ್.ಎಸ್.ನಂದೀಶ್ ರೆಡ್ಡಿ, ಉಪಾಧ್ಯಕ್ಷ ಎಂ.ಆರ್.ವೆಂಕಟೇಶ್, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಆಯೋಜನೆ–ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಸ್ಥಳ–ವಿಧಾನಸೌಧದ ಪೂರ್ವದ್ವಾರ, ಬೆಳಿಗ್ಗೆ 10

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ಪರಿಹಾರಧನ ವಿತರಣೆ ಕಾರ್ಯಕ್ರಮ: ಉದ್ಘಾಟನೆ–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ–ಉದಯ್ ಬಿ.ಗರುಡಾಚಾರ್, ಆಯೋಜನೆ–ಪಾಲಿಕೆ ಮತ್ತು ಬೆಂಗಳೂರು ಜಿಲ್ಲಾಡಳಿತ, ಸ್ಥಳ–ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಬೆಳಿಗ್ಗೆ 11.30

16ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಹಾಗೂ ಗೌರವ ಪ್ರಶಸ್ತಿ ಪ್ರದಾನ (ಸಂಜೆ 5): ನಿರಂಜನ ವಾನಳ್ಳಿ, **ವಾರ್ಷಿಕ ಶಿಲ್ಪಕಲಾ ಬಹುಮಾನ ವಿತರಣೆ:** ಎನ್.ಮಂಜುಳಾ, ಕಿರುಹೊತ್ತಿಗೆ ಬಿಡುಗಡೆ–ಎಸ್.ರಂಗಪ್ಪ, ಪ್ರಾಸ್ತಾವಿಕ ನುಡಿ–ವೀರಣ್ಣಾ ಮಾ.ಅರ್ಕಸಾಲಿ, ಅತಿಥಿಗಳು–ಆರ್.ಜಿ.ಸಿಂಗ್, ರೂಪಾ ಗಂಗಾಧರ್ ಬಡಿಗೇರ, ರಾ.ಕಾಳಾಚಾರ್, ಸಂಜೆ 4.30ಕ್ಕೆ

ಶಿಲ್ಪಕಲಾ ಪ್ರದರ್ಶನ ಉದ್ಘಾಟನೆ: ಎಂ.ರಾಮಮೂರ್ತಿ, ಆಯೋಜನೆ–ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ

47ನೇ ವಾರ್ಷಿಕ ಕೇಕ್ ಪ್ರದರ್ಶನ: ಸ್ಥಳ–ಸೇಂಟ್ ಜೋಸೆಫ್ ಶಾಲೆಯ ಆಟದ ಮೈದಾನ, ಕಂಠೀರವ ಕ್ರೀಡಾಂಗಣದ ಹತ್ತಿರ, ಸಂಜೆ 4

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE
NOTICE IS HEREBY GIVEN THAT, I have filed a suit in O.S.No.34/2020 on file of Principal Senior Civil Judge, Udupi against **Mr.A.Rajendra Kodgi** and others for partition and to allotment of my share over the properties described in Schedule along with other items of properties, In the said suit, the hon'ble court was pleased to granted Injunction restraining the Defendant No.1 **Mr. A.Rajendra Kodgi**, his men, agents or anybody claiming through or under him from alienating, encumbrance or creating charge over the plaint Schedule properties or any portion thereof. The said order is still in force. But, by suppressing the said interim order and pendency of the said suit, the Defendant No.1 has scheme to sell the portion of the suit schedule properties. Therefore, I hereby warned to the general public that you should not purchase any portion of the schedule properties from the said **Mr.A.Rajendra Kodgi** as I got undivided right and share over the said properties, please note that if in case purchase the same, you are sole responsible to the said the said sale transactions and the said proposed sale deed is not binding to me and other undivided share holder of the said schedule properties.
THE DESCRIPTION OF SCHEDULE PROPERTIES
1. The immovable agricultural land measuring 3.00 acres comprised in the survey No.13/6 (easier 13/c, 13/6, 13, 13/1 and 13/1C) situated at Ganakallu Village Kengeri Hobli, Bangalore South Taluk, Bangalore.
2. Residential Apartment Flat No.176/9 now bearing BMMP Municipal No.179/9 PID No. 80-31-176/9 with super built up area of 1700 sq.ft. situated in the fourth floor of the southern wing of the apartment known as "Cavalry Court" 2nd Cross, K.Kamaraj Cross Road, Bharathi Nagar, Bangalore.
Place: Udupi
Date: 26.12.2021
Yours,
(Sudhir Kodgi)
R/at "Guru Kripa", Hayagreeva Nagara, Indrali Post: Kunjibettu, Udupi Taluk-576102.
Mobile No.98453 54410.

JOB OPPORTUNITIES

Wanted
WANTED FEMALE Office Assistant Qualification any Degree, Good Communication Skills: Kannada, English, Hindi, in around Rajajinagar Contact: 23384085/ 9108458798

EDUCATIONAL

Admission
ONE SITTING: LL.B, B.TECH, M.TECH, DIPLOMA, MBA, MCA, M.Sc, BBA, BCA, B.Sc, B.Com, B.PHARM, GNM, MLT, PU, SSLC. Asha Institute, Bangalore. Ph: 9448460103/ 7093438248.

BUSINESS

Business to Business

Business
ZENITH LOANS available @4% yearly interest Business Project Takeover Property Mortgage NPA 8447587173 Agents Welcome

Finance
GOLDEN OPPORTUNITY. RTD's, VRS, Housewives, Earn more than Lakh. Contact: 9972169164

SOCIAL SERVICES

Old Age Home
OLD AGE Home/ Orphanage available near Whitefield for Elders and Boys. Contact: 9611785161/ 9901290021.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

3 ಸ್ಥಳೀಯ ಸಂಸ್ಥೆಗಳಿಗೆ ಇಂದು ಮತದಾನ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ನಗರಸಭೆ, ಚಂದಾಪುರ ಮತ್ತು ಜಿಗಣಿ ಪುರಸಭೆಗೆ ಸೋಮವಾರ ಮತದಾನ ನಡೆಯಲಿದ್ದು, ಚುನಾವಣೆ ಸುಗಮವಾಗಿ ನಡೆಯಲು ತಾಲ್ಲೂಕು ಆಡಳಿತ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ ಎಂದು ತಹಶೀಲ್ದಾರ್ ಪಿ. ದಿನೇಶ್ ತಿಳಿಸಿದ್ದಾರೆ.

ಹೆಬ್ಬಗೋಡಿ ನಗರಸಭೆಯ 31 ವಾರ್ಡ್‌ಗಳ ಪೈಕಿ 5 ವಾರ್ಡ್‌ಗಳಲ್ಲಿ ಅವಿರೋಧ ಆಯ್ಕೆಯಾಗಿದ್ದು, ಉಳಿದ 26 ವಾರ್ಡ್‌ಗಳಿಗೆ ಚುನಾವಣೆ ನಿಗದಿಯಾಗಿದೆ. 44 ಮತಗಟ್ಟೆ ಸ್ಥಾಪಿಸಲಾಗಿದ್ದು, ಈ ಪೈಕಿ 10 ಸೂಕ್ಷ್ಮ ಮತ್ತು 7 ಅತಿಸೂಕ್ಷ್ಮ ಮತಗಟ್ಟೆಗಳಾಗಿವೆ. 58 ಅಭ್ಯರ್ಥಿಗಳು ಕಣದಲ್ಲಿದ್ದು, 59,205 ಮತದಾರರಿದ್ದಾರೆ.

ಚಂದಾಪುರ ಪುರಸಭೆಯಲ್ಲಿ 23 ವಾರ್ಡ್‌ಗಳಿಗೆ ಚುನಾವಣೆ ನಿಗದಿಯಾಗಿದ್ದು, 56 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 27,062 ಮತದಾರರಿದ್ದಾರೆ. 27 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 5 ಸೂಕ್ಷ್ಮ ಮತ್ತು 1 ಅತಿಸೂಕ್ಷ್ಮ ಮತಗಟ್ಟೆಯಾಗಿದೆ.

ಜಿಗಣಿ ಪುರಸಭೆಯಲ್ಲಿ 23 ವಾರ್ಡ್‌ಗಳಿಗೆ ಚುನಾವಣೆ ನಿಗದಿಯಾಗಿದ್ದು, 61 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 23 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 18 ಸೂಕ್ಷ್ಮ ಮತ್ತು 5 ಅತಿಸೂಕ್ಷ್ಮ ಮತಗಟ್ಟೆಗಳಾಗಿವೆ. ಒಟ್ಟು 16,496 ಮತದಾರರು ಇದ್ದಾರೆ.

ಒಂದು ನಗರಸಭೆ ಮತ್ತು ಎರಡು ಪುರಸಭೆಗಳ ಚುನಾವಣೆಗಾಗಿ 470 ಮತಗಟ್ಟೆ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. 94 ಮಂದಿ ಪೊಲೀಸ್ ಸಿಬ್ಬಂದಿ ನಿಯೋಜನೆಗೊಂಡಿದ್ದಾರೆ.

ಆನೇಕಲ್ ಉಪ ವಿಭಾಗದ ಡಿವೈಎಸ್‌ಪಿ ನೇತೃತ್ವದಲ್ಲಿ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ. ಮತಗಟ್ಟೆಗಳಲ್ಲಿ ಕೋವಿಡ್ ನಿಯಮಗಳನ್ನು ಪಾಲಿಸಲಾಗುತ್ತಿದ್ದು, ಪ್ರತಿ ಮತಗಟ್ಟೆಗೆ ಆಶಾ ಕಾರ್ಯಕರ್ತೆಯರನ್ನು ನಿಯೋಜಿಸಲಾಗಿದೆ. ಸ್ಯಾನಿಟೈಜ್ ಮತ್ತು ಥರ್ಮಲ್ ಸ್ಕ್ಯಾನಿಂಗ್ ಮಾಡಲಾಗುವುದು. ಅವಶ್ಯಕತೆ ಇದ್ದರೆ ಕೊರೊನಾ ಪರೀಕ್ಷೆಗೂ ವ್ಯವಸ್ಥೆ ಮಾಡಲಾಗಿದೆ. ಅಂತರ ಕಾಯ್ದುಕೊಂಡು ಚುನಾವಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

ಗರುಡಾ ಮಾಲ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸಿದ್ದರಿಂದ ಗರುಡಾ ಮಾಲ್‌ನ ಆಡಳಿತ ಮಂಡಳಿಗೆ ಬಿಬಿಎಂಪಿ ಆರೋಗ್ಯಾಧಿಕಾರಿಗಳು ನೋಟಿಸ್ ನೀಡಿದ್ದಾರೆ. ₹20 ಸಾವಿರ ದಂಡವನ್ನೂ ವಿಧಿಸಿದ್ದಾರೆ.

‘ಅಶೋಕನಗರದಲ್ಲಿರುವ ಗರುಡಾ ಮಾಲ್‌ಗೆ ಭೇಟಿ ನೀಡಿದಾಗ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸದಿರುವುದು ಗಮನಕ್ಕೆ ಬಂದಿದೆ. ಮಾಲ್ ಹಾಗೂ ಸಿನಿಮಾ ಹಾಲ್‌ಗೆ ಪ್ರವೇಶಿಸುವವರು ಲಸಿಕೆಯ ಎರಡೂ ಡೋಸ್ ಪಡೆಯುವುದು ಕಡ್ಡಾಯ. ಈ ಕುರಿತ ಪ್ರಮಾಣ ಪತ್ರವನ್ನು ಮಾಲ್‌ನ ದ್ವಾರದಲ್ಲಿ ಪರಿಶೀಲಿಸುತ್ತಿರಲಿಲ್ಲ. ಹೀಗಾಗಿ ನೋಟಿಸ್ ನೀಡಲಾಗಿದೆ’ ಎಂದು ಆರೋಗ್ಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,61,556 ಒಟ್ಟು ಪ್ರಕರಣಗಳು ▲
(12,61,308 ನಿನ್ನೆಯ ವಿವರ)

6,048 ▲	12,39,122 ▲	16,385 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	248 ▲
ಗುಣಮುಖ	88 ▼
ಸಾವು	02

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಶಾಸಕ ವಿಶ್ವನಾಥ್, ಕೊಳಗೇರಿ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿದರು. ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಮುಖಂಡರಾದ ದಿಬ್ಬೂರು ಜಯಣ್ಣ, ಹನುಮಯ್ಯ, ಸತೀಶ್ ಕಡತನಮಲೆ ಇತರರು ಇದ್ದರು

750 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ವಸತಿ ವಂಚಿತರಿಗೆ 2022ರ ಡಿಸೆಂಬರ್ ಅಂತ್ಯದ ವೇಳೆಗೆ 20 ಸಾವಿರ ಮನೆಗಳನ್ನು ನೀಡುವ ಗುರಿ ಹೊಂದಲಾಗಿದೆ ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ವಸತಿ ಇಲಾಖೆ ಹಾಗೂ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಸಿಂಗನಾಯಕನಹಳ್ಳಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೊಳಗೇರಿ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು, ನಗರದಲ್ಲಿ ರೈಲ್ವೆಹಳಿ, ಕೊಳಚೆ ಪ್ರದೇಶದ ನಿವಾಸಿಗಳು ಹಾಗೂ ಬಡವರಿಗೆ ಸೂರುನೀಡಲು ಸರ್ಕಾರ ಬದ್ಧ ಎಂದರು.

ಬಿಡಿಎಗೆ ಸೇರಿದ ಜಾಗದಲ್ಲಿ ಮನೆ ನಿರ್ಮಿಸಿಕೊಂಡಿರುವ ಕೊಳಗೇರಿ ನಿವಾಸಿಗಳಿಗೆ ಹಕ್ಕುಪತ್ರ ನೀಡಲು ಚಿಂತನೆ ನಡೆಸಲಾಗಿದೆ. ಅಂತಹ ಜಾಗಗಳನ್ನು ಗುರುತಿಸಿ, ಕೊಳೆಗೇರಿ ಮಂಡಳಿಗೆ ಹಸ್ತಾಂತರಿಸುವ ಸಂಬಂಧ ಮುಖ್ಯಮಂತ್ರಿಗಳಿಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಸಿಂಗನಾಯಕನಹಳ್ಳಿ ರೈತರ ಸೇವಾ ಸಹಕಾರ ಸಂಘದ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಹನುಮಯ್ಯ, ಸತೀಶ್ ಕಡತನಮಲೆ, ದಲಿತ ಸಮರ ಸೇನೆಯ ರಾಜ್ಯಘಟಕದ ಅಧ್ಯಕ್ಷ ಎಸ್.ಗಣೇಶ್, ಎಂ.ಬಾಲಕೃಷ್ಣ ಕೆ.ಮಂಜುನಾಥ್, ಭಾಗ್ಯಮ್ಮ ಮತ್ತಿತರರು ಉಪಸ್ಥಿತರಿದ್ದರು.

ಪರಿಹಾರದ ಚೆಕ್ ವಿತರಣೆ: ಕೊರೊನಾದಿಂದ ಮೃತಪಟ್ಟ 75 ಜನರ ಕುಟುಂಬ ಸದಸ್ಯರಿಗೆ ಬಿಬಿಎಂಪಿ ವತಿಯಿಂದ ಉಪನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಲಾ ₹1 ಲಕ್ಷ ಪರಿಹಾರದ ಚೆಕ್ ವಿತರಿಸಲಾಯಿತು. ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ● ಎಸ್‌.ಜಿ. ಸಿದ್ಧರಾಮಯ್ಯ ಅವರ ಆತ್ಮಕಥೆ ‘ಯರೆಬೇವು’ ಬಿಡುಗಡೆ

‘ಸ್ವ ಇಚ್ಛೆಯ ಮತಾಂತರಕ್ಕೆ ಕಾನೂನಿನ ದೌರ್ಜನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮತಾಂತರಕ್ಕೆ ಕಾರಣ ವೇನು, ಅದಕ್ಕೆ ಪ್ರಚೋದನೆ ನೀಡುತ್ತಿರುವವರು ಯಾರು ಎಂಬುದನ್ನು ಪತ್ತೆಹಚ್ಚಿ, ಅದಕ್ಕೆ ಪರಿಹಾರ ಕಂಡುಕೊಳ್ಳಬೇಕಾಗಿತ್ತು. ಅದರ ಬದಲು, ಸ್ವ ಇಚ್ಛೆಯಿಂದ ಮತಾಂತರ ಆಗುತ್ತಿರುವವರ ಮೇಲೆ ಕಾನೂನು ಅಸ್ತ್ರ ಪ್ರಯೋಗಿಸಲು ಮುಂದಾಗಿರುವ ಸರ್ಕಾರದ ನಡೆ ಖಂಡನಾರ್ಹ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಹುರೂಪಿ ಪ್ರಕಾಶನ ಹಾಗೂ ಲಂಡನ್‌ನ ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಪ್ರೊ. ಎಸ್.ಜಿ.ಸಿದ್ಧರಾಮಯ್ಯ ಅವರ ಆತ್ಮಕಥೆ ‘ಯರೆಬೇವು’ ಕೃತಿಯನ್ನು ಬಿಡುಗಡೆ ಮಾಡಿ, ಅವರಿಗೆ ‘ಡಾ.ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ’ ಪ್ರದಾನ ಮಾಡಿದರು. ಈ ಪ್ರಶಸ್ತಿ ₹ 25 ಸಾವಿರ ನಗದು ಒಳಗೊಂಡಿದೆ.

‘ಬಲಾತ್ಕಾರದ ಮತಾಂತರವನ್ನು ನಾನು ಕೂಡ ವಿರೋಧಿಸುತ್ತೇನೆ. ಸಂವಿಧಾನದಲ್ಲಿ ಬಲಾತ್ಕಾರದ ಮತಾಂತರ ತಡೆಯಲು ಅವಕಾಶವಿದೆ. ಹೀಗಾಗಿ, ಈ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕಾಯ್ದೆ ತರುವ ಅಗತ್ಯವಾದರೂ ಏನಿದೆ? ಪ್ರಜ್ಞಾವಂತರು ಮತಾಂತರ ನಿಷೇಧ ಕಾಯ್ದೆಯನ್ನು ವಿರೋಧಿಸಬೇಕು. ಬೌದ್ಧ ಧರ್ಮ, ಜೈನ ಧರ್ಮ, ಲಿಂಗಾಯತ ಧರ್ಮ, ಸಿಖ್ ಧರ್ಮ ಇವೆಲ್ಲವೂ ಹಿಂದೂ ಧರ್ಮದ ಭಾಗವೆಂದು ಪ್ರತಿಪಾದಿಸಲಾಗುತ್ತಿದೆ. ಈ ಬೆಳವಣಿಗೆ ಅಪಾಯಕಾರಿ’ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರೊ.ಎಸ್‌.ಜಿ. ಸಿದ್ಧರಾಮಯ್ಯ ಅವರಿಗೆ ‘ಡಾ.ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ’ಯನ್ನು ಸಿದ್ದರಾಮಯ್ಯ ಪ್ರದಾನ ಮಾಡಿದರು. ವಿಮರ್ಶಕಿ ಎಂ.ಎಸ್‌.ಆಶಾದೇವಿ, ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಕೆ. ಮರುಳಸಿದ್ದಪ್ಪ, ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷ ಎಸ್‌. ಮಹಾದೇವಯ್ಯ ಹಾಗೂ ಹಂಸಲೇಖ ಇದ್ದಾರೆ —ಪ್ರಜಾವಾಣಿ ಚಿತ್ರ

‘ಜಗಜ್ಯೋತಿ ಬಸವೇಶ್ವರರು ವೈದಿಕ ಧರ್ಮ, ಗೊಡ್ಡು ಸಂಪ್ರದಾಯವನ್ನು ಒಪ್ಪಿಕೊಂಡಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಸಾಕ್ಷರತೆ ಪ್ರಮಾಣ ಶೇ 18 ರಷ್ಟಿತ್ತು. ಆ ಪ್ರಮಾಣ ಈಗ ಶೇ 78ಕ್ಕೆ ಏರಿಕೆಯಾಗಿದೆ. ಆದರೆ, ಕಡಿಮೆ ಆಗಬೇಕಾದ ಅನಿಷ್ಠ ಪದ್ಧತಿಗಳು ಹೆಚ್ಚಾಗಿ, ಈ ಸಮಾಜವನ್ನು ಕಾಡುತ್ತಿವೆ. ಈಗ ಸತ್ಯವನ್ನು ನೇರವಾಗಿ ಹೇಳುವುದೇ ಕಷ್ಟವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಕಷ್ಟದಲ್ಲಿದ್ದು, ಸತ್ಯ ಕೆಲವರಿಗೆ ಕಹಿ ಆಗುತ್ತದೆ. ಹಂಸಲೇಖ ಅವರು ವಾಸ್ತವಾಂಶವನ್ನು ತೆರೆದಿಟ್ಟಿದ್ದರು’ ಎಂದು ಸಿದ್ದರಾಮಯ್ಯ ಹೇಳಿದರು.

ಪರಿಕಲ್ಪನೆ ಬದಲು: ಸಾಹಿತಿ ಮರುಳಸಿದ್ದಪ್ಪ, ‘ಹುಟ್ಟಿನಿಂದ ಲಿಂಗಾಯತರಾದವರು ಮಾತ್ರ ಬಸವಣ್ಣನ ವಾರಸುದಾರರಲ್ಲ. ಬಸವತತ್ವ ಮತ್ತು ಶರಣ ಧರ್ಮವು ಈಗ ಅಡ್ಡ ರಸ್ತೆಯಲ್ಲಿ ಬಂದು ನಿಂತಿದೆ. ಕನ್ನಡ ನಾಡಿನಲ್ಲಿ ವೈದಿಕ ಸಂಸ್ಕೃತಿಗೆ ಪರ್ಯಾಯವಾಗಿ ಶರಣ ಸಂಸ್ಕೃತಿ ಹುಟ್ಟು ಹಾಕಲಾಗಿದೆ. ಈ ಸಂಸ್ಕೃತಿಯಿಂದ ಇಷ್ಟ ಧರ್ಮದ ಪರಿಕಲ್ಪನೆ ಹಾಗೂ ದೇವರ ಬೆಗೆಗಿನ ವ್ಯಾಖ್ಯಾನ ಬದಲಾಯಿತು’ ಎಂದು ತಿಳಿಸಿದರು.

ಪುಸ್ತಕ ಪರಿಚಯ

ಕೃತಿ: ‘ಯರೆಬೇವು’
ಲೇಖಕ: ಎಸ್.ಜಿ. ಸಿದ್ಧರಾಮಯ್ಯ
ಪುಟಗಳು: 624
ಬೆಲೆ: ₹ 750
ಪ್ರಕಾಶನ ಸಂಸ್ಥೆ: ಬಹುರೂಪಿ

‘ಬೆಕ್ಕಿನ ರೂಪಕಗಳು ಹಂಸಲೇಖ ಅವರ ಮೇಲೆ ದಾಳಿ ಮಾಡಿದವು. ಆ ರೂಪಕಗಳು ಮುಂದಿನ ದಿನಗಳಲ್ಲಿ ಮಸೀದಿ, ಚರ್ಚ್, ಬಸದಿಗಳ ಮೇಲೆಯೂ ದಾಳಿ ನಡೆಸಬಹುದು’ ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎಸ್. ಜಿ. ಸಿದ್ಧರಾಮಯ್ಯ, ‘ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲವಾಗಿದೆ. ವಿಚಾರವಂತ ಸಾಹಿತಿಗಳು ಕೂಡ ವೈಯಕ್ತಿಕ ದೌರ್ಬಲ್ಯಗಳಿಂದ ಬಾಯಿ ಮುಚ್ಚಿಕೊಂಡಿದ್ದಾರೆ. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಕೊಡುಗೆಗಳನ್ನು ಕಡೆಗಣಿಸಿ, ಕಳೆದ 10 ವರ್ಷಗಳಲ್ಲಿಯೇ ಎಲ್ಲವೂ ಆಗಿದೆಯೆಂಬಂತೆ ಬಿಂಬಿಸಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ನನ್ನ ಪೋಲಿ ಆಟಗಳಿಗೆ ಚರಿತ್ರೆಯಿದೆ’

‘ನಾನು ವೇದಿಕೆಯೊಂದರಲ್ಲಿ ಆಡಿದ ಮಾತುಗಳು ವಿವಾದಕ್ಕೆ ಒಳಗಾದಾಗ ಎಸ್.ಜಿ. ಸಿದ್ಧರಾಮಯ್ಯ ಅವರು ಬೆಂಬಲಕ್ಕೆ ನಿಂತು, ಧೈರ್ಯ ತುಂಬಿದರು. ಬ್ಲಡ್ ಫ್ರೈ ಬಗ್ಗೆ ಮಾತನಾಡಿದ್ದಕ್ಕೆ ಬ್ಲಡ್ ತಿನ್ನುವುದನ್ನು ಮರೆತವರು ಸಹ ನನ್ನ ಮೇಲೆ ಮುಗಿಬಿದ್ದರು. ‘ನುಡಿದರೆ ಮುತ್ತಿನ ಹಾರದಂತೆ ಇರಬೇಕು’ ಎಂದು ಹೇಳಲಾಗುತ್ತದೆ. ಆದರೆ, ಕೆಲ ಸಂದರ್ಭದಲ್ಲಿ ಮಾತು ಕುದಿಯುವ ಸಲಾಕೆಯೂ ಆಗುತ್ತದೆ. ನಾನು ಭಯಸ್ತನಲ್ಲ. ಮಾಗಡಿ ರಸ್ತೆಯಲ್ಲಿ ದೊಡ್ಡ ದೊಡ್ಡ ಪೋಲಿ ಆಟಗಳನ್ನು ಆಡಿ ಬಂದಿದ್ದೇನೆ. ಅದಕ್ಕೊಂದು ಚರಿತ್ರೆಯೇ ಇದೆ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

‘ರಂಗಾಯಣ– ರಾಜಕೀಯ ಬೇಡ’

ಮೈಸೂರು ರಂಗಾಯಣದ ವಿವಾದದ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ರಂಗಾಯಣವನ್ನು ಮುಂದಕ್ಕೆ ಕೊಂಡೊಯ್ಯಬೇಕು. ಹಿಂದಕ್ಕೆ ಎಳೆಯುವ ಕೆಲಸ ಮಾಡುತ್ತಿರುವುದು ತಪ್ಪು. ಇಲ್ಲಿ ರಾಜಕೀಯ ಬೆರೆಸಬಾರದು’ ಎಂದು ಹೇಳಿದರು.

‘ಕನ್ನಡ ಸಾಹಿತ್ಯ ಪರಿಷತ್ತು, ಅಕಾಡೆಮಿಗಳು, ಪ್ರಾಧಿಕಾರಗಳು ಮತ್ತು ರಂಗಾಯಣಗಳಲ್ಲಿ ಇದುವರೆಗೆ ರಾಜಕೀಯ ಹಸ್ತಕ್ಷೇಪ ಇರಲಿಲ್ಲ. ಅವುಗಳ ಸ್ವಾಯತ್ತತೆಗೆ ಯಾವುದೇ ರಾಜಕೀಯ ಪಕ್ಷಗಳು ಧಕ್ಕೆ ತಂದಿರಲಿಲ್ಲ. ಆದರೆ, ಸಾಹಿತ್ಯ ಪರಿಷತ್ತಿನ ಈ ಬಾರಿಯ ಚುನಾವಣೆಯಲ್ಲಿ ಕೋಮುವಾದಿ ಪಕ್ಷವೊಂದು ನೇರವಾಗಿ ಸ್ಪರ್ಧಿಯೊಬ್ಬರಿಗೆ ಬೆಂಬಲ ನೀಡಿತು. ರಂಗಾಯಣವೂ ಸ್ವಾಯತ್ತತೆ ಕಳೆದುಕೊಳ್ಳುತ್ತಿದೆ. ನಾವು ಅಧಿಕಾರದಲ್ಲಿದ್ದಾಗ ಎಂದೂ ಓಲೈಕೆ ರಾಜಕಾರಣ ಮಾಡಿರಲಿಲ್ಲ’ ಎಂದು ತಿಳಿಸಿದರು.

ಬಿಎಂಟಿಸಿ ಬಸ್ ಹರಿದು ಪಾದಚಾರಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್‌ನ ಬಿಎಂಟಿಸಿ ಬಸ್ ನಿಲ್ದಾಣದ ನಿರ್ಗಮನ ಗೇಟ್ ಬಳಿ ಬಸ್ ಹರಿದು ಪಿ.ಕೃಷ್ಣಮೂರ್ತಿ (45) ಎಂಬುವರು ಮೃತಪಟ್ಟಿದ್ದಾರೆ. ಈ ಸಂಬಂಧ ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಉತ್ತರಹಳ್ಳಿ ಮುಖ್ಯ ರಸ್ತೆಯ ಚಿಕ್ಕಲಸಂದ್ರ ನಿವಾಸಿಯಾಗಿರುವ ಕೃಷ್ಣಮೂರ್ತಿ ಅವರು ಖಾಸಗಿ ವಾಹನವೊಂದರ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಭಾನುವಾರ ಮಧ್ಯಾಹ್ನ 3.30ರ ಸುಮಾರಿಗೆ ಬಿಎಂಟಿಸಿ ಬಸ್ ನಿಲ್ದಾಣದ ಮೂರನೇ ನಿರ್ಗಮನ ದ್ವಾರದ ಬಳಿ ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ನಿಲ್ದಾಣದ ಒಳಭಾಗದಿಂದ ವೇಗವಾಗಿ ಬಂದ ಬಿಎಂಟಿಸಿ ಬಸ್ (ಕೆಎ 57, ಎಫ್ 4273) ಕೃಷ್ಣಮೂರ್ತಿಯವರಿಗೆ ಡಿಕ್ಕಿ ಹೊಡೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಟೆಂಪೊ ಡಿಕ್ಕಿ: ಅಸುನೀಗಿದ ಆಟೊ ಚಾಲಕ

ಚಲಿಸುತ್ತಿದ್ದ ಆಟೊಗೆ ವೇಗವಾಗಿ ಬಂದ ಟೆಂಪೊ ಡಿಕ್ಕಿಹೊಡೆದಿದ್ದು, ಆಟೊ ಚಾಲಕ ಅಫ್ಜಲ್ (24) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಟೊದಲ್ಲಿದ್ದ ಶಾರೂಕ್ (14) ಗಂಭೀರವಾಗಿ ಗಾಯಗೊಂಡಿದ್ದಾನೆ. ಈ ಸಂಬಂಧ ಪ್ರಕರಣ ದಾಖಲಿಸಿರುವ ಚಿಕ್ಕಜಾಲ ಸಂಚಾರ ಠಾಣೆ ಪೊಲೀಸರು, ಟೆಂಪೊ ಚಾಲಕ ಚಂದ್ರಶೇಖರ ತಳವಾರ (33) ಎಂಬಾತನನ್ನು ಬಂಧಿಸಿದ್ದಾರೆ.

ಅಪರಾಧ ಸುದ್ದಿ

‘ವಿದ್ಯಾರಣ್ಯಪುರದ ಎಂ.ಎಸ್. ಪಾಳ್ಯ ನಿವಾಸಿಯಾಗಿರುವ ಅಫ್ಜಲ್, ಸಂಬಂಧಿಯೊಬ್ಬರ ಮಗ ಶಾರೂಕ್‌ನನ್ನು ಆಟೊದಲ್ಲಿ ಕೂರಿಸಿಕೊಂಡು ಬಾಗಲೂರು ಮುಖ್ಯರಸ್ತೆಯ ರೇವಾ ವೃತ್ತದ ಬಳಿ ಸಾಗುತ್ತಿದ್ದರು. ಈ ವೇಳೆ ವೇಗವಾಗಿ ಬಂದ ಟೆಂಪೊ ಡಿಕ್ಕಿ ಹೊಡೆದಿದೆ. ತೀವ್ರ ರಕ್ತಸ್ರಾವದಿಂದಾಗಿ ಅಫ್ಜಲ್ ಮೃತಪಟ್ಟಿದ್ದು, ಶಾರೂಕ್‌ನನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಆತನ ಸ್ಥಿತಿ ಗಂಭೀರವಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಅಡ್ಡಾದಿಡ್ಡಿ ಚಾಲನೆ ವೇಳೆ ಅಪಘಾತ: ಚಾಲಕ ಮೃತ

ಅಡ್ಡಾದಿಡ್ಡಿ ಚಾಲನೆ ವೇಳೆ ಆಟೊ ಪಲ್ಟಿಯಾಗಿ ಅದರ ಅಡಿ ಸಿಲುಕಿದ್ದ ಚಾಲಕ ಮೃತಪಟ್ಟಿದ್ದು, ಮೂವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಬಾಣಸವಾಡಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಾನಕಿರಾಮ್ ಲೇಔಟ್‌ನ ಮುತ್ತು (28) ಮೃತ ಚಾಲಕ.

‘ಇದೇ 24ರ ಸಂಜೆ ಮುತ್ತು ಹಾಗೂ ಆತನ ಮೂವರು ಸ್ನೇಹಿತರು ಠಾಣೆ ವ್ಯಾಪ್ತಿಯ ಸ್ಥಳವೊಂದರಲ್ಲಿ ಪಾರ್ಟಿ ಮಾಡಿದ್ದರು. ವಿಪರೀತ ಮದ್ಯಪಾನ ಮಾಡಿದ್ದ ಮುತ್ತು, ಮನೆಗೆ ಬರುವ ವೇಳೆ ಅಡ್ಡಾದಿಡ್ಡಿಯಾಗಿ ಆಟೊ ಚಲಾಯಿಸಿದ್ದ. ನೆಹರೂ ರಸ್ತೆಯಲ್ಲಿ ಸಾಗುವಾಗ ಆಟೊ ನಿಯಂತ್ರಣ ತಪ್ಪಿ ರಸ್ತೆಗೆ ಉರುಳಿತ್ತು. ಅದರ ಅಡಿಯಲ್ಲಿ ಸಿಲುಕಿದ್ದ ಆತನನ್ನು ಆಸ್ಪತ್ರೆಗೆ ಸಾಗಿಸುವ ವೇಳೆ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾನೆ’ ಎಂದು ಪೊಲೀಸರು ಹೇಳಿದ್ದಾರೆ.

‘ಆಟೊದಲ್ಲಿದ್ದ ಇತರ ಮೂವರನ್ನೂ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಅವರು ಚೇತರಿಸಿಕೊಂಡಿದ್ದಾರೆ’ ಎಂದು ತಿಳಿಸಿದರು.

ಗೂಡ್ಸ್ ವಾಹನ ಡಿಕ್ಕಿ- ಪಾದಚಾರಿ ಸಾವು: ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದು ಪಾದಚಾರಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬನ್ನೇರುಘಟ್ಟದಿಂದ ಕನಕಪುರ ರಸ್ತೆಗೆ ಬರುವ ಮಾರ್ಗದ ಬಳಿ ಇರುವ ಅಂಜನಾಪುರ ಸೇತುವೆ ಹತ್ತಿರ ಶನಿವಾರ ರಾತ್ರಿ 11 ಗಂಟೆ ಸುಮಾರಿಗೆ ಘಟನೆ ನಡೆದಿದೆ. ವ್ಯಕ್ತಿಯ ದೇಹವು ಚಕ್ರಗಳಿಗೆ ಸಿಲುಕಿ ಸುಮಾರು 100 ಮೀಟರ್‌ನಷ್ಟು ದೂರ ಉಜ್ಜಿಕೊಂಡು ಹೋಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಗೂಡ್ಸ್ ವಾಹನದೊಂದಿಗೆ ಚಾಲಕ ಪರಾರಿಯಾಗಿದ್ದಾನೆ. ಸುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿರುವ ದೃಶ್ಯಗಳನ್ನು ಪರಿಶೀಲಿಸುತ್ತಿದ್ದೇವೆ. ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಅವರಿಗೆ 30–35 ವರ್ಷ ವಯಸ್ಸಾಗಿರಬಹುದು. ನಗರದ ಕೆಂಪೇಗೌಡ ಆಸ್ಪತ್ರೆಯಲ್ಲಿ ಮೃತದೇಹ ಇಡಲಾಗಿದೆ’ ಎಂದು ತಿಳಿಸಿದ್ದಾರೆ.

ಗಾಯಗೊಂಡಿದ್ದ ಯುವಕ ಸಾವು : ಮೆಟ್ರೊ ನಿಲ್ದಾಣದಿಂದ ಹೊರಬಂದು ವಾಹನ ನಿಲುಗಡೆ ಪ್ರದೇಶಕ್ಕೆ ಹೊರಟಿದ್ದ ವೇಳೆ ಟಾಟಾ ಏಸ್ ಡಿಕ್ಕಿಯಾಗಿ ಗಂಭೀರವಾಗಿ ಗಾಯಗೊಂಡಿದ್ದ ಪ್ರಮೋದ್ ಯಾದವ್ (25) ಎಂಬುವರು ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ವಿಜಯನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬಸವೇಶ್ವರ ನಗರ ನಿವಾಸಿಯಾಗಿರುವ ಪ್ರಮೋದ್, ಖಾಸಗಿ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕೆಲಸ ಮುಗಿಸಿಕೊಂಡು ಸ್ನೇಹಿತನೊಂದಿಗೆ ಶನಿವಾರ ಮೆಟ್ರೊದಲ್ಲಿ ಬಂದಿದ್ದ ಅವರು 11 ಗಂಟೆ ಸುಮಾರಿಗೆ ಹೊಸಹಳ್ಳಿ ನಿಲ್ದಾಣದಲ್ಲಿ ಇಳಿದುಕೊಂಡಿದ್ದರು. ಬಳಿಕ ವಾಹನ ನಿಲುಗಡೆ ಸ್ಥಳದಲ್ಲಿದ್ದ ಬೈಕ್ ತೆಗೆದುಕೊಳ್ಳಲು ರಸ್ತೆ ದಾಟುತ್ತಿದ್ದ ವೇಳೆ ವಿಜಯನಗರ ಬಸ್ ನಿಲ್ದಾಣದ ಕಡೆಯಿಂದ ವೇಗವಾಗಿ ಬಂದ ಟಾಟಾ ಏಸ್ ಡಿಕ್ಕಿಯಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಗಂಭೀರವಾಗಿ ಗಾಯಗೊಂಡಿದ್ದ ಪ್ರಮೋದ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತೀವ್ರ ರಕ್ತಸ್ರಾವವಾಗಿದ್ದರಿಂದ ಚಿಕಿತ್ಸೆಗೆ ಸ್ಪಂದಿಸದೆ ಅವರು ಅಸುನೀಗಿದ್ದಾರೆ. ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಘಟನಾ ಸ್ಥಳದ ಸುತ್ತಲಿನ ಸಿಸಿಟಿವಿಗಳಲ್ಲಿ ಸೆರೆಯಾಗಿರುವ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದೇವೆ’ ಎಂದು ಮಾಹಿತಿ ನೀಡಿದರು.

ಉರುಳಿದ ಆಟೊ: ಪ್ರಯಾಣಿಕ ಸಾವು

ಬೆಂಗಳೂರು: ಅತಿವೇಗವಾಗಿ ಸಾಗುತ್ತಿದ್ದ ಆಟೊ, ಚಾಲಕನ ನಿಯಂತ್ರಣ ತಪ್ಪಿ ರಸ್ತೆಗೆ ಉರುಳಿ ಬಿದ್ದಿದ್ದರಿಂದ ಹಿಂಬದಿಯ ಆಸನದಲ್ಲಿ ಕುಳಿತಿದ್ದ ಪ್ರಯಾಣಿಕ ಮೂರ್ತಿ ಕುಮಾರ್ (30) ಮೃತಪಟ್ಟಿದ್ದಾರೆ. ಗಾಯಗೊಂಡಿದ್ದ ಆಟೊ ಚಾಲಕ ಹಾಗೂ ಮತ್ತೊಬ್ಬ ಪ್ರಯಾಣಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದಾರೆ. ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆಟೊ ಚಾಲಕ ಕಿರಣ್, ಪುಟ್ಟರಾಜು ಹಾಗೂ ಮೂರ್ತಿ ಕುಮಾರ್ ಅವರು ಮಂಡ್ಯ ಜಿಲ್ಲೆ ಪಾಂಡವಪುರದ ಸುಂಕತಣ್ಣೂರು ಗ್ರಾಮದವರು. ಪರಿಚಿತರಾಗಿದ್ದ ಇವರು ನಗರದ ಆಂದ್ರಹಳ್ಳಿಯಲ್ಲಿ ನೆಲೆಸಿದ್ದರು. ಶನಿವಾರ ರಾತ್ರಿ 12.30ರ ಸುಮಾರಿಗೆ ಡಾ.ರಾಜ್‌ಕುಮಾರ್ ಸ್ಮಾರಕದ ಕಡೆಯಿಂದ ಸುಮನಹಳ್ಳಿ ಮಾರ್ಗವಾಗಿ ನಂದಿನಿ ಲೇಔಟ್‌ನ ಹೊರ ವರ್ತುಲ ರಸ್ತೆಯಲ್ಲಿ ಹೋಗುತ್ತಿದ್ದರು. ಕಿರಣ್ ಅತಿವೇಗವಾಗಿ ಆಟೊ ಚಲಾಯಿಸುತ್ತಿದ್ದ. ಆತನ ನಿಯಂತ್ರಣ ತಪ್ಪಿದ ಆಟೊ ಎಡಭಾಗಕ್ಕೆ ವಾಲಿ ರಸ್ತೆಗೆ ಉರುಳಿತ್ತು. ಹೀಗಾಗಿ ಹಿಂಬದಿಯ ಆಸನದ ಎಡಭಾಗದಲ್ಲಿ ಕುಳಿತಿದ್ದ ಮೂರ್ತಿ ಅವರಿಗೆ ಗಂಭೀರ ಗಾಯಗಳಾಗಿ ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಸ್ನೇಹಿತನೊಬ್ಬನನ್ನು ಭೇಟಿ ಮಾಡುವ ಸಲುವಾಗಿ ಮೂವರೂ ಆಟೊದಲ್ಲಿ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಹೊರಟಿದ್ದರು. ಮೂರ್ತಿ ಕುಮಾರ್ ಅವರ ಕೆನ್ನೆ, ಎಡ ಹಾಗೂ ಬಲಗಣ್ಣಿಗೆ ಗಂಭೀರ ಗಾಯಗಳಾಗಿದ್ದವು. ಬಾಯಿ ಹಾಗೂ ಮೂಗಿನಲ್ಲಿ ರಕ್ತಸ್ರಾವವಾಗಿತ್ತು. ಘಟನೆ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದು, ಆಟೊ ಜಪ್ತಿ ಮಾಡಲಾಗಿದೆ’ ಎಂದು ಮಾಹಿತಿ ನೀಡಿದ್ದಾರೆ.

ಬೆಂಕಿ ನಂದಿಸುತ್ತಿದ್ದ ವೇಳೆ ಅಗ್ನಿಶಾಮಕ ಸಿಬ್ಬಂದಿ ಸಾವು

ಕಲಬುರಗಿ: ನಗರದ ಸೂಪರ್ ಮಾರ್ಕೆಟ್‌ನಲ್ಲಿರುವ ಕೆನರಾ ಬ್ಯಾಂಕ್‌ಗೆ ಸೇರಿದ ಹಳೆಯ ಜನರೇಟರ್‌ನಿಂದ ಭಾನುವಾರ ಸಂಜೆ ಹೊತ್ತಿದ ಬೆಂಕಿಯನ್ನು ನಂದಿಸುವ ವೇಳೆ ಅಗ್ನಿಶಾಮಕ ದಳದ ಸಿಬ್ಬಂದಿ ರಮೇಶ್ ಪವಾರ (55) ಎಂಬುವರು ಮೃತಪಟ್ಟಿದ್ದಾರೆ.

‘ಬ್ಯಾಂಕ್‌ನ ಹಿಂಬದಿಯ ಕಟ್ಟಡದಲ್ಲಿ ಜನರೇಟರ್ ಇದ್ದು, ಅದರಿಂದ ಹೊಗೆಯ ವಾಸನೆ ಬರತೊಡಗಿದೆ. ಅದನ್ನು ಗಮನಿಸಿದ ಕಟ್ಟಡದ ಎದುರಿಗೆ ಮಣ್ಣಿನ ಪಾತ್ರೆಗಳನ್ನು ಮಾರುತ್ತಿದ್ದ ವ್ಯಾಪಾರಿ ಅಗ್ನಿಶಾಮಕ ದಳಕ್ಕೆ ಕರೆ ಮಾಡಿದ್ದಾರೆ. ಸ್ಥಳಕ್ಕೆ ಬಂದ ಸಿಬ್ಬಂದಿ ಬೆಂಕಿ ನಂದಿಸುವ ವೇಳೆ ವಿದ್ಯುತ್ ತಗುಲಿ ಹೊರಗೆ ಬಿದ್ದಿದ್ದಾರೆ. ಅವರನ್ನು ತಕ್ಷಣವೇ ಸಂಚಾರ ಠಾಣೆಯ ಪೊಲೀಸರು ಆಟೊದಲ್ಲಿ ಜಯದೇವ ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟರು’ ಎಂದು ಪೊಲೀಸರು ತಿಳಿಸಿದ್ದಾರೆ.

ಒಂದೇ ಕುಟುಂಬದ 9 ಮಂದಿ ಹಿಂದೂ ಧರ್ಮಕ್ಕೆ ವಾಪಸ್

ಭದ್ರಾವತಿ: ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾಗಿದ್ದ ತಾಲ್ಲೂಕಿನ ಅಂತರಗಂಗೆಯ ಒಂದೇ ಕುಟುಂಬದ 9 ಮಂದಿ ಸ್ವಇಚ್ಛೆಯಿಂದ ಹಿಂದೂ ಧರ್ಮಕ್ಕೆ ವಾಪಸ್ ಆಗಿದ್ದಾರೆ.

ಜನ್ನಾಪುರ ಸಾರ್ವಜನಿಕ ಶ್ರೀರಾಮ ಭಜನಾ ಮಂಡಳಿಯಲ್ಲಿ ಜರುಗಿದ ಧಾರ್ಮಿಕ ಕಾರ್ಯಕ್ರಮದಲ್ಲಿ 9 ಮಂದಿಯನ್ನು ಮಾತೃಧರ್ಮ ಸ್ವೀಕಾರ, ಸಂಸ್ಕಾರಕ್ಕೆ ಸೇರಿಸುವ ಧಾರ್ಮಿಕ ವಿಧಿವಿಧಾನ ನಡೆದವು.

ಬಹುಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ದಿನದ ವಿಶೇಷ:
ಬೆಳಿಗ್ಗೆ 7 : ವಚನವಾಣಿ,
ಬೆಳಿಗ್ಗೆ 7.30 : ದಿನದ ಸೂಕ್ತಿ
ಬೆಳಿಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಿಗ್ಗೆ 9: ಪ್ರಚಲಿತ,
ಬೆಳಿಗ್ಗೆ 9.30: ಸಂಪಾದಕೀಯ
Prajavani.net
Prajavani Prajavani

ಪುಸ್ತಕ ಆಹ್ವಾನ

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತಿನ ವತಿಯಿಂದ 'ಲೋಕ ಸರಸ್ವತಿ ಗ್ರಂಥ ಪ್ರಶಸ್ತಿ'ಗಾಗಿ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.

2021ನೇ ಸಾಲಿನಲ್ಲಿ ಪ್ರಕಟವಾಗಿರುವ ಜನಪದ ಗೀತೆ, ಕಥೆ, ಗಾದೆ, ಒಗಟು ಸೇರಿದಂತೆ ಜನಪದ ಪ್ರಕಾರಗಳ ಸಂಗ್ರಹ ಪುಸ್ತಕಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದು.

ಆಸಕ್ತರು 2022ರ ಜನವರಿ 15ರೊಳಗೆ ಪುಸ್ತಕಗಳನ್ನು ತಲುಪಿಸಬಹುದು. ಮಾಹಿತಿಗೆ ಸಂಪರ್ಕ: 080-23605033

'ಕಳಪೆ ಟಾರ್ಪಾಲು ಪೂರೈಸಿದರೆ ಕ್ರಮ'

ಬಿ.ಸಿ.ಪಾಟೀಲ

ಬೆಂಗಳೂರು: ಕೃಷಿ ಇಲಾಖೆಯಿಂದ ರೈತರಿಗೆ ಟಾರ್ಪಾಲು ವಿತರಿಸುವ ಯೋಜನೆಗೆ ಕಳಪೆ ಗುಣಮಟ್ಟದ ಉತ್ಪನ್ನ ಪೂರೈಸುವ ಕಂಪನಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಎಚ್ಚರಿಕೆ ನೀಡಿದ್ದಾರೆ.

'ಪ್ರಸಕ್ತ ವರ್ಷ 2.39 ಲಕ್ಷ ಟಾರ್ಪಾಲುಗಳನ್ನು ವಿತರಿಸುವ ಯೋಜನೆ ಇದೆ. ಭಾರತೀಯ ಮಾಪನ ಸಂಸ್ಥೆಯು ನಿಗದಿಪಡಿಸಿರುವ ಗುಣಮಟ್ಟದ ಟಾರ್ಪಾಲುಗಳನ್ನೇ ಪೂರೈಸುವುದು ಕಡ್ಡಾಯ. ಇದಕ್ಕಾಗಿ 24 ಕಂಪನಿಗಳನ್ನು ಅಂತಿಮಗೊಳಿಸಲಾಗಿರುತ್ತದೆ. ಕಳಪೆ ಗುಣಮಟ್ಟದ ಟಾರ್ಪಾಲು ಪೂರೈಸುವ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿ, ಮೂರು ವರ್ಷ ಯೋಜನೆಯಿಂದ ಹೊರಗಿಡಲಾಗುವುದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟಾರ್ಪಾಲಿನ ಮೇಲೆ ಕಂಪನಿಯ ಹೆಸರು, ಬ್ಯಾಚ್ ಸಂಖ್ಯೆ, ಭಾರತೀಯ ಮಾಪನ ಸಂಸ್ಥೆಯಿಂದ ಪಡೆದಿರುವ ಪರವಾನಗಿ ಸಂಖ್ಯೆಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಮುದ್ರಿಸಬೇಕು. ಜಿಲ್ಲೆಗೆ ಒಂದರಂತೆ ಟಾರ್ಪಾಲುಗಳನ್ನು ಆಯ್ದು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋ-ಕೆಮಿಕಲ್ಸ್ ಅಂಡ್ ಎಂಜಿನಿಯರಿಂಗ್ ಟೆಕ್ನಾಲಜಿಯಲ್ಲಿ ಪರೀಕ್ಷಿಸಲಾಗುವುದು. ಕಳಪೆ ಗುಣಮಟ್ಟ ಕಂಡುಬಂದರೆ ಕ್ರಮ ಜರುಗಿಸಲಾಗುವುದು ಎಂದು ಹೇಳಿದ್ದಾರೆ.

ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದರೆ ಸಂವಿಧಾನ ತಿದ್ದುಪಡಿ: ಖರ್ಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಬಿಜೆಪಿಯು ಕೇಂದ್ರದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ, ಸಂವಿಧಾನ ತಿದ್ದುಪಡಿಯಾಗುತ್ತದೆ. ಇದು ನೇರವಾಗಿ ಕೋಟ್ಯಂತರ ಜನರ ಬದುಕಿನ ಮೇಲೆ ಪರಿಣಾಮ ಬೀರುತ್ತದೆ' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆತಂಕ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಗಾಗಲೇ ಯಾರು ಏನು ತಿನ್ನಬೇಕು, ಏನು ತಿನ್ನಬಾರದು ಎಂಬ ಬಗ್ಗೆ ನಿರ್ದೇಶಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಜನರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಧಕ್ಕೆ ಬರಲಿದೆ' ಎಂದರು.


ಮಲ್ಲಿಕಾರ್ಜುನ ಖರ್ಗೆ

'ಪ್ರಧಾನಿ ನರೇಂದ್ರ ಮೋದಿ ಅವರು ಕೋವಿಡ್-19 ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳುವ ಬದಲು ಬರೀ ಭಾಷಣದಲ್ಲಿ ಕಾಲ ಕಳೆಯುತ್ತಿದ್ದಾರೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆಯನ್ನೂ ಕಡಿಮೆ ದಾಖಲಿಸಿದ್ದಾರೆ' ಎಂದು ಹೇಳಿದರು.

ನಮ್ಮ ಹೋರಾಟಕ್ಕೆ ತಾರ್ಕಿಕ ಅಂತ್ಯ ಸಿಗಲಿದೆ: ಕೂಡಲಸಂಗಮಶ್ರೀ

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ): 'ಪಂಚಮಸಾಲಿ 2ಎ ಮೀಸಲಾತಿ ಹೋರಾಟದಿಂದಾಗಿ ಸಮಾಜವನ್ನು ಎಲ್ಲೆಡೆ ಗುರುತಿಸುವಂತಾಗಿದೆ. ಶೀಘ್ರದಲ್ಲಿ ಸರ್ಕಾರ ಮೀಸಲಾತಿ ಹೋರಾಟಕ್ಕೆ ತಾರ್ಕಿಕ ಅಂತ್ಯ ನೀಡಲಿದೆ' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ವಿಶ್ವಾಸ ವ್ಯಕ್ತಪಡಿಸಿದರು.

ಭಾನುವಾರ ಇಲ್ಲಿನ ರಾಣಿ ಚನ್ನಮ್ಮ ವಿವಿಧೋದ್ದೇಶ ಸಹಕಾರಿ ಸಂಘದ 18ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ಸಮಾಜ ಅಸಂಘಟಿತವಾಗಬಾರದು ಎಂಬ ನಿಟ್ಟಿನಲ್ಲಿ ಇಡೀ ಸಮಾಜವನ್ನು ಒಗ್ಗೂಡಿಸಿಕೊಂಡು ಪಾದಯಾತ್ರೆ ಮಾಡಲಾಗಿದೆ. ಎರಡು ದಶಕಗಳಿಂದ ಮೀಸಲಾತಿಗಾಗಿ ಹೋರಾಟ, ಪ್ರತಿಭಟನೆ ಮಾಡುತ್ತ ಬರಲಾಗಿದೆ. ಹೋರಾಟದಿಂದ ಸಮಾಜದ ಶಕ್ತಿ ಇಮ್ಮಡಿಯಾಗಿದೆ' ಎಂದರು.

'ಮಹಿಳೆಯರ ಸುರಕ್ಷತೆಗೆ ಕ್ರಮ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಗಾರ್ಮೆಂಟ್ಸ್ ಉದ್ಯಮದಲ್ಲಿ ಕೆಲಸ ಮಾಡುವ ಮಹಿಳೆಯರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಈ ಕುರಿತು, ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಹಾಗೂ ಉದ್ಯಮಿಗಳ ಜೊತೆ ಚರ್ಚೆ ನಡೆಸುವೆ' ಎಂದು ಜವಳಿ ಸಚಿವ ಶಂಕರಪಾಟೀಲ ಮುನೇನಕೊಪ್ಪ ಹೇಳಿದರು.

ಗಾರ್ಮೆಂಟ್ಸ್‌ಗಳಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯ ಕುರಿತು, ಭಾನುವಾರ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಲೈಂಗಿಕ ದೌರ್ಜನ್ಯದ ದೂರುಗಳನ್ನು ಗಂಭೀರವಾಗಿ ಪರಿಗಣಿಸುವುದರ ಜೊತೆಗೆ, ಗಾರ್ಮೆಂಟ್ಸ್‌ಗಳಿಗೆ ಭೇಟಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗುವುದು' ಎಂದರು.

'ರಾಜ್ಯದಲ್ಲಿ ಗಾರ್ಮೆಂಟ್ಸ್ ಉದ್ಯಮದಲ್ಲಿ ಹೆಣ್ಣು ಮಕ್ಕಳ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಲೈಂಗಿಕ ದೌರ್ಜನ್ಯ ನಡೆಯುತ್ತಿದೆ ' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಇತ್ತೀಚೆಗಷ್ಟೇ ಕಳವಳ ವ್ಯಕ್ತಪಡಿಸಿದ್ದರು.

ರೈತರ ಆದಾಯ ಹೆಚ್ಚಳಕ್ಕೆ ಸರ್ಕಾರ ಚಿಂತನೆ: ಮುಖ್ಯಮಂತ್ರಿ ಬೊಮ್ಮಾಯಿ

ನಿರ್ದೇಶನಾಲಯ ಸ್ಥಾಪನೆಗೆ ಕ್ರಮ

ಪ್ರಜಾವಾಣಿ ವಾರ್ತೆ

ಮೈಸೂರು: 'ಕೇವಲ ಕೃಷಿ ಆದಾಯದಿಂದ ರೈತರ ಬದುಕು ಹಸನಾಗುವುದಿಲ್ಲ. ಇತರ ಮೂಲಗಳಿಂದ ಆದಾಯ ಹೆಚ್ಚಿಸುವ ಚಿಂತನೆಯನ್ನು ಸರ್ಕಾರ ಮಾಡುತ್ತಿದ್ದು, ಅದಕ್ಕಾಗಿ ರಾಜ್ಯದಲ್ಲಿ ಹೊಸ ನಿರ್ದೇಶನಾಲಯ ಸ್ಥಾಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲ್ಲಿ ಘೋಷಿಸಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘವು ರೈತ ದಿನಾಚರಣೆ ಅಂಗವಾಗಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

'ಆದಾಯ ಹೆಚ್ಚಾದರೆ ಮಾತ್ರ ರೈತಾಪಿ ವರ್ಗದ ಸ್ಥಿತಿ ಸುಧಾರಿಸಲಿದೆ. ಸಮಗ್ರ ಕೃಷಿ ಪದ್ಧತಿ ಅಳವಡಿಸಲು ರೈತರನ್ನು ಪ್ರೋತ್ಸಾಹಿಸುವುದರ ಜತೆಯಲ್ಲೇ, ಕೃಷಿಯೇತರ ಮೂಲಗಳಿಂದ ಆದಾಯ ಗಳಿಸಲು ಅವರಿಗೆ ಮಾರ್ಗದರ್ಶನ ನೀಡುವುದು ಸರ್ಕಾರದ ಉದ್ದೇಶ' ಎಂದರು.

ಮೈಸೂರಿನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹಾಗೂ ಅವರ ಪತ್ನಿ ಪದ್ಮಾ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪತ್ರಕರ್ತ ಎಚ್‌.ಆರ್‌.ರಂಗನಾಥ್, ರೈತ ಮುಖಂಡ ಟಿ.ವಿ.ಗೋಪಿನಾಥ್ ಇದ್ದಾರೆ

ಬೆಲೆ ನಿಗದಿ ದೊಡ್ಡ ಸಮಸ್ಯೆ: 'ರೈತರು ಬೆಳೆದ ಉತ್ಪನ್ನಗಳಿಗೆ ಬೆಲೆ ನಿಗದಿ ಮಾಡುವುದು ದೊಡ್ಡ ಸಮಸ್ಯೆಯಾಗಿದೆ. ಡಬ್ಲ್ಯುಟಿಒ ಒಪ್ಪಂದಕ್ಕೆ ಸಹಿ ಹಾಕಿದ ದಿನ ನಮ್ಮ ಹಣೆಬರಹವನ್ನು ಬಹುರಾಷ್ಟ್ರೀಯ ಕಂಪನಿಗಳ ಕೈಗೆ ಕೊಟ್ಟಿದ್ದೇವೆ. ಕರ್ನಾಟಕದಲ್ಲಿ ಎಪಿಎಂಸಿ ಕಾಯ್ದೆ ಬರುವುದಕ್ಕಿಂತ ಮುಂಚೆಯೇ ಖಾಸಗಿ ಮಾರುಕಟ್ಟೆಗಳು ಬಂದಿದ್ದವು. ರಿಲಯನ್ಸ್ 2007 ರಲ್ಲೇ ರಾಜ್ಯಕ್ಕೆ ಬಂದಿದೆ. ಮುಕ್ತ ಮಾರುಕಟ್ಟೆಗೆ ಅವಕಾಶ ಕಲ್ಪಿಸುವ ಒಪ್ಪಂದಗಳಿಗೆ ಸಹಿ ಹಾಕುವಾಗ ದೂರಗಾಮಿ ಪರಿಣಾಮಗಳ ಬಗ್ಗೆಯೂ ಚಿಂತಿಸಬೇಕಾಗುತ್ತದೆ' ಎಂದರು.

ಅಭಿನಂದನೆ: ರೈತ ಹೋರಾಟದಲ್ಲಿ 40 ವರ್ಷ ಪೂರೈಸಿದ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರನ್ನು ಮುಖ್ಯಮಂತ್ರಿ ಸನ್ಮಾನಿಸಿದರು.

'ವಿದ್ಯಾನಿಧಿ ಯೋಜನೆ ವಿಸ್ತರಣೆ'

'ಮುಂದಿನ ಶೈಕ್ಷಣಿಕ ಸಾಲಿನಿಂದ ರೈತ ವಿದ್ಯಾನಿಧಿ ಯೋಜನೆಯನ್ನು ಗ್ರಾಮೀಣ ಪ್ರದೇಶದ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೂ ವಿಸ್ತರಿಸಲಾಗುವುದು' ಎಂದು ಬೊಮ್ಮಾಯಿ ತಿಳಿಸಿದರು.

'ರೈತ ವಿದ್ಯಾನಿಧಿ ಯೋಜನೆ ಇಡೀ ದೇಶದಲ್ಲಿ ಕರ್ನಾಟಕದಲ್ಲಿ ಮೊದಲ ಬಾರಿ ಜಾರಿಯಾಗಿದೆ. ಇದುವರೆಗೆ 2.40 ಲಕ್ಷ ಮಕ್ಕಳಿಗೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗಿದ್ದು, ಈ ಶೈಕ್ಷಣಿಕ ಸಾಲಿನ ಕೊನೆಯ ವೇಳೆಗೆ ಐದು ಲಕ್ಷ ಮಕ್ಕಳಿಗೆ ಈ ಯೋಜನೆಯ ಲಾಭ ಸಿಗಲಿದೆ' ಎಂದರು.

'ಧರ್ಮ ರಕ್ಷಣೆಗಾಗಿ ತಲ್ವಾರ್ ಹಿಡಿದುಕೊಂಡು ಬನ್ನಿ'

ಬೆಳಗಾವಿ: 'ಹಿಂದೂ ಧರ್ಮಕ್ಕೆ ಸಂಕಟ ಎದುರಾದಾಗ ಸರ್ಕಾರ ಅಥವಾ ರಾಜಕಾರಣಿಗಳು ಮುಂದೆ ಬರುವುದಿಲ್ಲ. ಹಿಂದೂ ಕಾರ್ಯಕರ್ತರೇ ತಲ್ವಾರ್ ಹಿಡಿದುಕೊಂಡು ಹೊರಬರಬೇಕು' ಎಂದು ಹೈದ್ರಾಬಾದ್‌ನ ಭಾಗ್ಯನಗರದ ಬಿಜೆಪಿ ಶಾಸಕ ರಾಜಾಸಿಂಗ್ ಠಾಕೂರ ಹೇಳಿದರು.

ತಾಲ್ಲೂಕಿನ ಗಣೇಶಬಾಗ್‌ನಲ್ಲಿ ಧನಂಜಯ ಜಾಧವ ಮಿತ್ರ ಪರಿವಾರ ಭಾನುವಾರ ಹಮ್ಮಿಕೊಂಡಿದ್ದ ಹಿಂದೂ ಸಂಘಟನೆ ಕಾರ್ಯಕರ್ತರ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಾಸಕ ಅನಿಲ ಬೆನಕೆ, ಸಂಸದೆ ಮಂಗಲಾ ಅಂಗಡಿ ಪಾಲ್ಗೊಂಡಿದ್ದರು.

ಹುಬ್ಬಳ್ಳಿ: ನಾಳೆಯಿಂದ ಬಿಜೆಪಿ ಕಾರ್ಯಕಾರಿಣಿ ಸಭೆ

ಚುನಾವಣೆ ಫಲಿತಾಂಶದ ಚರ್ಚೆ?

ಬೆಂಗಳೂರು:ಇದೇ 28 ಮತ್ತು 29 ರಂದು ಹುಬ್ಬಳ್ಳಿಯಲ್ಲಿ ನಡೆಯಲಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ವಿಧಾನಪರಿಷತ್ ಚುನಾವಣೆ ಫಲಿತಾಂಶ, ಮುಂಬರುವ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆ ಕುರಿತು ಚರ್ಚೆ ನಡೆಯಲಿದೆ.

ಅಲ್ಲದೆ, 2023 ರ ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸಿಕೊಳ್ಳುವುದರ ಬಗ್ಗೆಯೂ ಸಮಾಲೋಚನೆ ನಡೆಯಲಿದೆ. ಈ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಭಾಗವಹಿಸಲಿದ್ದಾರೆ.

ಜನವರಿ 8-9 ಕ್ಕೆ ಶಾ ಭೇಟಿ: ಗೃಹ ಸಚಿವ ಅಮಿತ್ ಶಾ ಅವರು ಜನವರಿ 8 ಮತ್ತು 9ಕ್ಕೆ ಬೆಂಗಳೂರಿಗೆ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ಪಕ್ಷದ ಪದಾಧಿಕಾರಿಗಳು, ಶಾಸಕರು ಮತ್ತು ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಲಕ್ಷ್ಮಣ ಸವದಿ ಬಿಜೆಪಿ ಉಪಾಧ್ಯಕ್ಷ

ಬೆಂಗಳೂರು: ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ ಮತ್ತು ನಯನಾ ಗಣೇಶ್ ಅವರನ್ನು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷರನ್ನಾಗಿ ನೇಮಿಸಿದ್ದು, ಇದರಿಂದ ಪಕ್ಷದಲ್ಲಿ ಉಪಾಧ್ಯಕ್ಷರ ಸಂಖ್ಯೆ 12 ಕ್ಕೇರಿದೆ.

ಪಕ್ಷದ ಮುಖ್ಯ ವಕ್ತಾರರಾಗಿದ್ದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರನ್ನು ಅನಿವಾಸಿ ಭಾರತೀಯ ವಿಭಾಗದ ಸಂಚಾಲಕರನ್ನಾಗಿ ನೇಮಿಸಿದ್ದು, ಮೈಸೂರಿನ ಎಂ.ಜಿ.ಮಹೇಶ್ ಅವರನ್ನು ರಾಜ್ಯ ಮುಖ್ಯ ವಕ್ತಾರರನ್ನಾಗಿ ನೇಮಿಸಲಾಗಿದೆ.

ಪ್ರಕೋಷ್ಠಗಳ ರಾಜ್ಯ ಸಹ ಸಂಯೋಜಕ- ಜಯತೀರ್ಥಕಟ್ಟಿ, ಕಾನೂನು ಪ್ರಕೋಷ್ಠ ರಾಜ್ಯ ಸಂಚಾಲಕ- ಎಚ್.ಯೋಗೇಂದ್ರ, ಕಾನೂನು ಪ್ರಕೋಷ್ಠದ ಸಹ ಸಂಚಾಲಕ- ವಿನೋದ್ ಪಾಟೀಲ, ಮೀನುಗಾರರ ಪ್ರಕೋಷ್ಠ ರಾಜ್ಯ ಸಂಚಾಲಕ- ಗೋವಿಂದ ಬಾಂಡೇಕರ, ಮೀನುಗಾರರ ಪ್ರಕೋಷ್ಠ ಸಹ ಸಂಚಾಲಕ- ನಾಗಪ್ಪ ಅಂಬಿ, ಫಲಾನುಭವಿಗಳ ಪ್ರಕೋಷ್ಠ, ರಾಜ್ಯ ಸಂಚಾಲಕ- ಬಸವರಾಜ ಮತ್ತಿಮೋಡ.

ಜಿಲ್ಲಾ ಪ್ರಭಾರಿಗಳು: ಜಗದೀಶ ಹಿರೇಮನಿ- ಮಂಡ್ಯ, ಅಮರನಾಥ ಪಾಟೀಲ- ಯಾದಗಿರಿ, ಕೆ.ಶಿವಲಿಂಗಪ್ಪ-ದಾವಣಗೆರೆ, ಸಿ.ಆರ್. ಪ್ರೇಮಕುಮಾರ್- ಚಿತ್ರದುರ್ಗ, ಕೆ.ವಿ.ಶಿವಪ್ಪ- ಬೆಂಗಳೂರು ಉತ್ತರ ಜಿಲ್ಲೆ, ಮುರಹರಗೌಡ- ಬಳ್ಳಾರಿ, ಚನ್ನಬಸವನಗೌಡ- ವಿಜಯನಗರ.

ಕರ್ನಾಟಕ ಸರ್ಕಾರ
(ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ)
ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ
ಇ-ಟೆಂಡರ್ ಹರಾಜು ಪ್ರಕಟಣೆ
ಮಾನ್ಯ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಡಿವಿಎಸ್(1)ಸಿ.ಆರ್: 65/2021-22, ದಿನಾಂಕ: 06-11-2021 ಆದೇಶದ ಮೇರೆಗೆ ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 2021-22ನೇ ಸಾಲಿನ ಭಕ್ತಾದಿಗಳ ಅನುಕೂಲಕ್ಕಾಗಿ ಹಾಗೂ ಅನ್ನದಾಸೋಹ ಭವನಕ್ಕೆ 1500 ಲೀಟರ್ ಆರ್‌ಓ ಪ್ಲಾಟ್ (ಶುದ್ಧ ಕುಡಿಯುವ ನೀರಿನ ಘಟಕ) ಮತ್ತು **DG SET 150 KV** (ಶಬ್ಧ ರಹಿತ ಜನರೇಟರ್) ಟೆಂಡರ್ ಕಂ ಹರಾಜು ಪ್ರಕ್ರಿಯೆಯನ್ನು ಇ-ಟೆಂಡರ್ ಮೂಲಕ ನಡೆಸಲಾಗುತ್ತದೆ. ಸವಾಲುದಾರರು ಟೆಂಡರ್ ಹಾಕಲು ಕೊನೆಯ ದಿನಾಂಕ: 27/12/2021 ರಿಂದ 02/01/2022 ರ ಬೆಳಿಗ್ಗೆ 11-00 ಗಂಟೆಯವರೆಗೆ ಇರುತ್ತದೆ. 1500 ಲೀಟರ್ ಆರ್‌ಓ ಪ್ಲಾಟ್ (ಶುದ್ಧ ಕುಡಿಯುವ ನೀರಿನ ಘಟಕ) ಮತ್ತು **DG SET 150 KV** (ಶಬ್ಧ ರಹಿತ ಜನರೇಟರ್) ಹಕ್ಕಿನ ಲೈವ್ ಆಕ್ಷನ್ ದಿನಾಂಕ: 02/01/2022 ರಂದು ಬೆಳಿಗ್ಗೆ 11-00 ಗಂಟೆಗೆ ಇರುತ್ತದೆ. ಹೆಚ್ಚಿನ ವಿವರಗಳನ್ನು ದೇವಾಲಯದ ಕಚೇರಿಯಿಂದ ಪಡೆಯಬಹುದು.
ವೆಬ್‌ಸೈಟ್‌ನಲ್ಲಿ ನೋಂದಾಯಿತ ತಕ್ಕ ಇ.ಎಂ.ಡಿ ಮೊಬಲಗು 1500 ಲೀಟರ್ ಆರ್‌ಓ ಪ್ಲಾಟ್ (ಶುದ್ಧ ಕುಡಿಯುವ ನೀರಿನ ಘಟಕ) ರೂ. 50,000/- **DG SET 150 KV** (ಶಬ್ಧ ರಹಿತ ಜನರೇಟರ್) ರೂ. 50,000/- ರೂಪಾಯಿಗಳು
ಸಹಿ/- ದೇವಾಲಯ ನಿರ್ವಾಹಣಾಧಿಕಾರಿ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲಮಂಡಲಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ. ಗಳಲ್ಲಿ)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
ಮುಖ್ಯ ಅಭಿಯಂತರರ ಕಛೇರಿ (ತ್ಯಾಜ್ಯನೀರು), 5ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.					
1	ಅಮುಅ (ತ್ಯಾನೀನಿ-3) ಎಸ್‌ಟಿಪಿ ಕೆ-ವ್ಯಾಲಿ	ಬೆಂಜಮಂ/ಅಮುಅ(ತ್ಯಾನೀನಿ-3)/ಪಿಬಿ/449/2020-21 ದಿನಾಂಕ: 20.12.2021	ರೂ. 1,32,991/- / ರೂ. 3,325/-	03.01.2022ರ ಸಂಜೆ 4.00 ಗಂಟೆಯವರೆಗೆ	05.01.2022ರ ಸಂಜೆ 4.05 ಗಂಟೆಗೆ
ಸಹಿ/- ಅಮುಅ(ತ್ಯಾನೀನಿ-3)-(ಎಸ್‌ಟಿಪಿ ಕೆ-ವ್ಯಾಲಿ)					
2	ಎಸ್‌ಟಿಪಿ ಸಿ-ವ್ಯಾಲಿ	ಬೆಂಜಮಂ/ಕಾನಿಅ(ಎಸ್‌ಟಿಪಿ)ಸಿವಿ/ಪಿಬಿ/522/2021-22 ದಿನಾಂಕ: 29.10.2021	ರೂ. 5,23,023/- / ರೂ. 13,100/-	10.01.2022ರ ಸಂಜೆ 4.00 ಗಂಟೆಯವರೆಗೆ	12.01.2022ರ ಮಧ್ಯಾಹ್ನ 3.00 ಗಂಟೆಯ ನಂತರ
3		ಬೆಂಜಮಂ/ಕಾನಿಅ(ಎಸ್‌ಟಿಪಿ)ಸಿವಿ/ಪಿಬಿ/521/2021-22 ದಿನಾಂಕ: 29.10.2021	ರೂ. 1,86,838/- / ರೂ. 4,700/-		
4		ಬೆಂಜಮಂ/ಕಾನಿಅ(ಎಸ್‌ಟಿಪಿ)ಸಿವಿ/ಪಿಬಿ/520/2021-22 ದಿನಾಂಕ: 29.10.2021	ರೂ. 2,64,304/- / ರೂ. 6,700/-		
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಎಸ್‌ಟಿಪಿ ಸಿ-ವ್ಯಾಲಿ)					
5	(ತ್ಯಾನೀನಿ) -ಹೆಚ್	ಬೆಂಜಮಂ/ಕಾನಿಅ(ತ್ಯಾನೀನಿ)-ಹೆಚ್/ಪಿಬಿ/1307/2021-22 ದಿನಾಂಕ: 24.12.2021	ರೂ. 57.48 ಲಕ್ಷಗಳು / ರೂ. 1.15 ಲಕ್ಷಗಳು	03.01.2022ರ ಸಂಜೆ 5.30 ಗಂಟೆಯವರೆಗೆ	05.01.2022ರ ಮಧ್ಯಾಹ್ನ 12.00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ)-ಹೆಚ್					
ಮುಖ್ಯ ಅಭಿಯಂತರರ ಕಛೇರಿ (ಪೂರ್ವ), 7ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.					
6	ದಕ್ಷಿಣ	ಬೆಂಜಮಂ/ಕಾನಿಅ(ದಕ್ಷಿಣ)/ಸಅ/2358 /2021-22 ದಿನಾಂಕ: 18.12.2021	ರೂ. 18,55,037/- / ರೂ. 46,400/-	13.01.2022ರ ಸಂಜೆ 4.00 ಗಂಟೆಯವರೆಗೆ	17.01.2022ರ ಮಧ್ಯಾಹ್ನ 3.00 ಗಂಟೆಯ ನಂತರ
7		ಬೆಂಜಮಂ/ಕಾನಿಅ(ದಕ್ಷಿಣ)/ಸಅ/2351 /2021-22 ದಿನಾಂಕ: 18.12.2021 (ಪರಿಶಿಷ್ಟ ಜಾತಿ ಪ್ರವರ್ಗಕ್ಕೆ ಮೀಸಲಿರಿಸಿದೆ)	ರೂ. 47,36,162/- / ರೂ. 47,400/-		
8		ಬೆಂಜಮಂ/ಕಾನಿಅ(ದಕ್ಷಿಣ)/ಸಅ/2352 /2021-22 ದಿನಾಂಕ: 18.12.2021	ರೂ. 23,51,664/- / ರೂ. 50,000/-		
9		ಬೆಂಜಮಂ/ಕಾನಿಅ(ದಕ್ಷಿಣ)/ಸಅ/2353 /2021-22 ದಿನಾಂಕ: 18.12.2021 (ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ ಮೀಸಲಿರಿಸಿದೆ)	ರೂ. 30,71,742/- / ರೂ. 30,800/-		
10		ಬೆಂಜಮಂ/ಕಾನಿಅ(ದಕ್ಷಿಣ)/ಸಅ/2354 /2021-22 ದಿನಾಂಕ: 18.12.2021	ರೂ. 46,89,842/- / ರೂ. 93,800/-		
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ದಕ್ಷಿಣ)					
ಮುಖ್ಯ ಅಭಿಯಂತರರ ಕಛೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.					
11	ವಾಯುವ್ಯ-2	ಬೆಂಜಮಂ/ಕಾನಿಅ(ವಾಯುವ್ಯ-2)/ಪಿಬಿ/2225/2021-22 ದಿನಾಂಕ: 23.12.2021	ರೂ. 14,78,730/- / ರೂ. 37,000/-	03.01.2022ರ ಸಂಜೆ 4.00 ಗಂಟೆಯವರೆಗೆ	05.01.2022ರ ಮಧ್ಯಾಹ್ನ 3.00 ಗಂಟೆಯ ನಂತರ
12			ರೂ. 14,85,610/- / ರೂ. 37,200/-		
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ವಾಯುವ್ಯ-2)					
13	ಯುಎಫ್ ಡಬ್ಲ್ಯೂ	ಬೆಂಜಮಂ/ಕಾನಿಅ(ಯುಎಫ್‌ಡಬ್ಲ್ಯೂ)/ಪಿಬಿ/850/2021-22 ದಿನಾಂಕ: 24.12.2021	ರೂ. 45.55 ಲಕ್ಷಗಳು / ರೂ. 0.911 ಲಕ್ಷಗಳು	12.01.2022ರ ಸಂಜೆ 4.00 ಗಂಟೆಯವರೆಗೆ	13.01.2022ರ ಸಂಜೆ 4.00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಯುಎಫ್‌ಡಬ್ಲ್ಯೂ)					
ಮುಖ್ಯ ಅಭಿಯಂತರರ ಕಛೇರಿ (ವಿನ್ಯಾಸ), 9ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು-560009.					
14	(ಡಿಸಿ & ಕವಾನಿ)	ಬೆಂಜಮಂ/ಕಾನಿಅ(ಡಿಸಿ&ಕವಾನಿ)ಡಿ/ಪಿಬಿ/ಕವಾನಿ/4472/2021-22 ದಿನಾಂಕ: 22.12.2021	ರೂ. 15,92,070/- / ರೂ. 39,802/-	10.01.2022ರ ಸಂಜೆ 4.00 ಗಂಟೆಯವರೆಗೆ	12.01.2022ರ ಮಧ್ಯಾಹ್ನ 12.00 ಗಂಟೆಗೆ
15		ಬೆಂಜಮಂ/ಕಾನಿಅ(ಡಿಸಿ&ಕವಾನಿ)ಡಿ/ಪಿಬಿ/ಕವಾನಿ/4470/2021-22 ದಿನಾಂಕ: 22.12.2021	ರೂ. 18,93,023/- / ರೂ. 47,326/-		
16		ಬೆಂಜಮಂ/ಕಾನಿಅ(ಡಿಸಿ&ಕವಾನಿ)ಡಿ/ಪಿಬಿ/ಕವಾನಿ/4468/2021-22 ದಿನಾಂಕ: 22.12.2021	ರೂ. 13,51,890/- / ರೂ. 33,797/-		
17		ಬೆಂಜಮಂ/ಕಾನಿಅ(ಡಿಸಿ&ಕವಾನಿ)ಡಿ/ಪಿಬಿ/ಕವಾನಿ/4474/2021-22 ದಿನಾಂಕ: 22.12.2021	ರೂ. 81,88,300/- / ರೂ. 1,63,766/-	04.01.2022ರ ಸಂಜೆ 4.00 ಗಂಟೆಯವರೆಗೆ	06.01.2022ರ ಮಧ್ಯಾಹ್ನ 12.00 ಗಂಟೆಗೆ
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಡಿಸಿ&ಕವಾನಿ)					

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/DDU/Zen/R.O:2532/2020-21
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
Azadi Ka Amrit Mahotsav
10 ಮತ್ತು 13 ವರ್ಷ ಪಕ್ವತಾ ಅವಧಿಯ ಕರ್ನಾಟಕ ಸರ್ಕಾರ ಭದ್ರತಾ ಪತ್ರಗಳ ಹರಾಜು
ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು **₹4000 ಕೋಟಿ** ರೂಪಾಯಿಗಳ (ಮುಖ ಬೆಲೆ) ಭದ್ರತಾ ಪತ್ರಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.
ಬಹುದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸಲ್ಯೂಶನ್ (ಈ-ಕುಬೇರ್) ವ್ಯವಸ್ಥೆಯ ಮೂಲಕ **28 ಡಿಸೆಂಬರ್, 2021 (ಮಂಗಳವಾರ)**ರಂದು ನಡೆಸಲಾಗುವುದು. ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ **(https://rbiretaildirect.org.in)** ನಾನ್-ಕಾಂಪಿಟೇಟಿವ್ ಸ್ಕೀಮ್ ಅನುಸಾರ ವೈಯಕ್ತಿಕ ವಿನಿಯೋಜಕರು ಕೂಡ ಬಿಡ್ ಮಾಡಬಲ್ಲರು. ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ **24 ಡಿಸೆಂಬರ್, 2021 (ಶುಕ್ರವಾರ)** ದಿನಾಂಕದ ಪತ್ರಿಕಾ ಪ್ರಕಟಣೆ **RBI** ವೆಬ್ ತಾಣ **(www.rbi.org.in)**ಯನ್ನು ನೋಡಿ.
"ಹಣ ನೀಡುವ ಭರವಸೆ ಕೊಡುವ ಇ-ಮೇಲ್ / ಎಸ್‌ಎಂಎಸ್ / ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ"

ಕರ್ನಾಟಕ ಸರ್ಕಾರ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
ನಂ. ಎಫ್‌ಡಿ 01 ಬಿಎಂಬಿ 2021 ದಿನಾಂಕ: 23.12.2021
ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯೂರಿಟಿಗಳು)
1. ಅಂದಾಜು ಮೊತ್ತ : ಒಟ್ಟು ರೂ.4000 ಕೋಟಿಗಳು (ರೂ.2000 ಕೋಟಿ - 10 ವರ್ಷಗಳಿಗೆ) ಮತ್ತು (ರೂ.2000 ಕೋಟಿ - 13 ವರ್ಷಗಳಿಗೆ)
2. ನೀಡುವ ವಿಧಾನ : ಪಿಡಿಓ, ಆರ್‌ಬಿಐ, ಮುಂಬಯಿ (ಫೋರ್ಟ್) ಮೂಲಕ ಹರಾಜು
3. ಹರಾಜು ದಿನಾಂಕ : ಡಿಸೆಂಬರ್ 28, 2021
ಕರ್ನಾಟಕ ಸರ್ಕಾರವು ಮೇಲ್ಕಂಡ ಸೆಕ್ಯೂರಿಟಿಗಳಿಗೆ ಚಂದಾ ಆಹ್ವಾನಿಸುತ್ತಿದೆ. ನೋಟಿಫಿಕೇಷನ್ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಓ, ಆರ್.ಬಿ.ಐ, ಬೆಂಗಳೂರು ಇವರಿಂದ ಪಡೆದುಕೊಳ್ಳಬಹುದು. ರಿಟೇಲ್ ಹೂಡಿಕೆದಾರರನ್ನು ಪ್ರೋತ್ಸಾಹಿಸಲು ಆರ್‌ಬಿಐ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಕಲ್ಪಿಸಿದೆ. ಪ್ರಕಟಣೆಯಲ್ಲಿ ತಿಳಿಸಿದ ಕರ್ನಾಟಕ ಸರ್ಕಾರದ ಸ್ಟಾಕ್ ಮೊತ್ತದ ಶೇಕಡ 10 ರಷ್ಟು ಮೊತ್ತದ ಸ್ಟಾಕ್‌ಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವುದು. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆಯ ಮಾಹಿತಿಯು ವೆಬ್‌ಸೈಟ್ **www.rbi.org.in** ನಲ್ಲಿ ಲಭ್ಯವಿದೆ.
ವಾಸಾಸಂಇ/ಉ.ನಿ.ನ/64/ಎಂಸಿಎ/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: 080-25591325, ಇ-ಮೇಲ್: bowringmedicalcollege@gmail.com
ಸಂಖ್ಯೆ:ಎಸ್‌ಎಬಿವಿಎಂಸಿಆರ್‌ಐ/ಇ-ಟೆಂಡರ್/Diet/16/2021-22 ದಿನಾಂಕ: 24-12-2021
ಟೆಂಡರ್ ಅಧಿಸೂಚನೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು DIET ARTICLES ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ-ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.
ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: **www.eproc.karnataka.gov.in** ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ **ರೂ. 5,000/-** ಗಳ ಡಿ.ಡಿ.ಯನ್ನು **ನಿರ್ದೇಶಕರು ಹಾಗೂ ಡೀನ್, ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು** ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನನ್ನು ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ-ಮೇಲ್: **bowringmedicalcollege@gmail.com** ಮತ್ತು ದೂರವಾಣಿ ಸಂಖ್ಯೆ: **080-25591325** ನ್ನು ಸಂಪರ್ಕಿಸಬಹುದು.
1) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸುವ ದಿನಾಂಕ: **28-12-2021**. 2) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: **28-01-2022 ರಂದು ಮಧ್ಯಾಹ್ನ 3.00 ಗಂಟೆಯವರೆಗೆ.** 3) ಪೂರ್ವ ಭಾವಿ ಬಿಡ್ ಸಭೆಯ ದಿನಾಂಕ: **04-01-2022ರಂದು ಬೆಳಿಗ್ಗೆ 11.00 ಗಂಟೆಗೆ.** 4) ಟೆಂಡರ್‌ಗಳನ್ನು ತೆರೆಯುವ (ಮೊದಲನೆ ಲಕೋಟೆ) ದಿನಾಂಕ: **01-02-2022ರಂದು ಸಂಜೆ 4.00 ಗಂಟೆಗೆ.** 5) ಮಾದರಿಗಳನ್ನು ಸಲ್ಲಿಸುವ ದಿನಾಂಕ: **04-01-2022ರ ಬೆಳಿಗ್ಗೆ 9.00 ರಿಂದ 4.00 ಗಂಟೆವರೆಗೆ 6) ಸ್ಥಳ: ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಶಿವಾಜಿನಗರ, ಬೆಂಗಳೂರು - 560001**. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್/ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.
ಸಹಿ/- ನಿರ್ದೇಶಕರು ಹಾಗೂ ಡೀನ್
ವಾಸಾಸಂಇ/ಬೆಂ.ನ/ಅಡ್ವಟೋರ್/2542/2021-22 ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
#16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ,
ವಸಂತನಗರ, ಬೆಂಗಳೂರು-560052 ಇವರ ಮುಂದೆ
ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪ್ರಕರಣ 62 ಮತ್ತು 64 ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಆರ್ಥಿಕ ವರ್ಷ 2020-21 ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ(ಎ.ಪಿ.ಆರ್) ಮತ್ತು 2022-23, 2023-24 ಮತ್ತು 2024-25 ರ ಆರ್ಥಿಕ ವರ್ಷಗಳಿಗೆ ಬಹು ವಾರ್ಷಿಕ ಜಕಾತಿ ನಿಯಮಾವಳಿ ಅನುಸಾರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್), ನಿರೀಕ್ಷಿತ ಆದಾಯ (ಇ.ಆರ್.ಸಿ) ಅನುಮೋದನೆಗಾಗಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿ ಬಗ್ಗೆ.
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು-560009. ....ಅರ್ಜಿದಾರರು
ಅಧಿಸೂಚನೆ
ಕವಿಪ್ರನಿನಿಯ ಎಪಿಆರ್ 2020-21 ಮತ್ತು ಎ.ಆರ್.ಆರ್ 2022-23, 2023-24 ಮತ್ತು 2024-25ರ ಬಗ್ಗೆ.
1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006ರ ಪ್ರಕಾರ ಆರ್ಥಿಕ ವರ್ಷ 2020-21ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಆರ್ಥಿಕ ವರ್ಷ 2022-23, 2023-24 ಮತ್ತು 2024-25ರ ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್) ಹಾಗು ವಿದ್ಯುತ್ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಗೌರವಾನ್ವಿತ ಆಯೋಗವು ಇವುಗಳ ಪರಿಷ್ಕರಣೆಯ ಬಗ್ಗೆ ಪರಿಶೀಲಿಸುತ್ತಿದೆ.
2.0 ಆರ್ಥಿಕ ವರ್ಷ 2020-21ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯಲ್ಲಿ ವಾರ್ಷಿಕ ಆದಾಯದ ಅಗತ್ಯತೆಯು (ವೆಚ್ಚ) ₹ **4077.71** ಕೋಟಿಯಾಗಿರುತ್ತದೆ. ಹಾಗೂ ಒಟ್ಟು ₹ **557.01** ಕೋಟಿ ಕಂದಾಯ ಕೊರತೆ ಬಂದಿರುತ್ತದೆ. ಸದರಿ ಕೊರತೆಯನ್ನು ಆರ್ಥಿಕ ವರ್ಷ 2022-23ರಲ್ಲಿ ವಸೂಲಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.
3.0 ಕವಿಪ್ರನಿನಿಯ ಆರ್ಥಿಕ ವರ್ಷ 2022-23, 2023-24 ಮತ್ತು 2024-25ರ ಪ್ರಸ್ತುತ ಆರ್ಥಿಕ ವಾರ್ಷಿಕ ಆದಾಯದ ಅಗತ್ಯತೆಯಾದ ₹ **6193.27**, ₹ **6450.72**, ₹ **7377.37** ಕೋಟಿಗಳನ್ನು ಪ್ರಸ್ತಾವಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ, ಕ್ರಮವಾಗಿ ₹ **179640/-**, ₹ **174221/-**, ₹ **187863/-** ರಂತೆ ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲಿ ಮಾಡಲು ಪ್ರಸ್ತಾಪಿಸಿದೆ.
4.0 ಪ್ರಸ್ತುತ, ಆಯೋಗದ ಅನುಮೋದಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ ₹ **1,51,518/-** ಇರುತ್ತದೆ.
5.0 ವಿದ್ಯುಚ್ಛಕ್ತಿ ಅಧಿನಿಯಮ 2003ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಮೇಲಿನ ಪ್ರಸ್ತಾವನೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ(ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ **ಸ್ವೀಕರಣಾಧಿಕಾರಿ, ಕಾರ್ಯದರ್ಶಿಗಳ ಕಛೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16ಸಿ-1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು-560052** ಅವರಿಗೆ ಸಲ್ಲಿಸಬಹುದು.
6.0 ಆಸಕ್ತಿ ಇರುವವರು ಪರಾಮರ್ಶೆಗಾಗಿ ಅಥವಾ ಕೊಳ್ಳಲು ಇಚ್ಛಿಸಿದಲ್ಲಿ ಎಪಿಆರ್ ಮತ್ತು ಬಹು ವಾರ್ಷಿಕ ದರದ ಪ್ರಸ್ತಾವನೆಯ ಪ್ರತಿಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮತ್ತು ವಿಸಕಂಗಳ ಈ ಕೆಳಕಂಡ ಕಛೇರಿಗಳಲ್ಲಿ ಲಭ್ಯವಿರುತ್ತದೆ.
1. **ಎಲ್ಲಾ ಮುಖ್ಯ ಇಂಜಿನಿಯರ್(ವಿದ್ಯುತ್), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ(ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ನಿಗಮ ಕಾರ್ಯಾಲಯ, ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**
7.0 ಎಪಿಆರ್/ಎಆರ್‌ಆರ್ ಪ್ರತಿಗಳನ್ನು ಕೊಳ್ಳಲು ಇಚ್ಛಿಸುವವರು ಎಪಿಆರ್ ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ ₹ **103/-** ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ₹ **102/-** ರಂತೆ ಮತ್ತು ಎಆರ್‌ಆರ್ ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ ₹ **280/-** ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ₹ **275/-**ರಂತೆ ನಗದು/ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ ₹ **1/-** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.
8.0 ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ಅಧಿಸೂಚನೆ ಹೊರಡಿಸಿದ **30 ದಿನಗಳಲ್ಲಿ** ನೇರವಾಗಿ **ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ** ಕಛೇರಿಗೆ ಕಳುಹಿಸಬೇಕು. ಅನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಈ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿದ ಆಕ್ಷೇಪಣೆಗಳ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು** ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-560 009.

ಲಸಿಕೆ ಅಭಿಯಾನದ ಸಾಧನೆ ಅಭೂತಪೂರ್ವ: ಪ್ರಧಾನಿ 'ಮನದ ಮಾತು'

'ಓಮೈಕ್ರಾನ್ ವಿರುದ್ಧ ಜನ ಜಾಗೃತಿಯೇ ಶಕ್ತಿ'

ನವದೆಹಲಿ (ಪಿಟಿಐ): ಕೊರೊನಾ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ವಿರುದ್ಧದ ಹೋರಾಟದಲ್ಲಿ ವೈಯಕ್ತಿಕ ಜಾಗೃತಿ ಮತ್ತು ಶಿಸ್ತು ದೇಶದ ಬಹುದೊಡ್ಡ ಶಕ್ತಿ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದ್ದಾರೆ. 'ಮನದ ಮಾತು' ರೇಡಿಯೊ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೋವಿಡ್–19 ತಡೆ ಲಸಿಕೆ ಹಾಕಿಸುವಿಕೆಯ ಜಾಗತಿಕ ಅಂಕಿ ಅಂಶಗಳಿಗೆ ಹೋಲಿಸಿದರೆ, ಲಸಿಕೆ ಅಭಿಯಾನದಲ್ಲಿ ಭಾರತವು ಅಭೂತಪೂರ್ವ ಎನ್ನುವಂತಹ ಸಾಧನೆ ಮಾಡಿದೆ. ಹಾಗಿದ್ದರೂ ಜನರು ವೈರಾಣುವಿನ ಹೊಸ ತಳಿಯ ಬಗ್ಗೆ ಎಚ್ಚರದಿಂದ ಇರಬೇಕು. ಓಮೈಕ್ರಾನ್ ತಳಿಯ ಬಗ್ಗೆ ವಿಜ್ಞಾನಿಗಳು ನಿರಂತರ ಅಧ್ಯಯನ ನಡೆಸುತ್ತಿದ್ದಾರೆ. ಪ್ರತಿ ದಿನವೂ ಅವರಿಗೆ ಹೊಸ ಹೊಸ ಮಾಹಿತಿಗಳು ಸಿಗುತ್ತಿವೆ. ಅವರ ಸಲಹೆಗಳ ಆಧಾರದಲ್ಲಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಮೋದಿ ಹೇಳಿದ್ದಾರೆ.

'ನಮ್ಮ ಸಾಮೂಹಿಕ ಶಕ್ತಿಯು ಕೊರೊನಾವನ್ನು ಸೋಲಿಸಲಿದೆ. ಈ ಹೊಣೆಗಾರಿಕೆ ಭಾವದೊಂದಿಗೆ ನಾವು 2022ನೇ ವರ್ಷಕ್ಕೆ ಪ್ರವೇಶಿಸಬೇಕಿದೆ' ಎಂದು ಅವರು ಕರೆ ಕೊಟ್ಟಿದ್ದಾರೆ.

'ಲಸಿಕೆ ನೀಡಿಕೆಯು 140 ಕೋಟಿ ಡೋಸ್‌ಗಳನ್ನು ಮೀರಿ ಮುಂದೆ ಸಾಗಿದೆ ಎಂಬುದು ಪ್ರತಿ ಭಾರತೀಯನ ಸಾಧನೆ. ಪ್ರತಿಯೊಬ್ಬ ಭಾರತೀಯ ವ್ಯವಸ್ಥೆ, ವಿಜ್ಞಾನ ಮತ್ತು ವಿಜ್ಞಾನಿಗಳ ಮೇಲೆ ಇರಿಸಿರುವ ವಿಶ್ವಾಸವನ್ನು ಇದು ತೋರಿಸುತ್ತದೆ' ಎಂದು ಹೇಳಿದ್ದಾರೆ.

ಭಾರತೀಯ ಸಂಸ್ಕೃತಿ ಬಗ್ಗೆ ತಿಳಿದುಕೊಳ್ಳುವ ಹಂಬಲ ಜಗತ್ತಿನಲ್ಲಿ ಹೆಚ್ಚಾಗಿದೆ. ಸರ್ಬಿಯಾದ ವಿದ್ವಾಂಸ ಡಾ. ಮೊಮಿರ್ ನಿಕಿಚ್ ಅವರು ಸಂಸ್ಕೃತ–ಸರ್ಬಿಯಾ ಭಾಷೆಯ ಪದಕೋಶ ರಚಿಸಿದ್ದಾರೆ ಎಂದು ಮೋದಿ ಹೇಳಿದರು. ಮಂಗೋಲಿಯಾದ ಪ್ರಾಧ್ಯಾಪಕ 93 ವರ್ಷದ ಜೆ. ಜೆಂಡೆಧ್‌ರಾಮ್ ಭಾರತದ 40ಕ್ಕೂ ಹೆಚ್ಚು ಪ್ರಾಚೀನ ಕೃತಿಗಳನ್ನು ನಾಲ್ಕು ದಶಕಗಳಲ್ಲಿ ಮಂಗೋಲಿಯಾ ಭಾಷೆಗೆ ಅನುವಾದಿಸಿದ್ದಾರೆ ಎಂದರು.

ಪ್ರಧಾನಿ ಹೇಳಿದ್ದೇನು?

- ಪ್ರತೀ ವರ್ಷದಂತೆ ಈ ವರ್ಷವೂ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮ ನಡೆಯಲಿದೆ. ವಿದ್ಯಾರ್ಥಿಗಳು Mygov.in ವೆಬ್‌ಸೈಟ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು
- ಮೊಬೈಲ್ ಪರದೆ ನೋಡುವ ಸಮಯ ಹೆಚ್ಚಾಗಿರುವ ಈ ಕಾಲದಲ್ಲಿಯೂ ಪುಸ್ತಕ ಓದುವಿಕೆಯು ಹೆಚ್ಚು ಜನಪ್ರಿಯ ಆಗಬೇಕು. 'ಮನದ ಮಾತು' ಕೇಳುಗರು ತಮ್ಮ ನೆಚ್ಚಿನ ಐದು ಪುಸ್ತಕಗಳ ಹೆಸರು ಉಲ್ಲೇಖಿಸಬೇಕು
- ಜನರು ತಮ್ಮ ಕನಸುಗಳನ್ನು ನನಸಾಗಿಸಬೇಕು. ಅದಕ್ಕಾಗಿ ದೊಡ್ಡದ್ದನ್ನು ಯೋಚಿಸಬೇಕು, ದೊಡ್ಡ ಕನಸು ಕಾಣಬೇಕು ಮತ್ತು ಶ್ರಮ ವಹಿಸಿ ಕೆಲಸ ಮಾಡಬೇಕು
- ತಮ್ಮ ಸರ್ಕಾರದ ಸಾಧನೆಗಳನ್ನು ಹೇಳಿಕೊಳ್ಳುವುದಕ್ಕಿಂತ, ಉತ್ತಮ ಕೆಲಸ ಮಾಡುತ್ತಿದ್ದು ಮಾಧ್ಯಮದ ಗಮನದಿಂದ ದೂರವೇ ಉಳಿದಿರುವ ಅಸಂಖ್ಯ ಜನರ ಬಗ್ಗೆ ಮಾತನಾಡುವುದಕ್ಕೆ ಮನದ ಮಾತು ಕಾರ್ಯಕ್ರಮವನ್ನು ಬಳಸಿಕೊಳ್ಳುತ್ತಿದ್ದೇನೆ

ವರುಣ್ ಸ್ಮರಣೆ

ತಮಿಳುನಾಡಿನ ಕೂನೂರು ಸಮೀಪ ಸೇನಾ ಹೆಲಿಕಾಪ್ಟರ್ ಪತನದಲ್ಲಿ ಗಾಯಗೊಂಡು, ಬೆಂಗಳೂರಿನ ಆಸ್ಪತ್ರೆಯಲ್ಲಿ ನಂತರ ಮೃತಪಟ್ಟ ಗ್ರೂಪ್ ಕ್ಯಾಪ್ಟನ್ ವರುಣ್ ಸಿಂಗ್ ಅವರನ್ನು ಪ್ರಧಾನಿ ನೆನಪಿಸಿಕೊಂಡಿದ್ದಾರೆ. ಅಪ್ರತಿಮ ಕೌಶಲಕ್ಕಾಗಿ ಶೌರ್ಯ ಚಕ್ರ ಪ್ರಶಸ್ತಿ ಪಡೆದುಕೊಂಡ ನಂತರ, ವರುಣ್ ಸಿಂಗ್ ಅವರು ತಾವು ಕಲಿತ ಶಾಲೆಯ ಮಕ್ಕಳಿಗೆ ಬರೆದ ಸ್ಫೂರ್ತಿದಾಯಕ ಪತ್ರವನ್ನು ಪ್ರಧಾನಿ ಉಲ್ಲೇಖಿಸಿದರು.

'ಯಶಸ್ಸಿನ ಉತ್ತುಂಗಕ್ಕೆ ತಲುಪಿದಾಗಲೂ ತಮ್ಮ ಬೇರುಗಳನ್ನು ಪೋಷಿಸಲು ಅವರು ಮರೆಯಲಿಲ್ಲ ಎಂಬ ಅಂಶವು ಈ ಪತ್ರವನ್ನು ಓದಿದ ಬಳಿಕ ಮೊದಲು ತಲೆಗೆ ಬಂತು. ಎರಡನೆಯದಾಗಿ, ಸಂಭ್ರಮಿಸಬೇಕಾದ ಸಂದರ್ಭದಲ್ಲಿ ಕೂಡ ಅವರು ಮುಂದಿನ ತಲೆಮಾರುಗಳ ಬಗ್ಗೆ ಕಾಳಜಿ ತೋರಿದ್ದರು' ಎಂದು ಮೋದಿ ಹೇಳಿದ್ದಾರೆ.

ಒಬ್ಬ ವಿದ್ಯಾರ್ಥಿಯಲ್ಲಿ ಸ್ಫೂರ್ತಿ ತುಂಬಲು ಸಾಧ್ಯವಾದರೂ ಅದು ಭಾರಿ ಮಹತ್ವದ್ದು ಎಂದು ವರುಣ್ ಅವರು ಬರೆದಿದ್ದರು. ಆದರೆ, ಅವರು ಇಡೀ ದೇಶಕ್ಕೇ ಸ್ಫೂರ್ತಿ ತುಂಬಿದ್ದಾರೆ ಎಂದು ಮೋದಿ ಬಣ್ಣಿಸಿದ್ದಾರೆ.

'ರಾಜ್ಯದಲ್ಲಿ 43 ಲಕ್ಷ ಮಕ್ಕಳಿಗೆ ಲಸಿಕೆ'

ಬೆಂಗಳೂರು: 15 ರಿಂದ 18 ವರ್ಷ ವಯೋಮಾನದ 43 ಲಕ್ಷ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನ ಜನವರಿ 3ರಿಂದ ರಾಜ್ಯದಲ್ಲಿ ಆರಂಭವಾಗಲಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕೋವಿಡ್ ನಿಯಂತ್ರಣ ಕುರಿತು ಭಾನುವಾರ ನಡೆದ ಉನ್ನತ ಮಟ್ಟದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, '15ರಿಂದ 18 ವರ್ಷದ 43 ಲಕ್ಷ ಮಕ್ಕಳು ರಾಜ್ಯದಲ್ಲಿದ್ದಾರೆ. ಎಲ್ಲರಿಗೂ ಲಸಿಕೆ ನೀಡಲಾಗುವುದು. ಅದಕ್ಕೆ ಪೂರಕವಾದ ಸಿದ್ಧತೆಗಳನ್ನು ಆರಂಭಿಸಲಾಗಿದೆ' ಎಂದರು.

60 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು, ತೀವ್ರ ಸ್ವರೂಪದ ಕಾಯಿಲೆಗಳಿಂದ ಬಳಲುತ್ತಿರುವವರು, ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಕೋವಿಡ್ ನಿಯಂತ್ರಣದಲ್ಲಿ ಮುಂಚೂಣಿಯಲ್ಲಿ ಕೆಲಸ ಮಾಡುತ್ತಿರುವವರಿಗೆ ಬೂಸ್ಟರ್ ಡೋಸ್ ನೀಡುವ ಅಭಿಯಾನ ಜ.10 ರಿಂದ ಆರಂಭವಾಗಲಿದೆ. ಬೂಸ್ಟರ್ ಡೋಸ್ ಕೊಡುವುದಕ್ಕೂ ತಯಾರಿ ನಡೆಸಲಾಗುತ್ತಿದೆ ಎಂದರು.

15–18 ವರ್ಷ ವಯಸ್ಸಿನ ಮಕ್ಕಳಿಗೆ ಲಭ್ಯವಿರುವ ಏಕೈಕ ಲಸಿಕೆ 'ಕೋವ್ಯಾಕ್ಸಿನ್'

ನವದೆಹಲಿ: 15 ರಿಂದ 18 ವರ್ಷ ವಯಸ್ಸಿನ ಮಕ್ಕಳಿಗೆ ಭಾರತ್ ಬಯೋಟೆಕ್‌ನ ಕೋವ್ಯಾಕ್ಸಿನ್ ಬಹುಶಃ ಈಗ ಲಭ್ಯವಿರುವ ಏಕೈಕ ಕೋವಿಡ್ ಲಸಿಕೆಯಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಇನ್ನು, ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಮತ್ತು 60 ವರ್ಷ ಮೇಲ್ಪಟ್ಟ ನಾಗರಿಕರಿಗೆ ಅವರು ಈ ಹಿಂದೆ ಪಡೆದ ಲಸಿಕೆಯನ್ನೇ 3ನೇ ಡೋಸ್ ಆಗಿ ನೀಡಲಾಗುವುದು ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಚುನಾವಣಾ ಆಯೋಗಕ್ಕೆ ಆರೋಗ್ಯ ಕಾರ್ಯದರ್ಶಿ ಭೇಟಿ ಇಂದು

ನವದೆಹಲಿ (ಪಿಟಿಐ): ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಚುನಾವಣಾ ಆಯೋಗದ ಹಿರಿಯ ಅಧಿಕಾರಿಗಳನ್ನು ಸೋಮವಾರ ಭೇಟಿ ಆಗಲಿದ್ದಾರೆ. ಐದು ರಾಜ್ಯಗಳ ವಿಧಾನಸಭಾ ಚುನಾವಣೆಗೆ ಚುನಾವಣಾ ಆಯೋಗವು ಸಜ್ಜಾಗುತ್ತಿರುವುದರ ನಡುವೆಯೇ ಈ ಭೇಟಿ ನಡೆಯಲಿದೆ.

ದೇಶದಲ್ಲಿ ಕೋವಿಡ್ ಸಾಂಕ್ರಾಮಿಕದ ಸ್ಥಿತಿಗತಿ, ಹೊಸ ರೂಪಾಂತರ ತಳಿ ಓಮೈಕ್ರಾನ್ ಬಗ್ಗೆ ಭೂಷಣ್ ಅವರಿಂದ ಆಯೋಗವು ಮಾಹಿತಿ ಪಡೆದುಕೊಳ್ಳಲಿದೆ ಎನ್ನಲಾಗಿದೆ.

ರ‍್ಯಾಲಿ, ಚುನಾವಣಾ ಪ್ರಚಾರ, ಮತದಾನದ ದಿನ, ಮತ ಎಣಿಕೆ ದಿನಗಳಲ್ಲಿ ಕೋವಿಡ್ ತಡೆಗಾಗಿ ಇರುವ ನಿರ್ಬಂಧಗಳನ್ನು ಹೆಚ್ಚು ಪರಿಣಾಮಕಾರಿ ಆಗಿಸುವುದು ಹೇಗೆ ಎಂಬ ಬಗ್ಗೆಯೂ ಭೂಷಣ್ ಅವರಿಂದ ಆಯೋಗವು ಮಾಹಿತಿ ಪಡೆಯುವ ಸಾಧ್ಯತೆ ಇದೆ.

ಗೋವಾ, ಪಂಜಾಬ್, ಉತ್ತರಾಖಂಡ ಮತ್ತು ಮಣಿಪುರ ವಿಧಾನಸಭೆಗಳ ಅವಧಿಯು 2022ರ ಮಾರ್ಚ್‌ನ ವಿವಿಧ ದಿನಾಂಕಗಳಲ್ಲಿ ಮುಕ್ತಾಯವಾಗಲಿದೆ. ಉತ್ತರ ಪ್ರದೇಶ ವಿಧಾನಸಭೆ ಅವಧಿಯು ಮೇಯಲ್ಲಿ ಕೊನೆಗೊಳ್ಳಲಿದೆ.

ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಆಯುಕ್ತರು ಉತ್ತರ ಪ್ರದೇಶದ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಅಲ್ಲಿಗೆ ಮಂಗಳವಾರ ಭೇಟಿ ನೀಡುವ ಕಾರ್ಯಕ್ರಮ ಇದೆ.

ಬಿಹಾರ: ಬಾಯ್ಲರ್ ಸ್ಫೋಟ, ಕನಿಷ್ಠ 6 ಕಾರ್ಮಿಕರ ಸಾವು

ಪಟ್ನಾ (ಪಿಟಿಐ): ಬಿಹಾರದ ಮುಜಾಫರ್‌ಪುರ ಜಿಲ್ಲೆಯ ನೂಡಲ್ಸ್ ತಯಾರಿಕಾ ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟ ಸಂಭವಿಸಿದ್ದು, ಆರು ಕಾರ್ಮಿಕರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ.

ಶನಿವಾರ ರಾತ್ರಿ 10 ಗಂಟೆಗೆ ಸ್ಫೋಟ ಸಂಭವಿಸಿದ್ದು, ಸ್ಫೋಟದ ಸದ್ದು ಸುಮಾರು 5 ಕಿ.ಮೀ ಸುತ್ತಲಿನ ಪ್ರದೇಶದವರೆಗೂ ಕೇಳಿಸಿತ್ತು.

ಸ್ಫೋಟದ ತೀವ್ರತೆಗೆ ಸಮೀಪದ ಮತ್ತೊಂದು ಘಟಕಕ್ಕೂ ಹಾನಿಯಾಗಿದ್ದು, ಅದರಲ್ಲಿ ಮಲಗಿದ್ದ ಇಬ್ಬರು ಕಾರ್ಮಿಕರಿಗೂ ಗಾಯಗಳಾಗಿವೆ. 'ಅವಶೇಷಗಳನ್ನು ತೆರವುಗೊಳಿಸಿ ಈವರೆಗೂ ಆರು ಮೃತ ದೇಹಗಳನ್ನು ಹೊರತೆಗೆದಿದ್ದೇವೆ. ಐವರು ಕಾರ್ಮಿಕರು ಗಾಯಗೊಂಡಿದ್ದು, ಶ್ರೀ ಕೃಷ್ಣ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಮುಜಾಫರ್‌ಪುರದ ಪೊಲೀಸ್ ವರಿಷ್ಠಾಧಿಕಾರಿ ಜಯಂತ್ ಕಾಂತ್ ಹೇಳಿದ್ದಾರೆ.

ನೈಟ್ ಕ್ಲಬ್ ಬಂದ್, ರೆಸ್ಟೋರೆಂಟ್‌ಗಳಲ್ಲಿ ಜನರ ಮಿತಿ

ಬ್ರಿಟನ್: ಕೋವಿಡ್ ನಿರ್ಬಂಧ ಕಠಿಣ

ಲಂಡನ್ (ಪಿಟಿಐ): ಕ್ರಿಸ್‌ಮಸ್ ಆಚರಣೆ ಮುಗಿಯುತ್ತಿದ್ದಂತೆಯೇ ಬ್ರಿಟನ್‌ನಾದ್ಯಂತ ಭಾನುವಾರದಿಂದ ಕಠಿಣ ಕೋವಿಡ್ ನಿಯಮಗಳನ್ನು ಜಾರಿಗೆ ತರಲಾಗಿದೆ. ಹೆಚ್ಚುತ್ತಿರುವ ಕೋವಿಡ್ ಸೋಂಕು ನಿಯಂತ್ರಿಸಲು ವೇಲ್ಸ್, ಸ್ಕಾಟ್ಲೆಂಡ್, ಉತ್ತರ ಐರ್ಲೆಂಡ್ ಭಾಗಗಳಲ್ಲೂ ನಿಯಮಗಳನ್ನು ಬಿಗಿಗೊಳಿಸಲಾಗಿದೆ.

ಪ್ರಧಾನಿ ಬೋರಿಸ್ ಜಾನ್ಸನ್ ಅವರು, ಹೊಸ ದತ್ತಾಂಶಗಳು ಹಾಗೂ ತಜ್ಞರ ಸಲಹೆಗಳನ್ನು ಆಧರಿಸಿ ಸೋಮವಾರ ಇನ್ನಷ್ಟು ಬಿಗಿ ಕ್ರಮಗಳನ್ನು ಜಾರಿಗೊಳಿಸುವ ಸಾಧ್ಯತೆಯಿದೆ. ಬ್ರಿಟನ್‌ನಲ್ಲಿ 'ಪ್ಲಾನ್ ಬಿ' ಜಾರಿಯಲ್ಲಿದ್ದು, ಇದರ ಪ್ರಕಾರ, ಮನೆಯಿಂದ ಕೆಲಸ ಮಾಡುವುದು, ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಹಾಗೂ ದೊಡ್ಡ ಸಮಾರಂಭಗಳಲ್ಲಿ ಭಾಗಿಯಾಗುವವರು ಕೋವಿಡ್ ಲಸಿಕೆ ಪಡೆದ ಪ್ರಮಾಣಪತ್ರ ಹೊಂದಿರುವುದು ಕಡ್ಡಾಯ.

ವೇಲ್ಸ್‌ನಲ್ಲಿ, ಭಾನುವಾರದಿಂದ ನೈಟ್‌ಕ್ಲಬ್‌ಗಳನ್ನು ಬಂದ್ ಮಾಡಲಾಗಿದೆ. ಪಬ್, ರೆಸ್ಟೋರೆಂಟ್‌ಗಳಿಗೆ ಗರಿಷ್ಠ 6 ಜನರು ಮಾತ್ರ ಹೋಗಬಹುದು. ಒಳಾಂಗಣ ಕಾರ್ಯಕ್ರಮಗಳಲ್ಲಿ ಗರಿಷ್ಠ 30 ಮಂದಿ ಸೇರಲು ಮಾತ್ರ ಅವಕಾಶವಿದೆ. ಹೊರಾಂಗಣ ಕಾರ್ಯಕ್ರಮಗಳಿಗೆ 50 ಜನರ ಮಿತಿ ವಿಧಿಸಲಾಗಿದೆ.

ಸ್ಕಾಟ್ಲೆಂಡ್‌ನಲ್ಲಿ, ದೊಡ್ಡ ಕಾರ್ಯಕ್ರಮಗಳಲ್ಲಿ ಜನರು ಒಂದು ಮೀಟರ್ ಅಂತರ ಕಾಯ್ದುಕೊಳ್ಳುವುದು ಕಡ್ಡಾಯ. ಒಳಾಂಗಣ ಕಾರ್ಯಕ್ರಮಗಳಲ್ಲಿ 200, ಹೊರಾಂಗಣ ಕಾರ್ಯಕ್ರಮಗಳಲ್ಲಿ 500ಕ್ಕಿಂತ ಹೆಚ್ಚು ಜನ ಸೇರುವಂತಿಲ್ಲ. ಸೋಮವಾರದಿಂದ ಮೂರು ವಾರಗಳ ಕಾಲ ನೈಟ್‌ಕ್ಲಬ್‌ಗಳನ್ನು ಮುಚ್ಚಲು ಆದೇಶಿಸಲಾಗಿದೆ.

ಉತ್ತರ ಐರ್ಲೆಂಡ್‌ನಲ್ಲಿ, ನೈಟ್‌ಕ್ಲಬ್, ನೃತ್ಯ ಕಾರ್ಯಕ್ರಮಗಳಿಗೆ ನಿರ್ಬಂಧ ಹೇರಲಾಗಿದೆ.

ಕೋವಿಡ್ ನಿರ್ಬಂಧ ಕ್ರಮಗಳನ್ನು ವಿರೋಧಿಸಿ ಬ್ರುಸೆಲ್ಸ್‌ನಲ್ಲಿ ಜನರು ಭಾನುವಾರ ಪ್ರತಿಭಟನೆ ನಡೆಸಿದರು—ಎಎಫ್‌ಪಿ ಚಿತ್ರ

- ಸೋಮವಾರದಿಂದ ರಾತ್ರಿ ಕರ್ಫ್ಯೂ ಜಾರಿಗೆ ತರಲು ದೆಹಲಿ ಸರ್ಕಾರ ನಿರ್ಧಾರ; ರಾತ್ರಿ 11ರಿಂದ ಬೆಳಿಗ್ಗೆ 5ರವರೆಗೆ ನಿರ್ಬಂಧ ಇರಲಿದೆ.
- ಮಧ್ಯ ಪ್ರದೇಶದಲ್ಲಿ ಓಮೈಕ್ರಾನ್ ತಳಿಯ ಸೋಂಕು 8 ಜನರಲ್ಲಿ ಪತ್ತೆಯಾಗಿದೆ
- ಆಂಧ್ರ ಪ್ರದೇಶದಲ್ಲಿ ಮತ್ತೆ 2 ಓಮೈಕ್ರಾನ್ ಪ್ರಕರಣಗಳು ವರದಿಯಾಗಿದ್ದು, ಒಟ್ಟು ಸಂಖ್ಯೆ 6ಕ್ಕೆ ಏರಿದೆ
- ಒಡಿಶಾದಲ್ಲಿ ಭಾನುವಾರ 4 ಓಮೈಕ್ರಾನ್ ಪ್ರಕರಣ ಪತ್ತೆಯಾಗಿವೆ. ಒಟ್ಟು ಸಂಖ್ಯೆ 8ಕ್ಕೆ ಏರಿದೆ
- ಫ್ರಾನ್ಸ್‌ನಲ್ಲಿ ಕೋವಿಡ್ ಪ್ರಕರಣಗಳು ಭಾರಿ ಸಂಖ್ಯೆಯಲ್ಲಿ ಏರಿಕೆಯಾಗಿದ್ದು, ಒಂದೇ ದಿನ 1 ಲಕ್ಷಕ್ಕೂ ಹೆಚ್ಚು ಹೊಸ ಸೋಂಕಿತರು ಪತ್ತೆ
- ಹಿಮಾಚಲ ಪ್ರದೇಶದಲ್ಲಿ ಓಮೈಕ್ರಾನ್ ಮೊದಲ ಪ್ರಕರಣ ದೃಢಪಟ್ಟಿದೆ. ಕೆನಡಾದಿಂದ ಮಹಿಳೆಗೆ ಸೋಂಕು ದೃಢಪಟ್ಟಿದೆ
- 15ರಿಂದ 18 ವರ್ಷದೊಳಗಿನ ಮಕ್ಕಳಿಗೆ ಕೋವಿಡ್ ಲಸಿಕೆ ನೀಡಿಕೆಗೆ ಪೂರ್ವ ಸಿದ್ಧತೆ ಆರಂಭಿಸಲಾಗಿದೆ ಎಂದು ತಮಿಳುನಾಡು ಸರ್ಕಾರ ಹೇಳಿದೆ
- ಕೋವಿಡ್–19 ತಡೆ ನಿಯಮಗಳನ್ನು ಉಲ್ಲಂಘಿಸಿ ಸೂರತ್‌ನ ಮೈದಾನವೊಂದರಲ್ಲಿ ಕ್ರಿಸ್‌ಮಸ್ ಕಾರ್ಯಕ್ರಮ ಆಯೋಜಿಸಿದವರ ಮೇಲೆ ಗುಜರಾತ್‌ನಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಕೋವಿಡ್: ಸಕ್ರಿಯ ಪ್ರಕರಣ 7,418 ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದ್ದು, ಸದ್ಯ ಸೋಂಕಿತ 7,418 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಭಾನುವಾರ 348 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. 19 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಒಂದು ದಿನದಲ್ಲಿ 73 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.47 ರಷ್ಟಿದೆ. ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರು ನಗರದಲ್ಲಿ 248 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕೊಡಗಿನಲ್ಲಿ 18, ತುಮಕೂರು ಹಾಗೂ ಉತ್ತರ ಕನ್ನಡದಲ್ಲಿ ತಲಾ 11 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ

ಹೊಸ ಪ್ರಕರಣಗಳು 10ಕ್ಕಿಂತ ಕಡಿಮೆ ಇವೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.04 ಲಕ್ಷ ದಾಟಿದೆ.

ಸೋಂಕಿತರಲ್ಲಿ 198 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.58 ಲಕ್ಷ ದಾಟಿದೆ. ಬೆಂಗಳೂರಿನಲ್ಲಿ 6,048 ಸೋಂಕಿತರಿದ್ದಾರೆ. ಯಾದಗಿರಿ ಹಾಗೂ ಗದಗ ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳಿಲ್ಲ. ಬೀದರ್, ಬಾಗಲಕೋಟೆ ಸೇರಿದಂತೆ 8 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು ಹಾಗೂ ಚಾಮರಾಜನಗರದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 0.86 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,312ಕ್ಕೆ ಏರಿಕೆಯಾಗಿದೆ.

ಶೇ 50ರ ಮಿತಿಗೆ ಆಕ್ರೋಶ

ಒಂದನೇ ಪುಟದಿಂದ

ಸರ್ಕಾರದ ತೀರ್ಮಾನದಿಂದಾಗಿ ಬಾರ್, ಹೋಟೆಲ್, ರೆಸ್ಟೋರೆಂಟ್, ಕಾರ್ಯಕ್ರಮ ಆಯೋಜನೆ ಉದ್ಯಮದ ಮೇಲೆ ಏಟು ಬೀಳಲಿದೆ ಎಂದು ಅವರು ಹೇಳಿದರು.

'ಪ್ರಜಾವಾಣಿ' ಜೊತೆ ಮಾತನಾಡಿದ ರಾವ್, 'ಹೊಸವರ್ಷದ ಆಚರಣೆಗೆ ನಾಲ್ಕು ದಿನ ಇರುವಾಗ ಸರ್ಕಾರ ಇಂತಹ ಆದೇಶ ಹೊರಡಿಸಿದೆ. ಬಹುಪಾಲು ಹೋಟೆಲ್, ರೆಸ್ಟೋರೆಂಟ್ ಮತ್ತು ರೆಸಾರ್ಟ್‌ಗಳಲ್ಲಿ ಹೊಸವರ್ಷದ ಆಚರಣೆಗೆ ಸಂಬಂಧಿಸಿದ ಸಿದ್ಧತೆಗಳು ಆಗಿಬಿಟ್ಟಿವೆ. ಈಗ ಈ ರೀತಿಯ ಆದೇಶ ಹೊರಡಿಸಿರುವುದು ಎಷ್ಟು ಸಮಂಜಸ' ಎಂದು ಪ್ರಶ್ನಿಸಿದರು.

'ನಮ್ಮ (ಹೋಟೆಲ್, ಆತಿಥ್ಯ ಉದ್ಯಮಿಗಳ) ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳಬಹುದಿತ್ತು. ಸಿನಿಮಾ ಮಂದಿರಗಳಲ್ಲಿ ಶೇಕಡ 100ರಷ್ಟು ಆಸನ ಭರ್ತಿ ಮಾಡಬಹುದು. ಬೇರೆಡೆಗಳಲ್ಲಿಯೂ ಜನ ಸೇರಬಹುದು. ಆದರೆ, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಮಾತ್ರ ಜನ ಸೇರುವಂತೆ ಇಲ್ಲವೇ? ಸರ್ಕಾರವು ಶೇ 50ರ ಮಿತಿ ಎಂಬ ನಿಯಮವನ್ನು ಮೊದಲೇ ಕೈಗೊಳ್ಳಬಹುದಿತ್ತು' ಎಂದರು.

ಹೋಟೆಲ್ ಮತ್ತು ಆತಿಥ್ಯ ಉದ್ಯಮ ವಲಯವು ಎರಡು ವರ್ಷಗಳಿಂದ ತೊಂದರೆ ಅನುಭವಿಸುತ್ತಿದೆ. ಈ ಉದ್ಯಮಗಳು ಕೋವಿಡ್ ತಡೆ ಶಿಷ್ಟಾಚಾರ ಪಾಲಿಸಿ, ಸಾಮರ್ಥ್ಯದ ಶೇ 100ರಷ್ಟು ಆಸನಗಳನ್ನು ಭರ್ತಿ ಮಾಡಲು ಅವಕಾಶ ನೀಡಬೇಕು ಎಂದು ಸರ್ಕಾರಕ್ಕೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷ ಐ.ಎಸ್. ಪ್ರಸಾದ್ ಒತ್ತಾಯಿಸಿದರು.



ಹಿಮಪಾತದ ಸಂಭ್ರಮ

ಉತ್ತರ ಭಾರತದಾದ್ಯಂತ ಭಾರಿ ಚಳಿ ಆವರಿಸಿದ್ದು, ಹಿಮಗಾಳಿ ಬೀಸುತ್ತಿದೆ. ಪ್ರಸಿದ್ಧ ಪ್ರವಾಸಿ ತಾಣಗಳು ಹಿಮಪಾತದಿಂದ ಶ್ವೇತವಸ್ತ್ರ ಧರಿಸಿಕೊಂಡಂತೆ ಕಾಣಿಸುತ್ತಿವೆ. ಮನಾಲಿ ಸಮೀಪದ ಸೊಲಾಂಗ್‌ನಾಲಾದಲ್ಲಿ ಭಾನುವಾರ ಪ್ರವಾಸಿಗರು ಹಿಮಪಾತದ ನಡುವೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಸಲ್ಮಾನ್ ಖಾನ್‌ಗೆ ಹಾವು ಕಡಿತ

ಮುಂಬೈ(ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರಿಗೆ ಪನ್ವೇಲ್‌ನಲ್ಲಿನ ಅವರ ಫಾರ್ಮ್ ಹೌಸ್‌ನಲ್ಲಿ ಶನಿವಾರ ತಡರಾತ್ರಿ ಹಾವು ಕಚ್ಚಿದ್ದು, ನವಿ ಮುಂಬೈನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಭಾನುವಾರ ಮನೆಗೆ ಮರಳಿದ್ದಾರೆ.

'ಸಲ್ಮಾನ್ ಖಾನ್ ಅವರಿಗೆ ವಿಷ ರಹಿತ ಹಾವು ಕಚ್ಚಿದ್ದು, ಅವರು ಆರೋಗ್ಯದಿಂದಿದ್ದಾರೆ' ಎಂದು ಸಲ್ಮಾನ್ ಕುಟುಂಬಕ್ಕೆ ಆಪ್ತರಾಗಿರುವ ನಟ ಬೀನಾ ಕಾಕ್ ಹೇಳಿದ್ದಾರೆ.

ಸಲ್ಮಾನ್ ಖಾನ್ ಅವರು ಫಾರ್ಮ್ ಹೌಸ್‌ಗೆ ಮರಳಿದ್ದಾರೆ, ಅಲ್ಲಿ ಅವರು ಸೋಮವಾರ ತಮ್ಮ 56ನೇ ಜನ್ಮದಿನ ಆಚರಿಸಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಎನ್‌ಇಪಿ ಭವಿಷ್ಯದ ದಿಕ್ಸೂಚಿ: ಗೆಹಲೋತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಭಾರತದ ಭವಿಷ್ಯಕ್ಕೆ ದಿಕ್ಸೂಚಿಯಾಗಲಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಮಾಗಡಿ ರಸ್ತೆಯ ಚನ್ನೇನಹಳ್ಳಿಯಲ್ಲಿರುವ ಜನ ಸೇವಾ ವಿದ್ಯಾ ಕೇಂದ್ರದ ಪೂರ್ಣ ಮಂಡಲೋತ್ಸವ ಮತ್ತು ಸ್ವರ್ಣ ಜಯಂತಿ ವರ್ಷ ಆಚರಣೆಯನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, 'ಭಾರತೀಯ ಶಿಕ್ಷಣ ವ್ಯವಸ್ಥೆಯು ಪಾಶ್ಚಿಮಾತ್ಯರ ಪ್ರಭಾವದಿಂದ ವಿರೂಪಗೊಂಡಿತ್ತು. ಶಿಕ್ಷಣದ ಗುರಿ, ಉದ್ದೇಶ ಮತ್ತು ಕಲಿಕಾ ವಿಧಾನಗಳು ಬದಲಾಗಿದ್ದವು. ಪ್ರಧಾನಿ ನರೇಂದ್ರ ಮೋದಿ ಅವರ ಒತ್ತಾಸೆಯಂತೆ ರೂಪುಗೊಂಡಿರುವ ಎನ್‌ಇಪಿ ಶಿಕ್ಷಣವನ್ನು ಮರಳಿ ಸರಿ ದಾರಿಗೆ ತರಲಿದೆ' ಎಂದರು.

ಈ ಶತಮಾನದಲ್ಲಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹೊಂದಿರುವುದು ಭಾರತಕ್ಕೆ ಮತ್ತಷ್ಟು ಬಲ ನೀಡಲಿದೆ. ಪ್ರಾಚೀನ ಮತ್ತು ಆಧುನಿಕ ಶಿಕ್ಷಣ ಪದ್ಧತಿಗಳ ಮಿಶ್ರಣದೊಂದಿಗೆ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಬೇಕಿದೆ. ಮಾನವೀಯ ಮೌಲ್ಯಗಳನ್ನು ಒಳಗೊಂಡ ಪರಿಪೂರ್ಣ ಶಿಕ್ಷಣವನ್ನು ಮಕ್ಕಳಿಗೆ ನೀಡಬೇಕಿದೆ ಎಂದು ಹೇಳಿದರು.

ಚಾರಿತ್ರ್ಯ ನಿರ್ಮಾಣವೇ ಮುಖ್ಯ: ರಾಷ್ಟ್ರೀಯ ಸ್ವಯಂಸೇವಕ ಸಂಘದ ರಾಷ್ಟ್ರೀಯ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಮಾತನಾಡಿ, 'ಶಿಕ್ಷಣ ಎಂದರೆ ಕೇವಲ ಕಲಿಕೆ ಮತ್ತು ಅಂಕ ಗಳಿಕೆ ಅಲ್ಲ. ಚಾರಿತ್ರ್ಯ ನಿರ್ಮಾಣವೇ ಭಾರತೀಯ ಶಿಕ್ಷಣ ವ್ಯವಸ್ಥೆಯ ಗುರಿ. ಶಿಕ್ಷಣದ ಮೂಲಕ ನಾಗರಿಕತೆಯೊಂದನ್ನು ಕಟ್ಟುತ್ತಿದ್ದೇವೆ ಎಂಬ ಎಚ್ಚರಿಕೆಯಲ್ಲಿ ನಾವು ಮುನ್ನಡೆಯಬೇಕು' ಎಂದರು.

ಚಾರಿತ್ರ್ಯ ಇಲ್ಲದ ಶಿಕ್ಷಣ ಅಹಂಕಾರಕ್ಕೆ ಕಾರಣವಾಗುತ್ತದೆ. ಸೇವಾ ಭಾವನೆಯಿಲ್ಲದ ಶಿಕ್ಷಣದಿಂದ ಸ್ವಾರ್ಥ, ಇನ್ನೊಬ್ಬರ ಸಂಕಟ ಅರಿಯುವುದನ್ನು ಕಲಿಸದ ಶಿಕ್ಷಣದಿಂದ ಕಂಟಕ ಸೃಷ್ಟಿಯಾಗುತ್ತವೆ ಎಂದು ಹೇಳಿದರು.

ಶಿಕ್ಷಣ ತರಗತಿಗೆ ಸೀಮಿತ ಆಗಬಾರದು. ಸುತ್ತಲಿನ ಪರಿಸರದ ಜತೆಗೆ ಒಡನಾಡಿಕೊಂಡು ಕಲಿಯುವುದು ಮುಖ್ಯ. ಶಿಕ್ಷಣದಿಂದ ಸರಿಯಾದ ವ್ಯಕ್ತಿತ್ವಗಳನ್ನು ನಿರ್ಮಿಸದಿದ್ದರೆ ದೇಶಕ್ಕೆ ಯಾವ ಲಾಭವೂ ಆಗುವುದಿಲ್ಲ ಎಂದರು.

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದಜೀ ಮಾತನಾಡಿ,'ಶಿಕ್ಷಣಕ್ಕೆ ಪವಾಡಗಳನ್ನು ಸೃಷ್ಟಿಸುವ ಶಕ್ತಿ ಇದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಶಿಕ್ಷಣ ಸಮರ್ಥವಾಗಿದ್ದರೆ ದೇಶ ಬಲಿಷ್ಠವಾಗಿ ಬೆಳೆಯುತ್ತದೆ' ಎಂದು ಹೇಳಿದರು.

ಮೈಸೂರಿನ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 'ದೇಶದ ಜನರಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯ ಬಗೆಗಿನ ಒಲವು ತಗ್ಗಬೇಕಿದೆ. ಆಗ ಭಾರತವು ಜಗತ್ತಿನ ಯಾವ ರಾಷ್ಟ್ರಕ್ಕೂ ಕಡಿಮೆ ಇಲ್ಲದಂತೆ ಬೆಳೆದು ನಿಲ್ಲುತ್ತದೆ' ಎಂದರು.

ಪೂರ್ಣ ಮಂಡಲೋತ್ಸವ ಸ್ವಾಗತ ಸಮಿತಿ ಗೌರವಾಧ್ಯಕ್ಷರಾದ ಮೈಸೂರು ರಾಜವಂಶಸ್ಥ ಯದುವೀರ ಒಡೆಯರ್ ಮಾತನಾಡಿದರು. ಜನಸೇವಾ ವಿದ್ಯಾ ಸಂಸ್ಥೆಯ ಅಧ್ಯಕ್ಷ ಶ್ರೀನಿವಾಸ ಗುಪ್ತ, ಗೌರವ ಕಾರ್ಯದರ್ಶಿ ನಿರ್ಮಲ್ ಕುಮಾರ್, ಸದಸ್ಯ ಎನ್.ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

ಮಾಗಡಿ ರಸ್ತೆಯ ಚನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ಭಾನುವಾರ ನಡೆದ ಪೂರ್ಣ ಮಂಡಲೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಜನಸೇವಾ ವಿಶ್ವಸ್ಥ ಮಂಡಳಿಯ ಟ್ರಸ್ಟಿ ಎನ್. ತಿಪ್ಪೇಸ್ವಾಮಿ, ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದ ಜೀ ಮತ್ತು ಜನಸೇವಾ ವಿದ್ಯಾ ಕೇಂದ್ರದ ಅಧ್ಯಕ್ಷ ಶ್ರೀನಿವಾಸ ಗುಪ್ತ ಇದ್ದಾರೆ – ಪ್ರಜಾವಾಣಿ ಚಿತ್ರ

ಸ್ವರ್ಣ ಜಯಂತಿಗೆ ಹಲವು ಯೋಜನೆ

'ಜನಸೇವಾ ವಿದ್ಯಾ ಕೇಂದ್ರದ ಸ್ವರ್ಣ ಜಯಂತಿ ಅಂಗವಾಗಿ 50ಕ್ಕೂ ಹೆಚ್ಚು ಹಸುಗಳ ನಿರ್ವಹಣೆ, ಭಾರತೀಯ ವೈದ್ಯ ಪದ್ಧತಿಯಡಿ ಚಿಕಿತ್ಸಾ ಸೌಲಭ್ಯ, ರಾಷ್ಟ್ರೀಯ ಮಟ್ಟದ ಗುರುಕುಲ ಸಮ್ಮೇಳನ, ಐದು ಗ್ರಾಮಗಳನ್ನು ಮಾದರಿ ಗ್ರಾಮಗಳನ್ನಾಗಿ ಪರಿವರ್ತಿಸುವುದು, 50 ಗ್ರಾಮಗಳ ಉನ್ನತಿ ಸೇರಿದಂತೆ ಹಲವು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ' ಎಂದು ಜನಸೇವಾ ವಿಶ್ವಸ್ಥ ಮಂಡಳಿಯ ಸದಸ್ಯ ರಾಮಚಂದ್ರ ಭಟ್ ಕೋಟೆಮನೆ ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಆರ್. ಅಶೋಕ, ವಿ. ಸೋಮಣ್ಣ, ಆರಗ ಜ್ಞಾನೇಂದ್ರ, ಎಸ್. ಟಿ. ಸೋಮಶೇಖರ್, ಮುರುಗೇಶ ಆರ್. ನಿರಾಣಿ, ಕೋಟ ಶ್ರೀನಿವಾಸ ಪೂಜಾರಿ, ಆರ್‌ಎಸ್‌ಎಸ್ ಮುಖಂಡ ಮುಕುಂದ ಸೇರಿದಂತೆ ಹಲವು ಪ್ರಮುಖರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಎಲ್ಲರೂ ಸಭಿಕರ ಸಾಲಿನಲ್ಲಿ ಕುಳಿತು ಸಮಾರಂಭ ವೀಕ್ಷಿಸಿದರು.

ಅಂಬಾಲಾ: ಯೇಸುಕ್ರಿಸ್ತನ ಪ್ರತಿಮೆ ವಿರೂಪ

ಅಂಬಾಲಾ (ಪಿಟಿಐ): ಇಲ್ಲಿನ ಚರ್ಚ್‌ವೊಂದರ ಗೇಟ್ ಬಳಿಯಿದ್ದ ಯೇಸು ಕ್ರಿಸ್ತನ ಪ್ರತಿಮೆಯನ್ನು ಕೆಲ ಕಿಡಿಗೇಡಿಗಳು ವಿರೂಪಗೊಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಅಂಬಾಲಾ ಕಂಟೋನ್ಮೆಂಟ್‌ನಲ್ಲಿರುವ ಹೋಲಿ ರಿಡೀಮರ್ ಚರ್ಚ್‌ನಲ್ಲಿ ಶನಿವಾರ ಮಧ್ಯರಾತ್ರಿ ಈ ಘಟನೆ ನಡೆದಿದೆ. ಆ ಪ್ರದೇಶದಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿಯ ದೃಶ್ಯಾವಳಿಗಳನ್ನು ಸಂಗ್ರಹಿಸಲಾಗಿದ್ದು, ಇಬ್ಬರು ಶಂಕಿತರನ್ನು ಗುರುತಿಸಲಾಗಿದೆ. ಅವರಿಬ್ಬರ ವಿರುದ್ಧ ಧಾರ್ಮಿಕ ಭಾವನೆಗೆ ಧಕ್ಕೆ ಉಂಟುಮಾಡಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದ್ದು, ಈ ಬಗ್ಗೆ ತನಿಖೆ ಮುಂದುವರಿದಿದೆ' ಎಂದು ಅಂಬಾಲಾ ಕಂಟೋನ್ಮೆಂಟ್ ಪೊಲೀಸ್ ಠಾಣೆಯ ಎಸ್‌ಎಚ್‌ಒ ಅನಿಲ್ ಕುಮಾರ್ ಅವರು ಮಾಹಿತಿ ನೀಡಿದರು.

ಡಿಕೆಶಿಗೆ ತಿರುಗೇಟು ನೀಡಿದ ಸಿದ್ದರಾಮಯ್ಯ

'ಸಾಮೂಹಿಕ ನಾಯಕತ್ವದಲ್ಲೇ ಚುನಾವಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಪಕ್ಷ ಯಾವಾಗಲೂ ಸಾಮೂಹಿಕ ನಾಯಕತ್ವದಲ್ಲಿಯೇ ನಂಬಿಕೆ ಇರಿಸಿದೆ. ಹೀಗಾಗಿ, ಮುಂದಿನ ವಿಧಾನಸಭಾ ಚುನಾವಣೆಯನ್ನೂ ಸಾಮೂಹಿಕ ನಾಯಕತ್ವದಲ್ಲಿಯೇ ಎದುರಿಸಲಾಗುತ್ತದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಸಿದ್ದರಾಮಯ್ಯ

ನಗರದ ಗಾಂಧಿಭವನದಲ್ಲಿ ಭಾನುವಾರ ಲೇಖಕ ಎಸ್. ಜಿ.ಸಿದ್ದರಾಮಯ್ಯ ಅವರ ಆತ್ಮಕಥನ ಯರಬೇವು ಬಿಡುಗಡೆ ಸಮಾರಂಭದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಕಾಂಗ್ರೆಸ್ ಪಕ್ಷ ತಮ್ಮ ನೇತೃತ್ವದಲ್ಲೇ ಮುಂದಿನ ಚುನಾವಣೆ ಎದುರಿಸಲಿದೆ ಎಂಬ ಅರ್ಥದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ನಾನು ಶಾಸಕಾಂಗ ಪಕ್ಷದ ನಾಯಕನಾಗಿದ್ದೇನೆ. ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಉಳಿದ ನಾಯಕರೂ ಪಕ್ಷದಲ್ಲಿ ಇದ್ದಾರೆ. ಆದ್ದರಿಂದ ಮುಂದಿನ ಚುನಾವಣೆ ಸಾಮೂಹಿಕ ನಾಯಕತ್ವದಲ್ಲಿಯೇ ಎದುರಿಸುತ್ತೇವೆ' ಎಂದರು.

ಇತ್ತೀಚೆಗೆ ಬೆಳಗಾವಿ ಅಧಿವೇಶನದ ವೇಳೆಯಲ್ಲಿ ಡಿ.ಕೆ.ಶಿವಕುಮಾರ್ ಅವರನ್ನು ಕರೆದು ಮೇಕೆದಾಟು ಪಾದಯಾತ್ರೆ ವಿಚಾರವಾಗಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ತಮ್ಮನ್ನು ಬಿಟ್ಟು ಜನಪ್ರತಿನಿಧಿಗಳ ಸಭೆ ನಡೆಸಬಾರದು. ಇದರಿಂದ ತಪ್ಪು ಸಂದೇಶ ಹೋಗುತ್ತದೆ ಎಂದು ಸಿದ್ದರಾಮಯ್ಯ ತಾಕೀತು ಮಾಡಿದ್ದರು. ಇದೀಗ ಸಾಮೂಹಿಕ ನಾಯಕತ್ವದ ವಿಚಾರವನ್ನು ಪ್ರಸ್ತಾಪಿಸಿರುವ ಅವರು ಪಕ್ಷದ ಅಧ್ಯಕ್ಷರಿಗೆ ಮೂಗುದಾರ ಹಾಕಲು ಪ್ರಯತ್ನಿಸಿದ್ದಾರೆ ಎಂದು ಪಕ್ಷದ ವಲಯದಲ್ಲಿ ವ್ಯಾಖ್ಯಾನಿಸಲಾಗಿದೆ.

'ಮೇಕೆದಾಟು ಯೋಜನೆಗೆ ಆಗ್ರಹಿಸಿ ನಡೆಸಲಿರುವ ಪಾದಯಾತ್ರೆಗೆ ಸಂಬಂಧಿಸಿದಂತೆ ಪಕ್ಷವು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ. ವಿಧಾನಸಭೆ ಅಧಿವೇಶನ ಇದ್ದುದ್ದರಿಂದ ಆ ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ. 2022ರ ಜ.2 ಮತ್ತು 3 ರಂದು ನಡೆಯಲಿರುವ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

'ಕರ್ನಾಟಕ ಬಂದ್‌ಗೆ ನೈತಿಕ ಬೆಂಬಲ'

'ಮಹಾರಾಷ್ಟ್ರ ಏಕೀಕರಣ ಸಮಿತಿಯನ್ನು (ಎಂಇಎಸ್) ರಾಜ್ಯದಲ್ಲಿ ನಿಷೇಧಿಸುವಂತೆ ಆಗ್ರಹಿಸಿ, ಕನ್ನಡಪರ ಸಂಘಟನೆಗಳು ಇದೇ 31ರಂದು ಕರೆ ನೀಡುವ ಬಂದ್‌ಗೆ ನೈತಿಕ ಬೆಂಬಲವಿದೆ. ಎಂಇಎಸ್ ಪುಂಡಾಟಿಕೆ ರಾಜ್ಯದಲ್ಲಿ ಜಾಸ್ತಿಯಾಗುತ್ತಿದೆ. ಕರ್ನಾಟಕದ ಬಾವುಟವನ್ನು ಸುಟ್ಟಿರುವ ಅವರು, ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಗೆ ಹಾನಿ ಮಾಡಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ನೇತೃತ್ವದ ನಿಯೋಗ ನವದೆಹಲಿಗೆ ತೆರಳಿ, ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಬೇಕು' ಎಂದು ಸಿದ್ದರಾಮಯ್ಯ ತಿಳಿಸಿದರು.

ತಲೆಗೆ ಗುಂಡು ಹಾರಿಸಿಕೊಂಡು ಬಿಇಒ ಕಮಲಾಕರ್ ಆತ್ಮಹತ್ಯೆ

ಬೆಂಗಳೂರು: ಅನಾರೋಗ್ಯದಿಂದಾಗಿ ಮನನೊಂದ ಕ್ಷೇತ್ರ ಶಿಕ್ಷಣಾಧಿಕಾರಿಯೊಬ್ಬರು ಪಿಸ್ತೂಲ್‌ನಿಂದ ತಲೆಗೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಯಲಹಂಕದ ಬಿಇಒ ಆಗಿ ಕೆಲಸ ಮಾಡುತ್ತಿದ್ದ ಟಿ.ಎನ್.ಕಮಲಾಕರ್ ಆತ್ಮಹತ್ಯೆ ಮಾಡಿಕೊಂಡವರು.

'ಕಮಲಾಕರ್ ಅವರು ಪಾರ್ಕಿನ್‌ಸನ್ ಕಾಯಿಲೆಯಿಂದ ಬಳಲುತ್ತಿದ್ದರು. ಕೊಡಿಗೆಹಳ್ಳಿಯ ಎನ್‌ಟಿಐ ಲೇಔಟ್‌ನಲ್ಲಿ ಕುಟುಂಬದವರೊಂದಿಗೆ ನೆಲೆಸಿದ್ದರು. ಭಾನುವಾರ ಸಂಜೆ 4 ಗಂಟೆ ಸುಮಾರಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ತೆಂಕಬೈಲಿನವರಾದ ಕಮಲಾಕರ್ ಅವರು ನಾಲ್ಕು ವರ್ಷಗಳಿಂದ ಯಲಹಂಕ ಬಿಇಒ ಆಗಿ ಕಾರ್ಯನಿರ್ವಹಿಸುತ್ತಿದ್ದರು. ಹೆಂಡತಿ ಹಾಗೂ ಮಗ, ಮನೆಯಲ್ಲಿರುವಾಗಲೇ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡಿದ್ದ ಅವರು ಡಬಲ್ ಬ್ಯಾರೆಲ್ ಪಿಸ್ತೂಲ್‌ನಿಂದ ಗುಂಡು ಹಾರಿಸಿಕೊಂಡಿದ್ದರು. ಮನೆಯವರು ಕೊಠಡಿ ಬಾಗಿಲು ಒಡೆದು ಒಳಹೋಗುವಷ್ಟರಲ್ಲಿ ಅವರು ಅಸುನೀಗಿದ್ದರು. ಮನೆಯಲ್ಲಿ ಪಿಸ್ತೂಲ್ ಇಟ್ಟುಕೊಳ್ಳಲು ಪರವಾನಗಿ ಪಡೆದಿದ್ದರು. ಆತ್ಮಹತ್ಯೆಗೂ ಮುನ್ನ ಮರಣ ಪತ್ರವನ್ನೂ ಬರೆದಿಟ್ಟಿದ್ದರು' ಎಂದು ಮಾಹಿತಿ ನೀಡಿದ್ದಾರೆ.

ಮರಣ ಪತ್ರದಲ್ಲೇನಿದೆ?: 'ಅನಾರೋಗ್ಯ ಸಮಸ್ಯೆ ಉಲ್ಬಣಿಸುತ್ತಲೇ ಇದೆ. ಈವರೆಗೆ ಸಾವಿರಾರು ಮಾತ್ರೆಗಳನ್ನು ನುಂಗಿದ್ದರೂ ಪ್ರಯೋಜನವಾಗಿಲ್ಲ. ಬದುಕೇ ಸಾಕೆನಿಸಿದೆ. ಕುಟುಂಬದವರು ಇಷ್ಟು ವರ್ಷ ಆರೈಕೆ ಮಾಡಿರುವುದೇ ನನ್ನ ಅದೃಷ್ಟ. ಅವರಿಗೆ ಇನ್ನೂ ಹೆಚ್ಚು ನೋವು ಕೊಡಲು ಮನಸ್ಸು ಒಪ್ಪುತ್ತಿಲ್ಲ. ಮನೆಯವರೆಲ್ಲಾ ತುಂಬಾ ಒಳ್ಳೆಯವರು. ಅವರಿಗೆ ತೊಂದರೆ ಕೊಡಬಾರದು ಎಂದು ಈ ತೀರ್ಮಾನ ಕೈಗೊಂಡಿದ್ದೇನೆ. ನನ್ನ ಸಾವಿಗೆ ನಾನೇ ಕಾರಣ'.

ಮನದ ಕ್ರಿಯಾಶೀಲತೆಯ ಬಾಗಿಲು ತೆರೆಸಲು ಓದಿನಿಂದ ಮಾತ್ರ ಸಾಧ್ಯ

ಔಪಚಾರಿಕ ಶಿಕ್ಷಣ ಬದುಕು ಕೊಡಬಹುದು. ಆದರೆ ಸ್ವಯಂ ಶಿಕ್ಷಣ ಎನ್ನುವುದು ಭವಿಷ್ಯವನ್ನೇ ನಿರ್ಧರಿಸುತ್ತದೆ.



ನೀತಿ ಪಾಠಕ್ಕಿರಲಿ ಅಗ್ರಸ್ಥಾನ

ಕೇವಲ ನೀತಿ ಕಥೆಗಳಿಂದ ಮಾತ್ರವೇ ಮಕ್ಕಳಿಗೆ ನೈತಿಕ ಶಿಕ್ಷಣ ನೀಡಲು ಸಾಧ್ಯವಿಲ್ಲ. ಮನೆ, ಸಮಾಜದಲ್ಲಿನ ಹಿರಿಯರು, ಶಾಲಾ ಸಿಬ್ಬಂದಿ ಸೇರಿದಂತೆ ಎಲ್ಲರ ವರ್ತನೆ, ನಡೆನುಡಿಗಳೂ ನೈತಿಕ ಮೌಲ್ಯಗಳನ್ನು ಪ್ರತಿನಿಧಿಸುವಂತಿದ್ದರೆ ಮಾತ್ರ ನೈತಿಕ ಶಿಕ್ಷಣ ದೊರಕುತ್ತದೆ.

ಜನಾರ್ದನ ಸಿ. ಎಸ್.

ಇತ್ತೀಚೆಗೆ ಚನ್ನಗಿರಿ ಶಾಲೆಯೊಂದರಲ್ಲಿ ಕೆಲ ವಿದ್ಯಾರ್ಥಿಗಳು ಶಿಕ್ಷಕರೊಬ್ಬರ ಮೇಲೆ ಕಸದಬುಟ್ಟಿ ಹಾಕಿ ಅಪಮಾನ ಮಾಡಿದ ಘಟನೆ ಬಹುದೊಡ್ಡ ಸುದ್ದಿಯಾಗಿತ್ತು. ಘಟನೆಯ ನಂತರ 'ಮಕ್ಕಳು ಹೀಗೇಕೆ ಮಾಡಿದರು' ಎಂಬ ಪ್ರಶ್ನೆಯೂ ಹುಟ್ಟಿಕೊಂಡಿತು. ಆಗ ಕೇಳಿ ಬಂದ ಉತ್ತರ 'ಮಕ್ಕಳಲ್ಲಿನ ನೈತಿಕ ಶಿಕ್ಷಣದ ಕೊರತೆ' ಎಂಬುದಾಗಿತ್ತು..!

ಇಂಥ ಘಟನೆಗಳು ನಡೆದಾಗಲೆಲ್ಲ, ನೈತಿಕತೆ ಮತ್ತಿತರ ಜೀವನಮೌಲ್ಯಗಳು ಶಿಥಿಲವಾಗುತ್ತಿರುವ ಕುರಿತ ಚರ್ಚೆ ಮುನ್ನೆಲೆಗೆ ಬರುತ್ತವೆ.

ಮಕ್ಕಳ ಕಲಿಕೆ ಮತ್ತು ವ್ಯಕ್ತಿತ್ವ ರೂಪುಗೊಳ್ಳುವ ಬಗೆಗಿನ ಸಂಶೋಧನೆಗಳು ಹೇಳುವಂತೆ 'ಮಕ್ಕಳು ಅನುಕರಿಸುವ ಮೂಲಕ ಕಲಿಯಲು ಆರಂಭಿಸುತ್ತಾರೆ'. ಅಂದರೆ ಹಿರಿಯರ ವರ್ತನೆ, ಜೀವನ ಮೌಲ್ಯಗಳು, ನೈತಿಕ ಚೌಕಟ್ಟು ಇವು ಮಕ್ಕಳಿಗೆ ಮಾದರಿಯಾಗುತ್ತವೆ. ಇಂದಿನ ಮಕ್ಕಳ, ಯುವಕರ ವರ್ತನೆ ಮತ್ತು ನೈತಿಕ ಚೌಕಟ್ಟು ಕೆಳಮಟ್ಟಕ್ಕೆ ಇಳಿದಿದೆ ಎಂದರೆ ಅದು ಕೇವಲ ಇಂದಿನ ಸಮಾಜದ ಪ್ರತಿಬಿಂಬವಷ್ಟೇ ಎನ್ನುವುದನ್ನು ಶಿಕ್ಷಣವನ್ನು ರೂಪಿಸುತ್ತಿರುವ ನಾವು ಮನಗಾಣಬೇಕು.

'ಸಮಾಜ'ದ ವರ್ತನೆಯೂ ಕಾರಣ

ಪುಂಡಾಟಿಕೆಯನ್ನು ಮೆರೆಸುವ, ಮಾತು ಮಾತಿಗೆ ಜಗಳಕ್ಕೆಸಗುವ, ಭ್ರಷ್ಟಾಚಾರ ಮೆರೆಸುವ, ಸೆರೆಮನೆಯಿಂದ ಭ್ರಷ್ಟಾಚಾರಿಯೋ, ರೌಡಿಯೊ ಬಿಡುಗಡೆಯಾದಾಗ ಸಂಭ್ರಮಾಚರಣೆ ಮಾಡುವ ಹಿರಿಯರು ಮಕ್ಕಳಿಗೆ ನೀಡುವ ಸಂದೇಶದಲ್ಲಿಯೇ ನೈತಿಕ ಶಿಕ್ಷಣ ಅಡಗಿದೆ. ಕಾನೂನು, ನಿಯಮಗಳನ್ನು ಉಲ್ಲಂಘಿಸಿದ್ದು ತಪ್ಪು ಎಂದು ತಿಳಿಸಿದಾಗ ಅಥವಾ ಸರ್ಕಾರಿ ಕಚೇರಿಯಲ್ಲಿ ನಡೆಯುವ ಭ್ರಷ್ಟಾಚಾರದ ವಿರುದ್ಧ ಮಾತನಾಡಿದಾಗ ದೊಡ್ಡವರು ಹೇಗೆ ವರ್ತಿಸುತ್ತಾರೆ ಎನ್ನುವುದನ್ನು ಸಮಾಜದಲ್ಲಿ ನಾವು ನೋಡುತ್ತಲೇ ಇದ್ದೇವೆ. ಇಂಥದ್ದನ್ನೇ ನೋಡುತ್ತಾ ಬೆಳೆದ ಮಕ್ಕಳ ವರ್ತನೆಯಲ್ಲಿ ಅಂಥದ್ದೇ ವರ್ತನೆಗಳನ್ನೇ ಕಾಣುತ್ತೇವೆ ಎಂಬುದನ್ನು ನಾವು ಮನಗಾಣಬೇಕಿದೆ. 'ಒಂದು ಮಗುವನ್ನು ಇಡೀ ಊರು, ಸಮಾಜ ಬೆಳೆಸುತ್ತದೆ' ಎನ್ನುವ ನಾಣ್ನುಡಿ ಇರುವುದೂ ಇದೇ ಹಿನ್ನೆಲೆಯಲ್ಲಿ.

ಮಗು ತನ್ನ ಎರಡನೇ ವಯಸ್ಸಿಗೆ ಬರುವ ಮುನ್ನವೇ ತನ್ನ ಸುತ್ತಲಿನ ಪರಿಸರವನ್ನು ಗಮನಿಸುತ್ತಾ ತನ್ನ ಅರಿವನ್ನು ಬೆಳೆಸಿಕೊಳ್ಳುತ್ತಿರುತ್ತದೆ. ತನ್ನ ಸುಪ್ತಮನಸ್ಸಿನಲ್ಲಿ ಇವುಗಳನ್ನೆಲ್ಲ ಸಂಗ್ರಹಿಸಿಕೊಳ್ಳುತ್ತಿರುತ್ತದೆ. ಮನೆ, ಸಮಾಜದ ವಾತಾವರಣ ಸಕಾರಾತ್ಮಕ ಚಿಂತನೆಗಳನ್ನು, ದ್ವೇಷ-ರೋಷವಿಲ್ಲದ ಮಾತು ವರ್ತನೆಗಳನ್ನು ತೋರಿಸಿದರೆ, ಮಕ್ಕಳು ಅವುಗಳನ್ನು ತಮ್ಮ ನೆನಪಿನ ಕೋಶದಲ್ಲಿ ತುಂಬಿಕೊಳ್ಳುತ್ತಾರೆ. ಮನೆಯ ಹಿರಿಯರು, ಸಮಾಜ ಕರುಣೆ ಅನುಕಂಪಗಳನ್ನು ಎತ್ತಿ ಹಿಡಿದರೆ ಮಕ್ಕಳು ಅದನ್ನೇ ಅನುಕರಿಸುತ್ತಾರೆ.

'ಸಮಾಜ' ಎನ್ನುವುದರ ಇಂದಿನ ವಿವರಣೆ ಬಹಳ ವಿಸ್ತಾರಗೊಂಡಿದೆ. ಅಂಗೈಯಲ್ಲಿನ ಮೊಬೈಲ್‌ನಲ್ಲಿ ಇಡೀ ಪ್ರಪಂಚವೇ ಸಮಾಜವಾಗಿ ಮಗುವಿನ ಮುಂದೆ ತೆರೆದುಕೊಳ್ಳುತ್ತದೆ. ಆ ಸಮಾಜದಲ್ಲಿ ಹಿಂಸೆ, ದಬ್ಬಾಳಿಕೆ, ವಂಚನೆ, ಕಪಟ, ಕ್ರೂರತೆ ಇವುಗಳು ಮನರಂಜನೆಯ ಹೆಸರಿನಲ್ಲಿ ಆಟಗಳ ಮೂಲಕವೋ, ಧಾರಾವಾಹಿ (ಟಿವಿ, ವೆಬ್ ಸೀರೀಸ್ ಇತ್ಯಾದಿ) ಮೂಲಕವೋ ಮಕ್ಕಳನ್ನು ಮುಟ್ಟಿದರೆ, ಆ ಮಕ್ಕಳು ವಯಸ್ಕರಾದಾಗ ಹಾಗೆಯೇ ವರ್ತಿಸುತ್ತಾರೆ. ಹಾಗಾಗಿ, ಕೇವಲ ನೀತಿ ಕಥೆಗಳನ್ನು ಹೇಳುವ ಮೂಲಕವೋ, ದಂಡಿಸುವ ಮೂಲಕವೋ ಮಕ್ಕಳಿಗೆ ನೈತಿಕ ಶಿಕ್ಷಣವನ್ನು ನೀಡಲು ಸಾಧ್ಯವಿಲ್ಲ. ಮನೆ, ಸಮಾಜ, ಶಾಲೆಯಲ್ಲಿನ ಹಿರಿಯರು (ಶಿಕ್ಷಕರು, ಆಯಾಗಳು, ಇಲಾಖೆಯ ಅಧಿಕಾರಿಗಳು) ಎಲ್ಲರ ವರ್ತನೆಯೂ, ನಡೆನುಡಿಗಳೂ ಉತ್ತಮ ನೈತಿಕ ಮೌಲ್ಯಗಳನ್ನು ಪ್ರತಿನಿಧಿಸುವಂತಿದ್ದರೆ ಅವರಿಗೆ ಉತ್ತಮ ನೈತಿಕ ಶಿಕ್ಷಣ ದೊರಕುತ್ತದೆ.

ಮಹಾತ್ಮ ಗಾಂಧೀಜಿಯವರು ತಮ್ಮ ಸತ್ಯಾಗ್ರಹದ ಜೀವನದಲ್ಲಿ ಹೆಚ್ಚು ಒತ್ತು ನೀಡಿದ್ದೇ ಇಡೀ ದೇಶದ ಒಟ್ಟಾರೆ ನೈತಿಕ ಮೌಲ್ಯಗಳು, ನೈತಿಕ ಚೌಕಟ್ಟು ಉತ್ತಮವಾಗಿರಬೇಕು ಎನ್ನುವುದರ ಬಗ್ಗೆ. ಅವರು ಪ್ರಜ್ಞಾಪೂರ್ವಕವಾಗಿ ಶ್ರಮಜೀವನವನ್ನು ರೂಢಿಸಿಕೊಳ್ಳುವುದು ಹಾಗೂ ಕಾಯಕ ಜೀವನ ಆತ್ಮಶುದ್ಧಿಯ ಮಾರ್ಗವೆಂಬುದನ್ನೂ ಎತ್ತಿ ತೋರಿಸಿದರು. ಸಮಾಜದ ನಿರ್ಧಾರಗಳು ಆ ನೈತಿಕ ನೆಲೆಗಟ್ಟಿನಲ್ಲಿ ಇದ್ದರೆ ಎಲ್ಲರ ಬಾಳು ಹಸನಾಗಿರುತ್ತದೆ, ದೇಶ ಸಮೃದ್ಧವಾಗಿರುತ್ತದೆ ಎನ್ನುವುದನ್ನು ಅವರು ಒತ್ತಿ ಹೇಳಿದ್ದರು.

ಪುಸ್ತಕಗಳಿಂದ ಮೌಲ್ಯಗಳ ಕಲಿಕೆ

ಇದರ ಜೊತೆಗೆ ವಿಸ್ತೃತವಾದ ಓದು ಮಕ್ಕಳು ಸೇರಿದಂತೆ ಎಲ್ಲ ವರ್ಗದವರಿಗೂ ಜೀವನಾನುಭವ ಮತ್ತು ಸಾಮಾಜಿಕ ಮೌಲ್ಯಗಳನ್ನು ಬೆಳೆಸಲು ಬಹಳ ಉಪಯುಕ್ತವಾಗುತ್ತದೆ. ಮಕ್ಕಳ ಓದಿಗೆ ಸದಾಕಾಲ ಕೈಗೆಟಕುವಂತೆ ಪುಸ್ತಕಗಳು ಶಾಲೆಯಲ್ಲಾಗಲೀ ಮನೆಯಲ್ಲಾಗಲೀ ದೊರಕುವಂತಾಗಬೇಕು. ಕೇವಲ ನೀತಿಯ ಸೂಕ್ತಿಗಳಿರುವ ಪುಸ್ತಕಗಳು ಆಳದ ಕಲಿಕೆಗೆ ಸಹಕಾರಿ ಆಗುವುದಿಲ್ಲ. ವಿಭಿನ್ನ ವಿಷಯಗಳ ಮತ್ತು ಸಮಾಜದ ಎಲ್ಲ ಆಯಾಮಗಳ ಬಗೆಗಿನ ಕಥಾರೂಪದ ಪುಸ್ತಕಗಳಿಂದ ಆರಂಭಿಸಿ ಆಳವಾದ ಹಾಗೂ ಗಂಭೀರವಾದ ಓದಿಗೆ ತೆರೆದುಕೊಳ್ಳುವಂತೆ ಗ್ರಂಥಾಲಯದ ಚಟುವಟಿಕೆಗಳನ್ನು ರೂಪಿಸಬೇಕು.

ದೃಶ್ಯ ಮಾಧ್ಯಮಗಳೂ ಸುಲಭವಾಗಿ ದಕ್ಕುವಂತಹ ಈ ಕಾಲದಲ್ಲಿ ಸದಭಿರುಚಿಯ, ಸತ್ಯಘಟನೆ ಆಧಾರಿತ ಚಲನಚಿತ್ರಗಳು, ಸಾಕ್ಷ್ಯಚಿತ್ರಗಳು ಹಾಗೂ ಸಣ್ಣ ಸಣ್ಣ ವಿಡಿಯೊಗಳು ಕೂಡ ಉತ್ತಮ ಸಂಪನ್ಮೂಲಗಳಾಗಿ ಬಳಕೆಗೆ ದಕ್ಕುತ್ತವೆ. ಮಕ್ಕಳಲ್ಲಿ ಪ್ರಶ್ನೆಗಳು ಹುಟ್ಟುವಂತೆ ಮಾಡಿ, ಸಂವಾದದ ಮೂಲಕ ಉತ್ತರ ಕಂಡುಕೊಂಡು ತಮ್ಮ ವರ್ತನೆಗೆ ತಾವೇ ಜವಾಬ್ದಾರರಾಗುವಂತೆ ಮಾಡಬೇಕು. ಹೀಗೆ ಹಿರಿಯರ ನಡವಳಿಕೆ, ತಮ್ಮ ವರ್ತನೆಯ ಪರಾಮರ್ಶೆ ಮತ್ತು ವಿಸ್ತೃತವಾದ ಲೋಕಜ್ಞಾನಗಳ ಮೂಲಕ ಜೀವನ ಮೌಲ್ಯ ಮತ್ತು ನೈತಿಕ ಮೌಲ್ಯಗಳು ಶಿಕ್ಷಣದಲ್ಲಿ ಅಡಕವಾಗುತ್ತವೆ.

(ಲೇಖಕರು: ಶಿಕ್ಷಣ ಕಾರ್ಯಕರ್ತ, ಅರಿವು ವಿದ್ಯಾಸಂಸ್ಥೆ, ಮೈಸೂರು)

ಸಂವಾದ ಪರಾಮರ್ಶೆ

ಹಲವು ಸಂದರ್ಭಗಳಲ್ಲಿ ಮಕ್ಕಳ ವರ್ತನೆ ಶಾಲೆಯ ವಾತಾವರಣಕ್ಕೆ ಸೂಕ್ತವಾಗಿರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಮಕ್ಕಳಲ್ಲಿ ಆ ವರ್ತನೆಯ ಬಗ್ಗೆ ಚಿಂತನೆ ಹುಟ್ಟುವಂತಹ ಸಂವಾದವನ್ನು ಮಕ್ಕಳ ಕೇಂದ್ರಿತವಾಗಿ ನಡೆಸಬೇಕು. ಮಕ್ಕಳೇ ತಮ್ಮ ವರ್ತನೆಯನ್ನು ಪರಾಮರ್ಶಿಸಿಕೊಂಡು, ಅವರಿದ್ದ ಪರಿಸ್ಥಿತಿಯಲ್ಲಿ ಅವರು ಬೇರೆ ಯಾವ ರೀತಿಯಲ್ಲಿ ವರ್ತಿಸಿದ್ದರೆ ಸೂಕ್ತವಾಗಿರುತ್ತಿತ್ತು ಎನ್ನುವ ಆಯ್ಕೆಗಳು ಅವರಿಂದಲೇ ಹೊರಬರುವಂತೆ ಸಂವಾದವನ್ನು ಕಟ್ಟಬೇಕು. ಇಂತಹ ಸಂವಾದ ಹಾಗೂ ಚಟುವಟಿಕೆಗಳು ಮಕ್ಕಳ ಕಲಿಕೆಯಲ್ಲಿ ಬೆರೆತುಹೋಗಿರಬೇಕು. ಆಗ ಇವು ಮಕ್ಕಳಲ್ಲಿ ಹಾಗೂ ಶಿಕ್ಷಕರಲ್ಲಿ ಪುನರ್ಮನನದ ಮೂಲಕ ಆಳಕ್ಕಿಳಿದು ಗಟ್ಟಿಗೊಳ್ಳುತ್ತಾ ಹೋಗುತ್ತವೆ. ಮಾನವ ಸಹಜವಾಗಿ ಮತ್ತು ವಯೋಸಹಜವಾಗಿ ಮಕ್ಕಳ ವರ್ತನೆಯಲ್ಲಿ ಅದೂ ಮುಖ್ಯವಾಗಿ ಅವರು ಒಂದು ಗುಂಪಿನಲ್ಲಿದ್ದಾಗ ನೈತಿಕವಾಗಿ ಸೂಕ್ತವಲ್ಲದ ವರ್ತನೆಗಳೂ ಹಲವು ಬಾರಿ ಎದ್ದು ಕಾಣುತ್ತಿರುತ್ತವೆ. ಈ ರೀತಿಯ ನಿರಂತರ ಸಂವಾದಗಳ ಮೂಲಕ ಮಾತ್ರ ನೈತಿಕ ನಿರ್ಧಾರಗಳು ಮಕ್ಕಳ ಅರಿವಿನ ಮಟ್ಟದಲ್ಲಿ ಆಗುವಂತೆ ಮಾಡಬಹುದು.

ಇಂಗ್ಲಿಷ್ ಕಲಿಕೆ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ವಿ. ಪ್ರದೀಪ್ ಕುಮಾರ್

1. ನಾನು ಯುಪಿಎಸ್‌ಸಿ ತರಬೇತಿ ಪಡೆಯುತ್ತಿದ್ದೇನೆ. ಆದರೆ, ನನಗೆ ಇಂಗ್ಲಿಷ್ ಭಾಷೆ ಅರ್ಥವಾಗುತ್ತಿಲ್ಲ. ನಾನು ಕನ್ನಡದಲ್ಲೇ ಅಭ್ಯಾಸ ನಡೆಸಿದರೆ ಪೂರ್ವಭಾವಿ ಪರೀಕ್ಷೆಗೆ ತೊಂದರೆಯಾಗುತ್ತದೆ. ದಯವಿಟ್ಟು ಇಂಗ್ಲಿಷ್ ಕಲಿಯಲು ಸುಲಭದ ಉಪಾಯಗಳನ್ನು ತಿಳಿಸಿ.

ಕಿರಣ್, ಊರು ತಿಳಿಸಿಲ್ಲ.

ಇಂಗ್ಲಿಷ್ ಭಾಷೆ ಕಬ್ಬಿಣದ ಕಡಲೆಯಲ್ಲ; ನಿಮ್ಮ ಅಗತ್ಯಕ್ಕೆ ತಕ್ಕಂತೆ ಸೂಕ್ತವಾದ ಕಾರ್ಯತಂತ್ರ ಮತ್ತು ಪರಿಶ್ರಮವಿದ್ದಲ್ಲಿ, ಇಂಗ್ಲಿಷ್ ಕಲಿಯಬಹುದು. ಮೊದಲಿಗೆ, ಈ ಸಲಹೆಗಳನ್ನು ಅನುಸರಿಸಿ:

- **ಆತ್ಮವಿಶ್ವಾಸ:** ಇಂಗ್ಲಿಷ್ ಭಾಷೆಯನ್ನು ಕಲಿಯುವಾಗ ಹಿಂಜರಿಕೆಯಿಲ್ಲದೆ, ಆತ್ಮವಿಶ್ವಾಸದಿಂದ ಕಲಿಕೆಯನ್ನು ಪ್ರಾರಂಭಿಸಿ.
- **ಓದುವುದು:** ದಿನನಿತ್ಯ ಇಂಗ್ಲಿಷ್ ದಿನಪತ್ರಿಕೆಗಳನ್ನು, ಪುಸ್ತಕಗಳನ್ನು, ಲೇಖನಗಳನ್ನು ಓದಿ. ಪದಬಳಕೆ, ವಾಕ್ಯ ರಚನೆ, ವ್ಯಾಕರಣವನ್ನು ಗಮನಿಸಿ. ಸಾಧ್ಯವಾದರೆ, ಉಚ್ಚಾರಣೆಗೆ ಸಹಾಯವಾಗುವಂತೆ ಜೋರಾಗಿ ಓದಿ. ಅರ್ಥವಾಗದ ಪದಗಳನ್ನು ನಿಘಂಟಿನ ಮೂಲಕ ಅರ್ಥೈಸಿಕೊಳ್ಳಿ.
- **ಮಾತನಾಡುವುದು:** ಆತ್ಮೀಯರೊಂದಿಗೆ ಸರಳವಾದ ವಿಷಯಗಳನ್ನು ಇಂಗ್ಲಿಷ್‌ನಲ್ಲೇ ಮಾತನಾಡಲು ಪ್ರಯತ್ನಿಸಿ. ತಪ್ಪು-ಒಪ್ಪುಗಳಾದಲ್ಲಿ, ಸಂಕೋಚ ಪಡದೆ ಪ್ರಯತ್ನವನ್ನು ಮುಂದುವರೆಸಿ. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು, ಕನ್ನಡಿಯ ಮುಂದೆ ಆಂಗಿಕ ಭಾಷೆಯನ್ನು ಬಳಸಿ ಮಾತನಾಡಿ.
- **ವಿಡಿಯೊ, ಚಲನಚಿತ್ರಗಳ ವೀಕ್ಷಣೆ:** ಕನ್ನಡದ ಉಪಶೀರ್ಷಿಕೆಗಳಿರುವ ಇಂಗ್ಲಿಷ್ ಚಲನಚಿತ್ರಗಳು, ಟಿವಿ ಕಾರ್ಯಕ್ರಮಗಳು, ಸಾಕ್ಷ್ಯಚಿತ್ರಗಳನ್ನು ವೀಕ್ಷಿಸಿ. ಅದೇ ರೀತಿ, ಯೂಟ್ಯೂಬ್‌ನಲ್ಲಿ ಇಂಗ್ಲಿಷ್ ಕಲಿಕೆಗೆ ನೆರವಾಗುವ ವಿಡಿಯೊಗಳನ್ನು ವೀಕ್ಷಿಸಿ. ಹಾಗೆಯೇ, ಸಾಧಕರ ಭಾಷಣಗಳನ್ನು ಕೇಳುವುದರಿಂದ ಪ್ರೇರೇಪಿತರಾಗುವುದರ ಜೊತೆಗೆ ಇಂಗ್ಲಿಷ್ ಕಲಿಯುವಿಕೆಗೆ ಸಹಾಯವಾಗುತ್ತದೆ.
- **ಮೊಬೈಲ್ ಅಪ್ಲಿಕೇಶನ್ಸ್ ಬಳಕೆ:** ಇಂಗ್ಲಿಷ್ ಕಲಿಕೆಗೆ ಅನುಕೂಲವಾಗುವ ಹಲವಾರು ಮೊಬೈಲ್ ಅಪ್ಲಿಕೇಶನ್‌ಗಳಿವೆ. ಅವುಗಳನ್ನು ಬಳಸಿ.

ಈ ಸಲಹೆಗಳನ್ನು ಕೆಲವು ತಿಂಗಳ ಕಾಲ ನಿರಂತರವಾಗಿ ಅನುಸರಿಸಿದ ನಂತರ ನಿಮ್ಮ ಇಂಗ್ಲಿಷ್ ಕಲಿಕೆ ಒಂದು ಹಂತಕ್ಕೆ ತಲುಪುತ್ತದೆ. ಆಗ, ನೀವು ಯುಪಿಎಸ್‌ಸಿ ತರಬೇತಿ ಪಡೆಯುತ್ತಿರುವ ಸಂಸ್ಥೆ ಅಥವಾ ಆನ್‌ಲೈನ್ ಕೋರ್ಸ್‌ಗಳ ಮೂಲಕ ಹೆಚ್ಚಿನ ಪರಿಣತಿಯನ್ನು ಗಳಿಸಿ. ಶುಭಹಾರೈಕೆಗಳು.

2. ನಾನು ದ್ವಿತೀಯ ಪಿಯುಸಿ (ವಿಜ್ಞಾನ) ಓದುತ್ತಿದ್ದೇನೆ. ನನಗೆ ಓದಲು ಇತ್ತೀಚೆಗೆ ತುಂಬಾ ಕಷ್ಟವಾಗಿ, ಆಸಕ್ತಿಯೂ ಕುಂದುತ್ತಿದೆ. ಇದರಿಂದ ಮನೆಯಲ್ಲಿ ನನ್ನ ಬಗ್ಗೆ ಕೋಪಗೊಂಡಿದ್ದಾರೆ. ಆದ ಕಾರಣ, ನಾನು ಪಿಯುಸಿ ಮುಗಿಸಿ ಮುಂದಿನ ಶಿಕ್ಷಣಕ್ಕೆ ಆರ್ಥಿಕ ಸಮಸ್ಯೆಯಾಗದ ಯಾವ ಕೋರ್ಸ್ ಮಾಡಿದರೆ ಒಳ್ಳೆಯದು? ಮತ್ತು ಬೇಗ ಕೆಲಸ ಪಡೆದುಕೊಳ್ಳುವ ಕೋರ್ಸ್ ಇದ್ದರೆ ದಯವಿಟ್ಟು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಭವಿಷ್ಯದ ಬಗ್ಗೆ ಆತಂಕಗೊಂಡಿರುವ ಮನೆಯವರ ಪ್ರತಿಕ್ರಿಯೆ ಸಹಜ. ಈಗಿನ ಪರಿಸ್ಥಿತಿಯಿಂದ ಎದೆಗುಂದದೆ ನಿಮ್ಮ ದೀರ್ಘಾವಧಿ ಕನಸುಗಳನ್ನು ಸಾಕಾರಗೊಳಿಸುವ ಬಗ್ಗೆ ಸಕಾರಾತ್ಮಕವಾಗಿ ಯೋಚಿಸಿ. ಸಾಧಕರ ಕಥೆಗಳನ್ನು ಓದಿ, ವಿಡಿಯೊಗಳನ್ನು ವೀಕ್ಷಿಸಿ; ಸ್ವಯಂ ಪ್ರೇರಣೆಯನ್ನು ಬೆಳೆಸಿಕೊಂಡು ನೀವೂ ಒಬ್ಬ ಸಾಧಕರಾಗಲು ಪ್ರಯತ್ನಿಸಿ. ಈ ಕುರಿತು ನಿಮ್ಮ ಮನೆಯವರಿಗೆ ಮನವರಿಕೆಯಾಗುವಂತೆ ವಿವರಿಸಿ, ಅವರ ಬೆಂಬಲವನ್ನು ಪಡೆಯಿರಿ.

ಎಂಜಿನಿಯರಿಂಗ್, ಬಿಎಸ್‌ಸಿ ಅಥವಾ ನಿಮಗಿಷ್ಟವಿರುವ ಕೋರ್ಸ್ ಮಾಡಲು ಸರ್ಕಾರಿ ಕಾಲೇಜುಗಳನ್ನು ಸೇರಬಹುದು. ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಆರ್ಥಿಕ ಸಮಸ್ಯೆಯಿರುವ ವಿದ್ಯಾರ್ಥಿಗಳಿಗಿರುವ ಅನೇಕ ಸ್ಕಾಲರ್‌ಶಿಪ್, ಉಚಿತ ಪುಸ್ತಕಗಳು, ವಿದ್ಯಾರ್ಥಿ ವೇತನಗಳ ಬಗ್ಗೆ ಮಾಹಿತಿಯನ್ನು ಕಲೆಹಾಕಿ, ಆ ಅನುಕೂಲಗಳನ್ನು ಪಡೆದುಕೊಳ್ಳಿ.

ಅಗತ್ಯವಿದ್ದರೆ, ವಿದ್ಯಾಭ್ಯಾಸದ ಜೊತೆಗೆ ಅರೆಕಾಲಿಕ ಕೆಲಸಗಳನ್ನು ಮಾಡಿ ಆರ್ಥಿಕ ಸಮಸ್ಯೆಯ ಭಾರವನ್ನು ತಗ್ಗಿಸಿ ಮನೆಯವರ ವಿಶ್ವಾಸವನ್ನು ಗಳಿಸಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಗಮನಿಸಿ: http://www.vpradeepkumar.com/self-motivation

3. ನಾನು ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿ. ನನಗೆ ಸಿಎಂಎ (ಯುಎಸ್‌ಎ) ಕೋರ್ಸ್ ಬಗ್ಗೆ ಮಾಹಿತಿ ತಿಳಿಸಿ. ಎಂಬಿಎ ಮತ್ತು ಸಿಎಂಎ ಇವೆರಡರಲ್ಲಿ, ಯಾವುದಕ್ಕೆ ಹೆಚ್ಚು ಅವಕಾಶಗಳಿವೆ?

ಸುದರ್ಶನ್, ಮಂಗಳೂರು.

ಸಿಎಂಎ, ಹಣಕಾಸಿನ ವ್ಯವಹಾರಗಳ ನಿರ್ವಹಣೆಗೆ ಸಂಬಂಧಪಟ್ಟ ಕ್ಷೇತ್ರ; ಎಂಬಿಎ ಉದ್ಯಮಗಳ ನಿರ್ವಹಣೆಗೆ ಸಂಬಂಧಪಟ್ಟ ಕ್ಷೇತ್ರ.

ಸಿಎಂಎ (ಯುಎಸ್‌ಎ) ಕೋರ್ಸ್ ಅನ್ನು ಪದವಿಯ ನಂತರ, ಎರಡು ವರ್ಷಗಳ ಹಣಕಾಸು ಸಂಬಂಧಿತ ಕೆಲಸದ ಅನುಭವದ ನಂತರ ಮಾಡಬಹುದು. ನಿಮ್ಮ ಪರಿಶ್ರಮ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಈ ಕೋರ್ಸ್ ಅನ್ನು 6 ತಿಂಗಳಿಂದ 3 ವರ್ಷದ ಒಳಗೆ ಮುಗಿಸಬಹುದು. ಕೋರ್ಸ್ ಮುಗಿದ ನಂತರ, ವಿಶೇಷವಾಗಿ ಬಹುರಾಷ್ಟ್ರೀಯ ಸಂಸ್ಥೆಗಳಲ್ಲಿ ಹೆಚ್ಚು ಉದ್ಯೋಗಾವಕಾಶಗಳಿವೆ. ಎಂಬಿಎ ಕೋರ್ಸ್ ಅನ್ನು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಮಾಡಿದರೆ ಕ್ಯಾಂಪಸ್ ಮುಖಾಂತರ ಆಕರ್ಷಕ ಉದ್ಯೋಗಾವಕಾಶಗಳಿರುತ್ತವೆ.

ಹಾಗಾಗಿ, ನೀವು ಕೇಳಿರುವ ಎರಡೂ ಕೋರ್ಸ್‌ಗಳಿಗೆ ವಿಪುಲವಾದ ಉದ್ಯೋಗಾವಕಾಶಗಳಿದ್ದು, ನಿಮ್ಮ ಸ್ವಾಭಾವಿಕ ಪ್ರತಿಭೆ ಮತ್ತು ಆಸಕ್ತಿಯಂತೆ ನಿರ್ಧರಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಹಕ್ಕಿಗಳ ಅಧ್ಯಯನಕ್ಕೆ ಆನ್‌ಲೈನ್ ಕೋರ್ಸ್– 'ಒರ್ನಿಥಾಲಜಿ'

ಗುರುರಾಜ್ ಎಸ್ ದಾವಣಗೆರೆ

ಕೋರ್ಸ್ ಕಾರ್ನರ್

ಮನೆಯ ಮುಂದಿನ ಗೇಟ್‌ನ ಮೇಲೆ ಹಾರಿ ಬಂದು ಕುಳಿತ ಗುಬ್ಬಚ್ಚಿಯನ್ನೋ, ಟುವ್ವಿ ಹಕ್ಕಿಯನ್ನೋ ಕಂಡು ಸಂತಸಪಡುವವರು, ಸಾಧ್ಯವಾದರೆ ಫೋಟೊ ಕ್ಲಿಕ್ಕಿಸುವವರು ಮನೆಗೊಬ್ಬರು ಸಿಗುತ್ತಾರೆ. ತೋಟದ ಮರದ ರೆಂಬೆಯ ಸಂದಿನಿಂದ ಕೇಳಿಬರುವ ಸುಮಧುರ ಚಿಲಿ - ಪಿಲಿ - ದನಿಯ ಹಿಂದೆ ಹೋಗಿ ಅದ್ಯಾವ ಹಕ್ಕಿ ಸದ್ದು ಮಾಡುತ್ತಿದೆ? ಎಲ್ಲಿ ಗೂಡು ಕಟ್ಟಿ ಕುಳಿತಿದೆ? ಜೋಡಿ ಹಕ್ಕಿಯಾ? ಬಣ್ಣ - ಹೆಸರೇನು? ಎಂದೆಲ್ಲ ಹುಡುಕುತ್ತ ಅದನ್ನೇ ಹವ್ಯಾಸವನ್ನಾಗಿಸಿಕೊಂಡು, ಕ್ರಮೇಣ ತಜ್ಞರಾಗಿ ಅರಣ್ಯ ಇಲಾಖೆ, ಸ್ವಯಂ ಸೇವಾ ಸಂಸ್ಥೆ(ಎನ್‌ಜಿಒ), ಸಂಶೋಧನಾ ಸಂಸ್ಥೆಗಳಲ್ಲಿ ನೌಕರಿ ಗಿಟ್ಟಿಸಿದವರೂ ಇದ್ದಾರೆ. ಇದನ್ನು ವೈಜ್ಞಾನಿಕವಾಗಿ ಕಲಿಸುವ ಕಾಲೇಜು – ವಿಶ್ವವಿದ್ಯಾಲಯಗಳೂ ಇವೆ. ಹೀಗೆ ಹಕ್ಕಿಗಳ ಬಗ್ಗೆ ಶಾಸ್ತ್ರೀಯವಾಗಿ ನಡೆಸುವ ಅಧ್ಯಯನವನ್ನು ಒರ್ನಿಥಾಲಜಿ (ornithology) ಎನ್ನುತ್ತಾರೆ. ಅತ್ಯಂತ ಕಡಿಮೆ ಖರ್ಚಿನಲ್ಲಿ, ಹವ್ಯಾಸವನ್ನೇ ಶಿಸ್ತಿನ ಅಧ್ಯಯನವನ್ನಾಗಿ ಬದಲಿಸಿಕೊಳ್ಳುವ ಹಾಗೂ ಮನೆಯಲ್ಲಿ ಕುಳಿತೇ ಅಧ್ಯಯನ ಮಾಡುವ ಅವಕಾಶ ಕೇಂದ್ರ ಸರ್ಕಾರದ 'ಸ್ವಯಂ' (SWAYAM – Study Webs of Active – Learning for Young Aspiring Minds) ಶಿಕ್ಷಣ ಯೋಜನೆಯಿಂದ ಈಗ ಲಭ್ಯವಿದೆ.

- **ವಿದ್ಯಾರ್ಹತೆ:** ಅಂಗೀಕೃತ ವಿವಿಯಲ್ಲಿ ಪ್ರಥಮ ವರ್ಷದ ವಿಜ್ಞಾನ (life sciences) ಪದವಿ ಓದುತ್ತಿರುವ ಹಾಗೂ ಸ್ನಾತಕೋತ್ತರ ಪದವಿ ಅಧ್ಯಯನ ಕೈಗೊಂಡಿರುವ ವಿದ್ಯಾರ್ಥಿಗಳು ಈ ಕೋರ್ಸ್ ಕಲಿಯಲು ಅರ್ಹರು.
- **ಅವಧಿ:** 12 ವಾರಗಳು
- **ಪ್ರಾರಂಭ :** 24 ಜನವರಿ 2022
- **ಪರೀಕ್ಷೆ:** 23 ಎಪ್ರಿಲ್ 2022
- **ದಾಖಲಾತಿಗೆ ಕೊನೆಯ ದಿನಾಂಕ:** 31 ಜನವರಿ 2022 **ಪರೀಕ್ಷಾ ಶುಲ್ಕ:** ₹1,000

ಆನ್‌ಲೈನ್ ಕೋರ್ಸ್ ಕಲಿಕೆಗೆ ಯಾವುದೇ ಶುಲ್ಕವಿರುವುದಿಲ್ಲ. ಹಕ್ಕಿಗಳ ಅಂಗರಚನೆ, ಆಹಾರ ಪದ್ಧತಿ, ಹುಡುಕಾಟ, ಶರೀರ ವಿಜ್ಞಾನ, ಕಾಯಿಲೆಗಳು, ಜೀವಿ ಪರಿಸ್ಥಿತಿ, ಧ್ವನಿ ನಡವಳಿಕೆ, ವೈವಿಧ್ಯ, ಆವಾಸ ಪರಿಸ್ಥಿತಿ, ಗೂಡಿನ ರಚನೆ, ಸಂರಕ್ಷಣಾ ಯೋಜನೆ, ಇತರ ಹಕ್ಕಿಗಳೊಂದಿಗಿನ ಒಡನಾಟ, ವರ್ಗೀಕರಣ ಹೀಗೆ ಹತ್ತು ಹಲವು ವಿಷಯಗಳ ಕುರಿತು ನೇರಪ್ರಸಾರದಲ್ಲಿ ಬೋಧಿಸಲಾಗುತ್ತದೆ. ವಿದ್ಯಾರ್ಥಿಗಳು ಕನಿಷ್ಠ 3 ರಿಂದ 4 ಕ್ಷೇತ್ರಕಾರ್ಯ (field work) ಮಾಡಿದ್ದರ ಕುರಿತು ವರದಿ ಸಲ್ಲಿಸಬೇಕು.

ಒಟ್ಟು 12 ಮಾಡ್ಯೂಲ್‌ಗಳಲ್ಲಿ ಇಡೀ ಕೋರ್ಸ್ ಹೇಳಿಕೊಟ್ಟು, ಪರೀಕ್ಷೆ ಬರೆದು ಉತ್ತೀರ್ಣರಾದವರಿಗೆ ಉನ್ನತ ಅಧ್ಯಯನಕ್ಕೆ ಅನುಕೂಲ ಕಲ್ಪಿಸುವ ಮತ್ತು ಈಗಾಗಲೇ ಓದುತ್ತಿರುವ ಬೇರೆ ಕೋರ್ಸ್‌ನ ಗ್ರೇಡ್ ಹೆಚ್ಚಿಸುವ 03 ಕ್ರೆಡಿಟ್ ಪಾಯಿಂಟ್‌ಗಳನ್ನು ನೀಡಲಾಗುತ್ತದೆ. ಪರೀಕ್ಷೆ ಮೂರು ಗಂಟೆಗಳ ಅವಧಿಯದಾಗಿದ್ದು ಯಾವುದಾದರೂ ಆಯ್ದ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಬರೆಯಬೇಕು. ಕೋರ್ಸ್‌ಗೆ ನೋಂದಣಿ ಮಾಡಿಕೊಳ್ಳುವಾಗಲೇ ಪರೀಕ್ಷಾ ಶುಲ್ಕ ಭರಿಸಬೇಕು. ಪ್ರಮಾಣ ಪತ್ರವನ್ನು ಐಐಟಿ ಮದ್ರಾಸ್ ಮತ್ತು ನ್ಯಾಷನಲ್ ಪ್ರೋಗ್ರಾಮ್ ಫಾರ್ ಎನ್‌ಹ್ಯಾನ್ಸ್‌ಡ್ ಲರ್ನಿಂಗ್ (NPTEL –National Program on Technology Enhanced Learning) ಸಂಸ್ಥೆಗಳು ಜಂಟಿಯಾಗಿ ನೀಡುತ್ತವೆ. ಕೃಷಿ, ಅರಣ್ಯ, ವನ್ಯಜೀವಿ ಸಂರಕ್ಷಣೆ ಮತ್ತು ಜೀವಿವೈವಿಧ್ಯ ಸಂರಕ್ಷಣೆಯಲ್ಲಿ ನಿರತರಾದ ಸಂಸ್ಥೆಗಳು 'ಸ್ವಯಂ' ನ ಪ್ರಮಾಣ ಪತ್ರವನ್ನು ಮಾನ್ಯಮಾಡಿ ಕೆಲಸ ನೀಡುತ್ತವೆ. ಹೆಚ್ಚಿನ ಮಾಹಿತಿಗೆ ಈ ಜಾಲತಾಣ ನೋಡಿ: https://onlinecourses.nptel.ac.in

ವಿದ್ಯಾರ್ಥಿ ವೇತನ ಕೈಪಿಡಿ

ಐಐಟಿ ಗಾಂಧಿನಗರ ಫಿಸಿಕ್ಸ್ ಡಿಸಿಪ್ಲಿನ್ (ಪಿಡಿ) ಪೋಸ್ಟ್– ಡಾಕ್ಟರಲ್ ಫೆಲೋಶಿಪ್ (ಪಿಡಿಎ) 2021

- **ವಿವರ:** ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ಐಐಟಿ) ಗಾಂಧಿನಗರ, ಫಿಸಿಕ್ಸ್ ಡಿಸಿಪ್ಲಿನ್ (ಪಿಡಿ) ಪೋಸ್ಟ್ ಡಾಕ್ಟರಲ್ ಫೆಲೋಶಿಪ್ 2021, ಪಿಎಚ್‌ಡಿ ಪದವೀಧರರಿಗೆ ಸಂಶೋಧನೆಗೆ ಅವಕಾಶ ನೀಡುತ್ತಿದೆ.
- **ಅರ್ಹತೆ:** ಫಿಸಿಕ್ಸ್‌ನಲ್ಲಿ ಪಿಎಚ್‌ಡಿ ಪದವಿ ಮುಗಿಸಿದವರು ಹಾಗೂ ತಮ್ಮ ಪ್ರಬಂಧ ಸಲ್ಲಿಸಿರುವ ಅಥವಾ ಸಲ್ಲಿಸಲಿರುವ ಅಭ್ಯರ್ಥಿಗಳಿಗೆ ಈ ಫೆಲೋಶಿಪ್ ಮುಕ್ತವಾಗಿದೆ.
- **ಆರ್ಥಿಕ ನೆರವು:** ತಿಂಗಳಿಗೆ ₹ 50,000
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಡಿಸೆಂಬರ್ 31, 2021
- **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/GPF8

ಕೃಪೆ: buddy4study.com

ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್

ಅರ್ಹತೆ, ಪ್ರವೇಶ ಪರೀಕ್ಷೆ ವಿವರ

ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಪ್ರವೇಶಕ್ಕಿರುವ ಅರ್ಹತಾ ಪರೀಕ್ಷೆ, ಪರೀಕ್ಷಾ ಸಮಯ ಮತ್ತು ಶುಲ್ಕ ಕುರಿತ ವಿವರ ಇಲ್ಲಿದೆ.

ಆರ್.ಬಿ. ಗುರುಬಸವರಾಜ

ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಕುರಿತು ಕಳೆದ ವಾರ ಪ್ರಕಟವಾದ ಲೇಖನಕ್ಕೆ ಓದುಗರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕೆಲವು ಓದುಗರು, ಕೋರ್ಸ್ ಆಯ್ಕೆ, ಕಲಿಕೆಯ ವಿಧಾನ ಸೇರಿದಂತೆ ಕೆಲವು ವಿಷಯಗಳ ಕುರಿತು ಮಾಹಿತಿ ಕೇಳಿದ್ದಾರೆ. ಅಂಥ ಹಲವು ಮಾಹಿತಿಗಳನ್ನು ಇಲ್ಲಿ ನೀಡಲಾಗಿದೆ.

ಭಾರತದಲ್ಲಿ ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್ ವೈವಿಧ್ಯಮಯ ಸ್ವರೂಪಗಳಲ್ಲಿ ಲಭ್ಯವಿದೆ. ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ (ಪಿ.ಜಿ ಕೋರ್ಸ್), ವೃತ್ತಿಪರ ಕೋರ್ಸ್ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳು ಲಭ್ಯವಿವೆ.

ಅಭ್ಯರ್ಥಿಗಳು ಪೂರ್ಣ ಅವಧಿ ಅಥವಾ ದೂರಶಿಕ್ಷಣದ ಮೂಲಕ 'ರಿಟೇಲ್ ಮ್ಯಾನೇಜ್‌ಮೆಂಟ್ ಕೋರ್ಸ್'ಗಳನ್ನು ಕಲಿಯಲು ಅವಕಾಶವಿದೆ. ಈ ಕೋರ್ಸ್ ಪ್ರವೇಶಕ್ಕೆ ಕನಿಷ್ಠ 10 + 2 ಅಥವಾ ತತ್ಸಮಾನ ವಿದ್ಯಾರ್ಹತೆ ಇರಬೇಕು. ಜೊತೆಗೆ ಕೆಲವು ಪ್ರಸಿದ್ಧ ಕಾಲೇಜು ಹಾಗೂ ಸ್ವಾಯತ್ತ ವಿಶ್ವವಿದ್ಯಾಲಯಗಳು ಪ್ರವೇಶಕ್ಕಾಗಿ ಅರ್ಹತಾ ಪರೀಕ್ಷೆಯನ್ನು ಆಯೋಜಿಸುತ್ತವೆ.

ಪ್ರವೇಶ ಪರೀಕ್ಷೆ: ಈ ಮ್ಯಾನೇಜ್‌ಮೆಂಟ್ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆಸುವಂತಹ ಸಿಎಟಿ(CAT), ಎಕ್ಸ್‌ಎಟಿ (XAT), ಎಂಎಟಿ(MAT), ಸಿಎಂಎಟಿ(CMAT) ನಂತಹ ರಾಷ್ಟ್ರಮಟ್ಟದ ಅರ್ಹತಾ ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಇದಲ್ಲದೇ, ಸರ್ಕಾರದ ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ತಮ್ಮದೇ ಆದ ಪ್ರವೇಶ ಪರೀಕ್ಷೆಗಳನ್ನೂ ಸಹ ನಡೆಸುತ್ತವೆ. ಪ್ರವೇಶ ಪರೀಕ್ಷೆಗಳ ನಂತರ ಕೆಲವು ಕಾಲೇಜುಗಳು ಅಭ್ಯರ್ಥಿಗಳನ್ನು ವೈಯಕ್ತಿಕ ಸಂದರ್ಶನಕ್ಕೆ ಕರೆಯಲಾಗುತ್ತದೆ (ಇದು ವಿಶ್ವವಿದ್ಯಾಲಯದ ಅಗತ್ಯವನ್ನು ಅವಲಂಬಿಸಿರುತ್ತದೆ).

ಪರೀಕ್ಷಾ ವಿಧಾನ: ಪರೀಕ್ಷಾ ವಿಧಾನವು ಪರೀಕ್ಷೆಯ ವಿಧಕ್ಕನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ಈ ಎಲ್ಲಾ ಪ್ರವೇಶ ಪರೀಕ್ಷೆಗಳು ಕಂಪ್ಯೂಟರ್ ಆಧಾರಿತವಾಗಿ ನಡೆಯುತ್ತವೆ. ಕೆಲವು ಆನ್‌ಲೈನ್ ಮತ್ತು ಕೆಲವು ಆಫ್‌ಲೈನ್ ಮೂಲಕ ನಡೆಯುತ್ತವೆ. ಪರೀಕ್ಷೆಯು 100 ರಿಂದ 150 ಅಂಕಗಳಿಗೆ ನಿಗದಿಯಾಗಿದ್ದು, 120 ರಿಂದ 150 ನಿಮಿಷಗಳ ಅವಧಿಯಲ್ಲಿ ಪರೀಕ್ಷೆ ನಡೆಯುತ್ತದೆ.

ಪ್ರವೇಶ ಪರೀಕ್ಷಾ ಶುಲ್ಕ: ಪ್ರವೇಶ ಪರೀಕ್ಷೆಗಳಿಗೆ ₹1500 ರಿಂದ ₹2000 ದವರೆಗೆ ಶುಲ್ಕ ಇರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶುಲ್ಕದಲ್ಲಿ ರಿಯಾಯಿತಿ ಇರುತ್ತದೆ.

ಪ್ರವೇಶ ಪರೀಕ್ಷಾ ಸಮಯ: 'ಈ ಕೋರ್ಸ್‌ಗೆ ಪ್ರವೇಶ ಪರೀಕ್ಷೆಗಳು ಸಾಮಾನ್ಯವಾಗಿ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳಲ್ಲಿ ನಡೆಯುತ್ತವೆ. ಕೆಲವು ಪ್ರವೇಶ ಪರೀಕ್ಷೆಗಳು ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ನಡೆಯುತ್ತವೆ. ಬಹುತೇಕ ಎಲ್ಲಾ ವಿಧದ ಪ್ರವೇಶ ಪರೀಕ್ಷೆಗಳು ವರ್ಷಕ್ಕೆ ಒಮ್ಮೆ ಮಾತ್ರ ನಡೆಯುತ್ತವೆ.

ಕೋರ್ಸ್ ಶುಲ್ಕ: ಕೋರ್ಸ್ ಅನುಗುಣವಾಗಿ ಶುಲ್ಕದಲ್ಲಿ ವ್ಯತ್ಯಾಸ ಇರುತ್ತದೆ. ವಾರ್ಷಿಕವಾಗಿ ₹10ಸಾವಿರದಿಂದ ₹ 2ಲಕ್ಷಗಳವರೆಗೆ ಕೋರ್ಸ್ ಶುಲ್ಕ ಇರುತ್ತದೆ. ಕಾಲೇಜು ಹಾಗೂ ವಿಶ್ವವಿದ್ಯಾಲಯಕ್ಕೆ ಅನುಗುಣವಾಗಿ ಕೋರ್ಸ್ ಶುಲ್ಕದಲ್ಲಿ ವ್ಯತ್ಯಾಸ ಇರುತ್ತದೆ.

ಬೆಂಗಳೂರಿನ ಐಐಎಂಬಿ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ರಿಟೇಲ್ ಮ್ಯಾನೇಜ್‌ಮೆಂಟ್ ಕುರಿತು ಎಲ್ಲ ರೀತಿಯ ಕೋರ್ಸ್‌ಗಳು ಲಭ್ಯವಿವೆ. ಹೆಚ್ಚಿನ ಮಾಹಿತಿಗೆ https://onlinecourses.swayam2.ac.in ಈ ಲಿಂಕ್ ನೋಡಬಹುದು.

ಸುಭಾಷಿತ

ಭವಿಷ್ಯದಲ್ಲಿ ಒಂದಲ್ಲ ಒಂದು ದಿನ ಉತ್ತಮವಾದ ಅವಕಾಶ ಬಂದೇ ಬರುತ್ತದೆ.

–ಅಬ್ರಹಾಂ ಲಿಂಕನ್

ಒಪ್ಪಿತ ಮೌಲ್ಯಗಳ ಕಡೆಗಣನೆ: ಉನ್ನತ ಹುದ್ದೆಯಲ್ಲಿ ಇರುವವರಿಗೆ ಶೋಭೆಯಲ್ಲ

ಸರ್ಕಾರ ಮತ್ತು ಪಕ್ಷ, ರಾಜಕೀಯ ಮತ್ತು ಧರ್ಮ, ಸಾರ್ವಜನಿಕ ಜೀವನದಲ್ಲಿ ಸ್ವೀಕಾರಾರ್ಹವಾಗುವ ನಡವಳಿಕೆ ಯಾವುದು ಮತ್ತು ಯಾವುದು ಅಂತಹ ನಡವಳಿಕೆ ಅಲ್ಲ, ಕಾನೂನಿಗೆ ಅನುಗುಣವಾಗಿ ನಡೆದುಕೊಳ್ಳುವುದು ಮತ್ತು ಕಾನೂನು ಇಲ್ಲ ಎಂಬುದನ್ನೇ ವರ್ತಿಸುವುದು... ಇಂಥವುಗಳ ನಡುವಿನ ವ್ಯತ್ಯಾಸಗಳು ಮರೆಯಾಗುತ್ತಿರುವ ಕಾಲಘಟ್ಟ ಇದು. ಒಪ್ಪಿತ ಪ್ರಜಾತಾಂತ್ರಿಕ ಮೌಲ್ಯಗಳ ಮೇಲೆ ನಿರಂತರವಾಗಿ ದಾಳಿಗಳು ನಡೆಯುವ, ಅಂತಹ ದಾಳಿಗಳಿಗೆ ಸಾರ್ವಜನಿಕ ಸ್ವೀಕೃತಿ ಕೊಡಿಸಲು ಒಂದು ವರ್ಗದಿಂದ ವ್ಯವಸ್ಥಿತ ಯತ್ನಗಳು ನಡೆಯುತ್ತಿರುವ ಕಾಲಘಟ್ಟವೂ ಹೌದು. ವ್ಯಕ್ತಿಗಳ ಸಾರ್ವಜನಿಕ ಜೀವನದಲ್ಲಿ ನಿಭಾಯಿಸುವ ಪಾತ್ರಗಳು ಅದಲುಬದಲು ಆದಾಗ, ಪ್ರಜಾತಂತ್ರ ವ್ಯವಸ್ಥೆಯು ಕಾರ್ಯ ನಿರ್ವಹಿಸಬೇಕಾದ ವಿಧಾನದ ಮೇಲೆ ಒತ್ತಡ ಸೃಷ್ಟಿಯಾಗುತ್ತದೆ. ಋಜುತ್ವ, ನ್ಯಾಯಸಮ್ಮತ, ಸಮಾನ ಹಕ್ಕುಗಳು ಮತ್ತು ಸಮಾನ ಅವಕಾಶಗಳು, ಕಾನೂನಿನ ಬದ್ಧವಾದ ನಡವಳಿಕೆ ಎಂಬ ಮೌಲ್ಯಗಳ ಆಧಾರದಲ್ಲಿ ಮುನ್ನಡೆಯಬೇಕಿರುವ ವ್ಯವಸ್ಥೆಗೆ ಆಗ ಧಕ್ಕೆ ಒದಗುತ್ತದೆ. ಈ ಬಗೆಯ ಮೌಲ್ಯಗಳನ್ನು ಪಾಲಿಸುವ ವ್ಯವಸ್ಥೆಯಲ್ಲಿ ಸರ್ಕಾರ ಹಾಗೂ ಸರ್ಕಾರವನ್ನು ರಚಿಸಿರುವ ರಾಜಕೀಯ ಪಕ್ಷ ಬೇರೆ ಬೇರೆಯಾಗಿ ಇರಬೇಕಾಗುತ್ತದೆ. ಪ್ರಧಾನಿ ಹುದ್ದೆಯಲ್ಲಿ ಇರುವ ವ್ಯಕ್ತಿ ರಾಜಕಾರಣಿಯಂತೆ ನಡೆದುಕೊಳ್ಳಲು ಆಗುವುದಿಲ್ಲ. ರಾಜಕಾರಣವನ್ನು ಅದರದೇ ಆದ ನಿಯಮಗಳಿಗೆ ಅನುಗುಣವಾಗಿ ಮಾಡಬೇಕಾಗುತ್ತದೆ. ಸಮಾಜ ಜೀವನದ ಇತರ ಕ್ಷೇತ್ರಗಳಲ್ಲಿ ರಾಜಕಾರಣ ಪ್ರವೇಶಿಸುವುದಕ್ಕೆ ಅವಕಾಶ ಕೊಡಲು ಆಗುವುದಿಲ್ಲ. ಸಾರ್ವಜನಿಕ ಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬ ವಿಚಾರದಲ್ಲಿ ಕಾನೂನು ಮತ್ತು ಸಂಪ್ರದಾಯದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಗಡಿಗಳನ್ನು ಮೀರಲು ಆಗುವುದಿಲ್ಲ. ಆದರೆ, ಇಂದಿನ ದಿನಗಳಲ್ಲಿ ಸರಹದ್ದುಗಳನ್ನು ದಾಟುವುದನ್ನೇ ಸಹಜ ಎಂಬಂತೆ ಆಗುತ್ತಿದೆ. ದೇಶದ ಅತ್ಯುನ್ನತ ಹುದ್ದೆಯಲ್ಲಿ ಆಸೀನರಾಗಿರುವ ವ್ಯಕ್ತಿಗಳೇ ಈ ಗಡಿಗಳನ್ನು ದಾಟುತ್ತಿರುವುದು ಕಾಣಿಸುತ್ತಿದೆ.

ಉತ್ತರಪ್ರದೇಶದ ಸಾರ್ವಜನಿಕ ಕಾರ್ಯಕ್ರಮಗಳನ್ನು ಪ್ರಧಾನಿ ಅವರು ರಾಜಕೀಯ ಲಾಭ ಹೆಚ್ಚಿಸಿಕೊಳ್ಳಲು ಬಳಸಿಕೊಂಡದ್ದು ತೀರಾ ಅನುಚಿತ

ಪ್ರಧಾನಿ ನರೇಂದ್ರ ಮೋದಿ ಅವರು ಕೆಲವು ವಾರಗಳಿಂದ ಉತ್ತರಪ್ರದೇಶದಲ್ಲಿ ಒಂದಾದ ನಂತರ ಇನ್ನೊಂದರಂತೆ ಹೊಸ ಯೋಜನೆಗಳನ್ನು ಉದ್ಘಾಟಿಸುತ್ತಿದ್ದಾರೆ, ಪೂರ್ಣಗೊಂಡ ಯೋಜನೆಗಳನ್ನು ಸಾರ್ವಜನಿಕರಿಗೆ ಮುಕ್ತಗೊಳಿಸುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದೆ. ಹೊಸದಾಗಿ ನಿರ್ಮಿಸಲಾಗಿರುವ ಹೆದ್ದಾರಿಗೆ ಭಾರತೀಯ ವಾಯುಪಡೆಯ ವಿಮಾನದಲ್ಲಿ ಬಂದಿಳಿದು, ಮೋದಿ ಅವರು ಚುನಾವಣಾ ಭಾಷಣ ಮಾಡಿದರು; ವಿಮಾನ ನಿಲ್ದಾಣವೊಂದರ ಶಂಕುಸ್ಥಾಪನೆ ನೆರವೇರಿಸಿ ಚುನಾವಣಾ ಭಾಷಣ ಮಾಡಿದರು; ಕಾಶಿ ವಿಶ್ವನಾಥ ಕಾರಿಡಾರ್ ಉದ್ಘಾಟಿಸಿ, ಆ ಕಾರ್ಯಕ್ರಮವನ್ನು ತಮ್ಮ ಹಿಂದುತ್ವ ರಾಜಕೀಯದ ಪ್ರದರ್ಶನಕ್ಕೆ ಬಳಸಿಕೊಂಡರು. ಈ ಯೋಜನೆಗಳೆಲ್ಲ ರಾಷ್ಟ್ರದ ಯೋಜನೆಗಳು, ದೇಶದ ತೆರಿಗೆದಾರರ ಹಣವನ್ನು ಇವಕ್ಕೆ ಬಳಸಲಾಗಿದೆ. ಈ ಯೋಜನೆಗಳನ್ನು ಒಂದು ರಾಜಕೀಯ ಪಕ್ಷ, ಪ್ರಧಾನಮಂತ್ರಿ ಅಥವಾ ಮುಖ್ಯಮಂತ್ರಿ ಜೊತೆ ಸಮೀಕರಿಸಿ, ಇವು ಆ ಪಕ್ಷದಿಂದ ಅಥವಾ ಆ ವ್ಯಕ್ತಿಗಳಿಂದ ಬಂದ ಉಡುಗೊರೆ ಎಂಬಂತೆ ಬಿಂಬಿಸುವುದು ತಪ್ಪು. ಪ್ರಧಾನಿ ಸ್ಥಾನದಲ್ಲಿ ಇರುವವರು ಸಾರ್ವಜನಿಕರಿಗೆ ಪ್ರಯೋಜನವಾಗುವ ಯೋಜನೆಗಳ ಮಾರಾಟದ ಪ್ರತಿನಿಧಿಯ ಮಟ್ಟಕ್ಕೆ ತಮ್ಮನ್ನು ತಾವು ಇಳಿಸಿಕೊಳ್ಳಬಾರದು. ಇಂತಹ ಯೋಜನೆಗಳಿಂದ ರಾಜಕೀಯ ಲಾಭವನ್ನು ಹೆಚ್ಚಿಸಿಕೊಳ್ಳುವ ಯತ್ನವನ್ನು ನಡೆಸಬಾರದು. ಈ ರೀತಿಯ ಕೆಲಸವನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಇರುವವರು, ಇತರ ಪಕ್ಷಗಳಿಗೆ ಸೇರಿದ ಸಚಿವರು ಕೂಡ ಮಾಡುತ್ತಾರೆ ಎಂಬುದು ನಿಜ. ಆದರೆ, ದೇಶದ ಅತ್ಯುನ್ನತ ಹುದ್ದೆಯೊಂದರಲ್ಲಿ ಇರುವ ವ್ಯಕ್ತಿಯು ಸಾರ್ವಜನಿಕ ನಡವಳಿಕೆ ಕುರಿತ ಅತ್ಯುನ್ನತ ಮಟ್ಟದಲ್ಲಿಯೇ ಇರಬೇಕು ಅಲ್ಲವೇ?

ಉತ್ತರಪ್ರದೇಶದ ವಿಧಾನಸಭೆಗೆ ನಡೆಯಲಿರುವ ಚುನಾವಣೆಯನ್ನು ಹೇಗಾದರೂ ಮಾಡಿ ಜಯ ಸಾಧಿಸಬೇಕು ಎಂದು ಪ್ರಧಾನಿ ನಡೆಸುತ್ತಿರುವ ಯತ್ನದಲ್ಲಿ ರಾಜಕಾರಣ ಮತ್ತು ಧರ್ಮದ ನಡುವೆ ಇರಬೇಕಿರುವ ಅಂತರವು ತಗ್ಗಿದೆ. ಖಾಸಗಿ ನಂಬಿಕೆಗಳು ಹಾಗೂ ಸಾರ್ವಜನಿಕ ನಡವಳಿಕೆಗಳು ಒಂದರ ಮೇಲೆ ಒಂದು ಪ್ರಭಾವ ಬೀರುವುದನ್ನು ತಡೆಯಬೇಕಿದ್ದ ರೇಖೆಯೂ ಮಸುಕಾಗಿದೆ. ಪ್ರಧಾನಿಯವರು ತಮ್ಮ ನಂಬಿಕೆಗಳನ್ನು ಸಾರ್ವಜನಿಕವಾಗಿ ಪ್ರದರ್ಶನಕ್ಕೆ ಇಡುವುದು ಮತ್ತು ಅದನ್ನು ರಾಜಕೀಯ ವ್ಯವಹಾರಕ್ಕೆ ಬಳಸಿಕೊಳ್ಳುವುದು ತೀರಾ ಅನುಚಿತ. ಅವರು ಎಲ್ಲ ಧರ್ಮಗಳ ಜನರು ಇರುವ ದೇಶದ ಪ್ರಧಾನಿ. ತಮ್ಮ ಧಾರ್ಮಿಕ ನಂಬಿಕೆಗಳನ್ನು ಅವರು ಸಾರ್ವಜನಿಕವಾಗಿ ಪ್ರದರ್ಶಿಸಬಾರದು. ಅಯೋಧ್ಯೆಯಲ್ಲಿ ಅಥವಾ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಪ್ರಧಾನಿಯವರು ಧಾರ್ಮಿಕ ವಿಧಿವಿಧಾನಗಳಲ್ಲಿ ಭಾಗಿಯಾಗಿದ್ದು, ಹಲವು ಪ್ರಶ್ನೆಗಳನ್ನು ಎತ್ತಿದೆ. ಖಾವಿ ಧರಿಸಿರುವ ವ್ಯಕ್ತಿ ಮುಖ್ಯಮಂತ್ರಿಯಾಗಿದ್ದರೂ, ಆ ರಾಜ್ಯದಲ್ಲಿ ಪ್ರಧಾನಿಯವರು ಧಾರ್ಮಿಕ ಕಾರ್ಯಕ್ರಮದ ಮುಖ್ಯಸ್ಥನ ಸ್ಥಾನದಲ್ಲಿ ಕುಳಿತುಕೊಳ್ಳುವುದರಿಂದ, ಪ್ರಜಾತಂತ್ರ ವ್ಯವಸ್ಥೆಗೆ ಅಗತ್ಯವಿರುವ ಕೆಲವು ಗಡಿರೇಖೆಗಳು ಮಸುಕಾಗುತ್ತವೆ.

ದಿನದ ಟ್ವೀಟ್

ಅಚ್ಚರಿಯ ಸಂಗತಿ

ಇದೊಂದು ತರ್ಕಬದ್ಧವಲ್ಲದ ಕ್ರಮ. ಕೊರೊನಾ ಸೋಂಕು ಹರಡುವಿಕೆಯನ್ನು ರಾತ್ರಿ ಕರ್ಫ್ಯೂವಿನಿಂದ ಹೇಗೆ ತಡೆಯಲು ಸಾಧ್ಯ ಎಂಬುದು ನನಗಿನ್ನೂ ಅಚ್ಚರಿಯ ವಿಷಯ. ಹಾಗಾದರೆ, ಬೆಳಗಿನ ಹೊತ್ತು ಗುಂಪುಗೂಡುವುದು ಅಪಾಯಕಾರಿಯಲ್ಲ, ರಾತ್ರಿ ವೇಳೆ ಗುಂಪುಗೂಡುವುದು ಮಾತ್ರ ಅಪಾಯಕಾರಿ ಎಂಬುದು ಸಾಬೀತಾಗುತ್ತಿದೆಯೇ?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಹಿಂದೆಲ್ಲ, ಪ್ರತೀ ಜಿಲ್ಲೆಯಲ್ಲಿಯೂ ಒಬ್ಬೊಬ್ಬ ಮಿನಿ ಸಿ.ಎಂ ಇರುತ್ತಿದ್ದರು. ಈಗ ಪ್ರತೀ ಜಿಲ್ಲೆಯಲ್ಲಿಯೂ ವೈದ್ಯಕೀಯ ಕಾಲೇಜು ಇದೆ. ಹಿಂದೆ, ಉತ್ತರಪ್ರದೇಶದಲ್ಲಿ ಗಲಭೆಗಳು ಆಗುತ್ತಿದ್ದವು. ಈಗ ವಿಶ್ವವಿದ್ಯಾಲಯಗಳು, ವೈದ್ಯಕೀಯ ಕಾಲೇಜುಗಳು, ವಿಮಾನ ನಿಲ್ದಾಣಗಳ ನಿರ್ಮಾಣ ಆಗುತ್ತಿದೆ.

ಅಮಿತ್ ಶಾ, ಕೇಂದ್ರ ಗೃಹ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 27-12-1996

• **ದಳ ಸರ್ಕಾರದ ವೈಫಲ್ಯ: ಕುಸಿದ ಅಭಿವೃದ್ಧಿ ಕಾರ್ಯ– ತುರ್ತು ಶ್ವೇತಪತ್ರ ಪ್ರಕಟಣೆಗೆ ಖರ್ಗೆ ಆಗ್ರಹ**

ಬೆಂಗಳೂರು, ಡಿ. 26– ನೀರಾವರಿ, ವಿದ್ಯುತ್ ಮತ್ತಿತರ ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆಪಾದಿಸಿದ ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಎಂ. ಮಲ್ಲಿಕಾರ್ಜುನ ಖರ್ಗೆ ಅವರು, ವಿವಿಧ ಕ್ಷೇತ್ರಗಳಲ್ಲಿ ಖರ್ಚು ಮಾಡಿರುವ ಹಣ ಹಾಗೂ ಭೌತಿಕ ಸಾಧನೆ ಬಗ್ಗೆ 'ಶ್ವೇತಪತ್ರ' ಪ್ರಕಟಿಸುವಂತೆ ಇಂದು ಇಲ್ಲಿ ಸರ್ಕಾರವನ್ನು ಆಗ್ರಹಪಡಿಸಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಪಕ್ಷದ ಅಧ್ಯಕ್ಷರು ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲ್ ಅವರೊಡನೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರನ್ನು ಭೇಟಿಯಾಗಿ, ಯೋಜನಾ ಗಾತ್ರ ಕಡಿತಗೊಳ್ಳುವುದರಿಂದ ಅಭಿವೃದ್ಧಿ ಕಾರ್ಯಗಳ ಮೇಲೆ ಆಗುವ ದುಷ್ಪರಿಣಾಮ ಕುರಿತು ಚರ್ಚೆ ನಡೆಸುವುದಾಗಿ ಹೇಳಿದರು.

• **ರಾಜ್ಯದಾದ್ಯಂತ ಪೌರಸೇವಾ ನೌಕರರ ಮುಷ್ಕರ ಯಶಸ್ವಿ**

ಚಿತ್ರದುರ್ಗ, ಡಿ. 26– ರಾಜ್ಯದಾದ್ಯಂತ ಇಂದಿನಿಂದ ಆರಂಭವಾಗಿರುವ ಪೌರಸೇವಾ ನೌಕರರ ಮುಷ್ಕರ ಇಂದು ಪೂರ್ಣ ಯಶಸ್ವಿಯಾಗಿದೆ. ಮಾತುಕತೆ ನಡೆಸಲು ಮುಖ್ಯಮಂತ್ರಿಗಳ ಕಚೇರಿಯಿಂದ ಆದೇಶ ಬಂದಿದೆ ಎಂದು ರಾಜ್ಯ ಪೌರಸೇವಾ ನೌಕರರ ಸಂಘದ ಅಧ್ಯಕ್ಷ ಜಿ.ಎಸ್. ಮಂಜುನಾಥ ಅವರು ಇಲ್ಲಿ ತಿಳಿಸಿದರು.

'ರಾಯಚೂರು ಜಿಲ್ಲೆಯಲ್ಲಿ 22 ತಿಂಗಳ ಕಾಲ, ಧಾರವಾಡ ಜಿಲ್ಲೆಯಲ್ಲಿ 16 ತಿಂಗಳ ಕಾಲ ಪೌರಸೇವಾ ನೌಕರರಿಗೆ ವೇತನವನ್ನೇ ನೀಡಿಲ್ಲ' ಎಂದು ಸಂಘದ ಖಜಾಂಚಿ ಮರೇಗೌಡ ಅವರು ಮಾಹಿತಿ ನೀಡಿದರು.

50 ವರ್ಷಗಳ ಹಿಂದೆ

ಸೋಮವಾರ, 27-12-1971

• **ಢಾಕಾ ಮತ್ತೆ ಪೂರ್ವ ಸ್ಥಿತಿಗೆ**

ಢಾಕಾ, ಡಿ. 26– ವಿಮೋಚನೆಯ ಹತ್ತು ದಿನಗಳ ನಂತರ, ಬಾಂಗ್ಲಾದೇಶದ ಸರ್ಕಾರವನ್ನು ಢಾಕಾಕ್ಕೆ ಬದಲಾಯಿಸಿದ ನಾಲ್ಕು ದಿನಗಳ ನಂತರ ನಗರದ ಜನಜೀವನ ಯಥಾಪೂರ್ವಸ್ಥಿತಿಗೆ ಹಿಂತಿರುಗುತ್ತಿದೆ. ಪುನರ್ ನಿರ್ಮಾಣದ ಹೊಸ ಯತ್ನಗಳಿಗೆ ಜನ ಮತ್ತು ಸರ್ಕಾರ ಗಮನ ಕೊಡುತ್ತಿವೆ.

ಕಾನೂನು ಮತ್ತು ವ್ಯವಸ್ಥೆ, ಆಡಳಿತ ವ್ಯವಸ್ಥೆಗಳ ಪುನರ್‌ಸ್ಥಾಪನೆ, ರಾಷ್ಟ್ರದ ಪುನರ್‌ನಿರ್ಮಾಣ, ಭಾರತದಿಂದ ನಿರಾಶ್ರಿತರನ್ನು ವಾಪಸ್ ಕರೆಸಿಕೊಳ್ಳುವುದು, ಅವರು ಗೌರವಯುತವಾಗಿ ಜೀವನ ನಡೆಸುವಂತೆ ವ್ಯವಸ್ಥೆ ಮಾಡುವುದು ಇವುಗಳಿಗೆ ಆದ್ಯತೆ ಕೊಡುವುದಾಗಿ ಬಾಂಗ್ಲಾದ ಮುಖ್ಯಸ್ಥ ತಾಜುದ್ದೀನ್ ಅಹ್ಮದ್ ತಿಳಿಸಿದ್ದಾರೆ.

• **ಚೀನೀ ಸತ್ಕಾರದಿಂದ ಭಾರತದ ರಾಯಭಾರಿ ಸಭಾತ್ಯಾಗ**

ಪೀಕಿಂಗ್, ಡಿ. 26– ಚೀನಾದ ಉಪ ಪ್ರಧಾನಿ ಲೀ ಸೇನ್– ಎನ್‌ರವರು ಭಾರತದ ವಿರುದ್ಧ ಉಗ್ರ ಟೀಕೆಗಳನ್ನು ಮಾಡಿದಾಗ, ಭಾರತದ ರಾಯಭಾರಿ ಪ್ರತಿನಿಧಿ ಬ್ರಿಜೇಶ್ ಮಿಶ್ರಾ ಮತ್ತು ಅವರ ಪತ್ನಿ ಇಂದು ಇಲ್ಲಿನ ಸತ್ಕಾರಕೂಟದಿಂದ ಹೊರಬಂದರು.

ಕೊರೊನಾ ಕಾಲಘಟ್ಟದ ಗಾಂಭೀರ್ಯಕ್ಕೆ ತಕ್ಕಂತೆ ಇರಬೇಕಿದೆ ಶೈಕ್ಷಣಿಕ ಯೋಜನೆ

ಕಲಿಕಾ ಚೌಕಟ್ಟು: ಪರಿವರ್ತನೆಗೆ ಸಕಾಲ

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಶಿಕ್ಷಣ ವ್ಯವಸ್ಥೆ ಇರುವುದರಿಂದ, ಶಾಲಾ ಕಾಲೇಜಿಗೆ ಮಕ್ಕಳು ಹೋಗುವುದರಿಂದ ಏನೋ ಒಂದು ಆಗುತ್ತದೆ ಎಂಬುದು ನಿಜ. ಆದರೆ ಏನು ಉದ್ದೇಶವಿದೆಯೋ ಅದೇ ಆಗುತ್ತದೆಯೇ ಎಂದರೆ ಉತ್ತರಿಸುವುದು ಕಷ್ಟ. ಉದ್ದೇಶವನ್ನೇ ಸಾಧಿಸಬೇಕಾದರೆ ಅದಕ್ಕೆ ಸೂಕ್ತವಾಗುವ ಹಾಗೆ ಯೋಜನೆ ಇರಬೇಕು ಮತ್ತು ಅದನ್ನು ಶಿಸ್ತುಬದ್ಧವಾಗಿ ಜಾರಿಗೊಳಿಸಬೇಕು. ಆಗ ನಿರೀಕ್ಷಿತ ಪರಿಣಾಮ ಸಿಗುತ್ತದೆ. ಒಟ್ಟಾರೆ, ಶಿಸ್ತು ಇಲ್ಲದೆ ಇಂತಹ ಪರಿಣಾಮ ಉಂಟಾಗುವಂತೆ ಮಾಡಬೇಕು ಎಂದರೆ ಅದು ಆಗುವುದಿಲ್ಲ.

ವರ್ತಮಾನದ ಶಿಕ್ಷಣದ ಬಹಳ ದೊಡ್ಡ ಸಮಸ್ಯೆ ಇರುವುದು, ಶಿಕ್ಷಣವನ್ನು ಹೇಗೆ ಕೊಂಡೊಯ್ಯಬೇಕೆಂಬ ಕಲ್ಪನೆಯೇ ಇಲ್ಲದೆ ಅದನ್ನು ಕೊಂಡೊಯ್ಯುತ್ತಿರುವುದು. ಉದಾಹರಣೆಗೆ, ಒಂದು ಪಠ್ಯಪುಸ್ತಕದ ಎಲ್ಲಾ ಪಾಠಗಳನ್ನು ಜೂನ್‌ನಿಂದ ಮಾರ್ಚ್‌ತನಕ ಪ್ರತೀ ತಿಂಗಳು/ಪ್ರತೀ ವಾರ/ಪ್ರತೀ ದಿನ ಹೇಗೆ ಹಂಚಿಕೆ ಮಾಡಿಕೊಂಡು ಮುಗಿಸಬೇಕು ಎನ್ನುವುದು ಒಂದು ಯೋಜನೆಯಾಗಿದೆ. ಅಷ್ಟೇ ಪಾಠಗಳನ್ನು ನವೆಂಬರ್‌ನಿಂದ ಮಾರ್ಚ್ ಒಳಗೆ ಮುಗಿಸಲು ಹೇಗೆ ಹಂಚಿಕೆ ಮಾಡಬೇಕು ಎಂದು ಮತ್ತೊಂದು ಯೋಜನೆ ಮಾಡಲಾಗುತ್ತದೆ. ಇಲ್ಲಿ ಭಾಗಿಸುವ ಕೆಲಸ ಮಾತ್ರ ನಡೆಯುವುದು. ಹತ್ತು ಪಾಠಗಳನ್ನು ಹತ್ತು ತಿಂಗಳುಗಳಲ್ಲಿ ಮುಗಿಸಬೇಕಾದರೆ ತಿಂಗಳಿಗೆ ಒಂದು ಪಾಠವನ್ನು ಮುಗಿಸಬೇಕು. ಹಾಗಾದರೆ ಹತ್ತು ಪಾಠಗಳನ್ನು ಐದು ತಿಂಗಳುಗಳಲ್ಲಿ ಮುಗಿಸಬೇಕಾದರೆ ತಿಂಗಳಿಗೆ ಎರಡು ಪಾಠಗಳನ್ನು ಮುಗಿಸಬೇಕು. ಎರಡೂವರೆ ತಿಂಗಳಿನಲ್ಲಿ ಮುಗಿಸಬೇಕಾದರೆ ತಿಂಗಳಿಗೆ ನಾಲ್ಕು ಪಾಠಗಳನ್ನು ಮಾಡಬೇಕು. ಇದು ಲೆಕ್ಕಾಚಾರ. ಆದರೆ ಬೋಧನಾ ಪದ್ಧತಿಯ ಪ್ರಕಾರ, ಒಂದು ತಿಂಗಳಿನಲ್ಲಿ ಮುಗಿಸಲೆಂದು ಸಿದ್ಧಪಡಿಸಿದ ಪಾಠವನ್ನು ಹದಿನೈದು ದಿನಗಳಲ್ಲಿ ಮುಗಿಸಲು ಆಗುತ್ತದೆಯೇ? ಆಗುತ್ತದೆ ಎಂದಾದರೆ ಅದಕ್ಕೆ ಮೂಲತಃ ಒಂದು ತಿಂಗಳ ಅವಧಿಯನ್ನು ಹಂಚಿಕೆ ಮಾಡಿದ್ದೇಕೆ? ಆಗುವುದಿಲ್ಲ ಎನ್ನುವುದಾದರೆ 'ಮುಗಿಸುವ' ಪಾಠ ಬೋಧನೆಯಲ್ಲಿ ಅಳವಡಿಸಬೇಕಾದ ಬೋಧನಾ ವಿಧಾನ ಏನು? ಈ ಬಗ್ಗೆ ಸ್ಪಷ್ಟತೆಯೇ ಇಲ್ಲದಿರುವುದು ವರ್ತಮಾನದ ಶಿಕ್ಷಣದ ಬಹುದೊಡ್ಡ ಸಮಸ್ಯೆಯಾಗಿದೆ. ಇಲ್ಲಿ ಹೇಗೆ ಕಲಿಸಬೇಕು ಎಂಬ ಪ್ರಶ್ನೆಗೆ ಶಿಕ್ಷಕರಿಗೂ ಹೇಗೆ ಕಲಿತುಕೊಳ್ಳಬೇಕು ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳಿಗೂ ಉತ್ತರವೇ ದೊರಕುವುದಿಲ್ಲ.

ವರ್ತಮಾನದ ಶಿಕ್ಷಣದ ಇನ್ನೊಂದು ಸಮಸ್ಯೆ ಕಲಿಕಾ ಸಿದ್ಧತೆಗೆ ಸಂಬಂಧಿಸಿದೆ. ಕೊರೊನಾದಿಂದ ತತ್ತರಿಸಿ ಹೆಚ್ಚು ಕಡಿಮೆ ಎರಡು ವರ್ಷಗಳ ಕಾಲ ವಿದ್ಯಾರ್ಥಿಗಳು ಅಸಹಜ ಶೈಕ್ಷಣಿಕ ಸನ್ನಿವೇಶವನ್ನು ಎದುರಿಸಿದ್ದಾರೆ. ಏನೂ ಇಲ್ಲದ್ದಕ್ಕೆ ಇಷ್ಟಾದರೂ ಆಯಿತು ಎಂಬಂತೆ ಆನ್‌ಲೈನ್ ಶಿಕ್ಷಣ ಕೆಲಸ ಮಾಡಿದೆಯೇ ಹೊರತು ಆನ್‌ಲೈನ್ ಶಿಕ್ಷಣವು ಸಹಜ ತರಗತಿಗಳಿಗೆ ಪರ್ಯಾಯವೆಂದು ಯಾರೂ ಭಾವಿಸಿಲ್ಲ. ಸುಮಾರು ಎರಡು ವರ್ಷಗಳ ಅಸಹಜ ಶೈಕ್ಷಣಿಕ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು ಕಲಿಕಾ ಸಮಸ್ಯೆಗಳನ್ನು ಮಾತ್ರ ಎದುರಿಸಿರುವುದಲ್ಲ. ಅವರ ವಯಸ್ಸು ಬೆಳೆದಿರುತ್ತದೆ. ಮಕ್ಕಳ ಬಾಲ್ಯ ಕಾಲದಲ್ಲಿ ಕೊರೊನಾ ಸಾಂಕ್ರಾಮಿಕ ಕಾಣಿಸಿಕೊಂಡಿತು, ತಾರುಣ್ಯದಲ್ಲಿ ಶಾಲೆ ಮತ್ತೆ ಸಹಜ ರೀತಿಯಲ್ಲಿ ಶುರುವಾಯಿತು ಎಂಬಂತಹ ಸನ್ನಿವೇಶ ಇರುತ್ತದೆ. ತಾರುಣ್ಯದ ಪ್ರಾರಂಭದಲ್ಲಿ ಸಹಜ ಶಿಕ್ಷಣದ ಅನುಭವವೇ ಮಕ್ಕಳಿಗೆ ಇರುವುದಿಲ್ಲ. ಕೆಲವರಲ್ಲಿ ತಾರುಣ್ಯದ ಗುಂಗು ಬಂದಿರುತ್ತದೆ. ಆ ಗುಂಗು ಬಂದಾಗ ಸಹಜ ತರಗತಿಗಳು ಇರಲಿಲ್ಲ. ಮಕ್ಕಳು ಯಾವುದೋ ಒಂದು ಮನೋಸ್ಥಿತಿಗೆ ಹೊಂದಿಕೊಂಡುಬಿಟ್ಟಿರುತ್ತಾರೆ. ಕೆಲವು ವಿದ್ಯಾರ್ಥಿಗಳು ಆದಾಯ ಗಳಿಕೆಯನ್ನು ಮಾಡಿರುತ್ತಾರೆ. ಹಣ ಸಂಪಾದನೆಯ ಶಕ್ತಿ ತನಗಿದೆ ಎನ್ನುವುದು ಕಲಿಕೆಯ ಕುರಿತ ಅವರ ಚಿಂತನೆಯನ್ನೇ ಬದಲಿಸಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಮನೆಯ ಶಿಸ್ತೂ ಶಾಲೆಯ ಶಿಸ್ತೂ ಒಂದೇ ಅಲ್ಲ. ಮನೆಯ ಶಿಸ್ತಿಗೆ ಹೊಂದಿಕೊಂಡ ಮಕ್ಕಳಿಗೆ ಶಾಲೆಯ ಶಿಸ್ತು ಹಿಂಸೆಯನ್ನು ಉಂಟುಮಾಡುತ್ತಾ ಇರುತ್ತದೆ. ಮಕ್ಕಳ ಮನಃಸ್ಥಿತಿಯಲ್ಲೇ ಬಹಳಷ್ಟು ಪಲ್ಲಟಗಳಾಗಿವೆ ಎಂಬುದು ಕೂಡ ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ.

ಇಂತಹ ಸಂದರ್ಭದಲ್ಲಿ ಮೊದಲು ಆಗಬೇಕಾದದ್ದು ಮಕ್ಕಳನ್ನು ನಿಧಾನವಾಗಿ, ಆದರೆ ಆಪ್ತವೂ ಪರಿಣಾಮಕಾರಿಯೂ ಆಗುವ ಹಾಗೆ ಶಾಲೆಯ ಕಲಿಕಾ ಶಿಸ್ತಿಗೆ ಒಳಪಡಿಸುವ ಕೆಲಸ.

ಕಲಿಕಾ ಶಿಸ್ತು ಎರಡು ಬಗೆಯದು. ಮೊದಲನೆಯದು, ಬಾಹ್ಯ ಶಿಸ್ತು. ಎರಡನೆಯದು, ಆಂತರಿಕ ಶಿಸ್ತು. ನಿಜವಾಗಿ ಬೇಕಾಗಿರುವುದು ಆಂತರಿಕ ಶಿಸ್ತು. ಆದರೆ ವಿದ್ಯಾರ್ಥಿಗಳ ವಿಚಾರಕ್ಕೆ ಬಂದಾಗ ಬಾಹ್ಯ ಶಿಸ್ತನ್ನು ಸಬಲೀಕರಣಗೊಳಿಸುವ ಮೂಲಕ ಆಂತರಿಕ ಶಿಸ್ತು ತಾನಾಗಿ ಬರುವಂತೆ ಮಾಡುವುದೂ ಒಂದು ವಿಧಾನವಾಗಿದೆ. ಉದಾಹರಣೆಗೆ, ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸಿಡುವ ಮಕ್ಕಳಲ್ಲಿ ಅಚ್ಚುಕಟ್ಟುತನದ ಆಂತರಿಕ ಶಿಸ್ತು ಇರುತ್ತದೆ ಎಂದು ಶೈಕ್ಷಣಿಕ ಮನೋವಿಜ್ಞಾನವು ಹೇಳುತ್ತದೆ. ಆಗ, ಅಚ್ಚುಕಟ್ಟುತನದ ಆಂತರಿಕ ಶಿಸ್ತು ಇಲ್ಲದ ಮಕ್ಕಳಲ್ಲಿ ಪುಸ್ತಕವನ್ನು ಅಚ್ಚುಕಟ್ಟಾಗಿ ಇಡುವ, ಬಟ್ಟೆಗಳನ್ನು ಜೋಡಿಸುವ ಚಟುವಟಿಕೆಗಳಲ್ಲೆಲ್ಲ ಅಚ್ಚುಕಟ್ಟುತನವನ್ನು ಬೆಳೆಸುತ್ತಾ ಹೋಗಿ ಕ್ರಮೇಣ ಅದೇ ಆಂತರಿಕ ಶಿಸ್ತಾಗುವಂತೆ ಮಾಡಬೇಕು. ಇದು ಏಕಾಏಕಿ ಆಗುವುದಿಲ್ಲ. ಸಮಯ ತೆಗೆದುಕೊಳ್ಳುತ್ತದೆ. ಮತ್ತೆ ಮತ್ತೆ ಹೇಳಬೇಕು. ಮತ್ತೆ ಮತ್ತೆ ಮಾಡಿಸಬೇಕು. ಹಾಗೆ ವಿದ್ಯಾರ್ಥಿಗಳ ಹಿಂದೆ ನಿಲ್ಲುತ್ತಾ ಹೋದ ಹಾಗೆ ನಿಧಾನವಾಗಿ ಕಲಿಕೆಗೆ ಬೇಕಾದ ಮಾನಸಿಕ ಶಿಸ್ತಿನ ಸಿದ್ಧತೆ ಅವರಲ್ಲಿ ಬರುತ್ತದೆ.

ಮಕ್ಕಳು ಜೀವಂತ ವ್ಯಕ್ತಿಗಳು. ಒಂದು ಕಡತಕ್ಕೆ ಷರಾ ಬರೆದು ಮುಗಿಸಿದ ಹಾಗೆ ಅವರಲ್ಲಿ ವರ್ತನಾ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ. ಸಮಯ ಬೇಕಾಗುತ್ತದೆ, ಅದನ್ನು ಮಾಡಲು ಶಿಕ್ಷಕರಿಗೆ ಸಮಯ ಕೊಡಬೇಕು.

ಈ ಅವಶ್ಯಕತೆಯನ್ನು ಗಮನಿಸದೆ ಕೊರೊನೋತ್ತರ ಶೈಕ್ಷಣಿಕ ಸಂದರ್ಭದಲ್ಲಿ ಸಹ ಅದನ್ನೂ ಮಾಡಿ, ಇದನ್ನೂ ಮಾಡಿ, ಘಟಕ ಪರೀಕ್ಷೆ, ಪ್ರಗತಿಪತ್ರ, ಸೆಮಿಸ್ಟರ್ ಪರೀಕ್ಷೆ, ಕ್ರೀಡೆ, ಕ್ವಿಝ್, ಸಾಂಸ್ಕೃತಿಕ ಚಟುವಟಿಕೆ, ರಾಷ್ಟ್ರೀಯ ಹಬ್ಬಗಳ ಆಚರಣೆ, ನಡುವೆ ತರಗತಿಗೆ ಹೋಗುವ ಬದಲು ಶಿಕ್ಷಕರು ತರಬೇತಿಗೆ ಹೋಗಿ, ಅಲ್ಲಿ ಆ ಕೆಲಸ, ಈ ಕೆಲಸ, ದಾಖಲೆ ವಹಿ, ವರದಿ ಕಳಿಸಿ ಎಂದು ಸನ್ನಿವೇಶದ ಗಾಂಭೀರ್ಯವನ್ನೇ ಗಮನಿಸದೆ ಎಂದಿನಂತೆ ವರ್ತಿಸುತ್ತಾ ಹೋದರೆ, ದೊಡ್ಡ ಪ್ರಮಾಣದಲ್ಲಿ ಒಂದು ತಲೆಮಾರಿನ ವಿದ್ಯಾರ್ಥಿಗಳ ಮೇಲೆ ಶೈಕ್ಷಣಿಕ ಹೊಡೆತ ಉಂಟಾಗುತ್ತದೆ.

ಕಲಿಕೆ ನಡೆಸಿದ ನಂತರ ಕಲಿಕೆ ಎಷ್ಟು ಪ್ರಮಾಣದಲ್ಲಿ ನಡೆದಿದೆ ಎಂದು ಮೌಲ್ಯಮಾಪನ ಮಾಡಿ ಫಲಿತಾಂಶವನ್ನು ಪಡೆಯುವುದು ಯಾವುದೇ ಶಿಕ್ಷಣ ವ್ಯವಸ್ಥೆಯ ಅಗತ್ಯವಾದ ಪ್ರಕ್ರಿಯೆಯಾಗಿದೆ. ನಮ್ಮಲ್ಲಿ ಬಹುಮಟ್ಟಿಗೆ ಸರ್ವ ಶಿಕ್ಷಣ ಅಭಿಯಾನ ಬಂದ ನಂತರ, ಕಲಿಕೆಗೆ ಪರಿಗಣನೆ ಇಲ್ಲ, ಫಲಿತಾಂಶಕ್ಕೆ ಮಾತ್ರ ಪರಿಗಣನೆ ಎಂಬ ಧೋರಣೆ ಬಂದಿದೆ. ಕೇವಲ ಪ್ರಶ್ನೋತ್ತರಗಳ ಯಾಂತ್ರಿಕ ಅಭ್ಯಾಸದಿಂದ ಬರುವ ಅಂಕಗಳನ್ನು ಶೈಕ್ಷಣಿಕ ಸಾಧನೆಯಾಗಿ ಸ್ವೀಕರಿಸುವ ವ್ಯವಸ್ಥೆ ಈಗಾಗಲೇ ಊರ್ಜಿತದಲ್ಲಿದೆ. ಆದರೆ ಸುಮಾರು ಎರಡು ವರ್ಷಗಳ ಕಲಿಕಾ ಅಡಚಣೆಯ ನಂತರ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಕ್ರಿಯೆ ಪ್ರಾರಂಭ ಆದಾಗಲೂ ಈ ಪದ್ಧತಿಯ ದಾರುಣ ಸ್ಥಿತಿಯ ಬಗ್ಗೆ ಚಿಂತಿಸದೆ ಫಲಿತಾಂಶವನ್ನು ಬೆನ್ನು ಹತ್ತುವ ಪದ್ಧತಿಯನ್ನೇ ಯಥಾಪ್ರಕಾರ ಪಾಲಿಸುತ್ತೇವೆ ಎನ್ನುವುದು ನಮ್ಮ ಚಿಂತನಾ ಶೂನ್ಯತೆಯನ್ನು ಸೂಚಿಸುತ್ತದೆ. ಈಗಾಗಲೇ ಕೆಲವು ಪೋಷಕರಿಗಾದರೂ ಬರಿಯ ಫಲಿತಾಂಶದಿಂದ ಉಪಯೋಗವಿಲ್ಲ, 625ಕ್ಕೆ 625 ಎನ್ನುವುದೇ ಮಕ್ಕಳ ಭವಿಷ್ಯವನ್ನು ರೂಪಿಸುವುದಿಲ್ಲ, ಕಲಿಕಾನುಭವಗಳೇ ಬೇಕಾಗುತ್ತವೆ ಎನ್ನುವುದು ಗೊತ್ತಾಗಿದೆ. ಆದಷ್ಟು ಬೇಗ ಇದು ಎಲ್ಲರಿಗೂ ಗೊತ್ತಾಗಬೇಕು.

ಈ ಕ್ಷಣದ ಮಟ್ಟಿಗೆ ಮಕ್ಕಳನ್ನು ಕಲಿಕೆಗೆ ಸಿದ್ಧಗೊಳಿಸುವ ಮಾನಸಿಕ ಚಟುವಟಿಕೆಗಳು ಮುಖ್ಯವಾಗಿವೆ. ಪ್ರಾರಂಭದಲ್ಲಿ ಅತೀ ಸರಳವಾದ ಕೆಲವು ಅಗತ್ಯಗಳನ್ನು ಹೇಳಿ, ಆ ಚೌಕಟ್ಟಿನ ವ್ಯಾಪ್ತಿಗೆ ವಿದ್ಯಾರ್ಥಿಗಳು ಬರಬೇಕು. ನಂತರದ ಹಂತದಲ್ಲಿ ಮಾನಸಿಕ ಚಟುವಟಿಕೆಗಳನ್ನು ಕೊಂಚ ಉನ್ನತೀಕರಿಸಬೇಕು. ಕಲಿಕಾ ಸನ್ನಿವೇಶಕ್ಕೆ ಪೂರ್ತಿಯಾಗಿ ವಿದ್ಯಾರ್ಥಿಗಳನ್ನು ಹೊಂದಿಸುವುದು ಇಂದಿನ ಅಗತ್ಯವಾಗಿದೆ.

ಚುರುಮುರಿ

ಶ್ರೀಸಾಮಾನ್ಯರ ಸಾಧನೆ

• ಸುಮಂಗಲಾ

'ಚೀನಾದಾಗೆ ಜಾಸ್ತಿ ಮಕ್ಕಳನ್ನು ಹೆರೋದಕ್ಕಂತ ಸಾಲ, ಮತ್ತ ಏನೇನೋ ಸೌಲಭ್ಯ ಕೊಡ್ತಾರಂತ. ಅಲ್ಲಿಗೆ ಹೋಗೂದೆ ಛಲೋ' ಎಂದು ಬೆಕ್ಕಣ್ಣ ಉದ್ಗರಿಸಿತು.

'ಅದ್ ನಿಮಗಲ್ಲಲೇ, ಮನುಷ್ಯಾರಿಗಿ ಕೊಡ್ತಾರ. ಅಲ್ಲಿ ಕುಟುಂಬಕ್ಕೆ ಒಂದೇ ಮಗು ಅಂತ ರೂಲ್ಸು ಮಾಡಿ, ಈಗ ಎಲ್ಲಿ ನೋಡಿದ್ರೂ ಬರೇ ಮುದುಕರೇ ಕಾಣ್ತಾರಂತ. ಅದಕ್ಕ, ಹಿಂಗಾದ್ರ ಹದಿನೈದು ಟ್ರಿಲಿಯನ್ ಡಾಲರ್ ಜಿಡಿಪಿ ಹೆಂಗ ಮುಟ್ಟೂದು ಅಂತ ಹೆದರಿ, ಜಾಸ್ತಿ ಮಕ್ಕಳು ಹೆತ್ತವರಿಗಿ ಎಲ್ಲಾ ಸೌಲಭ್ಯ ಕೊಡತೀವಂತ ಸರ್ಕಾರ ಹೇಳ್ಯೈತಿ' ಎಂದೆ.

'ನೀವ್ ಮನುಷ್ಯಾರು ಬಿಡವ್ವಾ... ಇಡೀ ಭೂಮಿ ನಿಮ್ಮದಷ್ಟೇ ಅಂದಕಂಡು ಏನೇನೋ ರೂಲ್ಸು ಮಾಡತೀರಿ. ಸುಡುಗಾಡು ಅಭಿವೃದ್ಧಿ ಹೆಸರಿನಾಗೆ ಎಲ್ಲಾ ಹಾಳು ಮಾಡತೀರಿ. ಭೂಮಿ ಮ್ಯಾಗ ನಿಮ್ಮದೆಷ್ಟ್ ಹಕ್ಕು ಐತೋ ನಾವು ಪ್ರಾಣಿಗೋಳು, ಗಿಡಮರಗಳಿದ್ದೂ ಅಷ್ಟೇ ಹಕ್ಕು ಐತಿ ಅನ್ನೂದನ್ನೇ ಮರಿತೀರಿ' ಎಂದು ನನ್ನ ಮುಖಕ್ಕೆ ಕ್ಯಾಕರಿಸಿ ಉಗುಳಿತು. ನಾ ತೆಪ್ಪಗಿದ್ದೆ.

'ಅದ್ಸರಿ, 2021 ಮುಗಿಲಾಕ ಬಂತು, ಭಾರತೀಯರು ಏನು ಸಾಧನೆ ಮಾಡೀರಿ?' ಎಂದು ಕಟಕಿಯಾಡಿತು.

'ಯಾಕಲೇ ಹಂಗಂತಿ... ಈ ವರ್ಷ ಒಲಿಂಪಿಕ್ಸಿನಾಗೆ, ಪ್ಯಾರಾಒಲಿಂಪಿಕ್ಸಿನಾಗೆ ನಮ್ಮ ಆಟಗಾರ್ರು ಎಷ್ಟಕೊಂದು ಚಿನ್ನ, ಬೆಳ್ಳಿ, ಕಂಚಿನ ಪದಕ ತಗಂಡಾರೆ. ಇತ್ತ ನಮ್ಮ ಕರುನಾಡಿನಾಗ ಯಂಗ್ ಆಂಡ್ ಎನರ್ಜೆಟಿಕ್ ಬೊಮ್ಮಾಯಿ ಅಣ್ಣಾರು ಸಿಎಂಪಿಕ್ಸಿನಾಗೆ ಕುರ್ಚಿ ಗೆದ್ದಾರೆ. ಇವೆಲ್ಲಾ ಸಾಧನೆ ಅಲ್ಲೇನ್' ನಾನು ಹೆಮ್ಮೆಯಿಂದ ಉಲಿದೆ.

'ನೀವು ಶ್ರೀಸಾಮಾನ್ಯರು ಏನ್ ಸಾಧನೆ ಮಾಡೀರಿ?'.

'ತೆಲಿ ಮ್ಯಾಲೆ ಕೊರೊನಾ ಕರಿನೆರಳು, ಬೆನ್ನಿನ ಮೇಲೆ ಜಿಎಸ್‌ಟಿ ಬರೆ, ಪೆಟ್ರೋಲು, ಡೀಸೆಲು, ದಿನಸಿ, ತರಕಾರಿ ಎಲ್ಲಾ ಅಗತ್ಯ ವಸ್ತುಗಳ ಬೆಲೆಯೇರಿಕೆ ಬಾಸುಂಡೆ ಬಿದ್ದರೂ ಶ್ರೀಸಾಮಾನ್ಯರು ಇನ್ನಾ ಬದುಕುಳಿದೀವಲ್ಲ... ಇದೇನ್ ಸಾಧನೆ ಅಲ್ಲೇನ್'.

'ಬರೆ ಮೇಲೆ ಬರೆ ಬಿದ್ದರೂ ಅಚ್ಛೇ ದಿನ್ ಅಂತ ಗುಣಗಾನ ಮಾಡೂದೇ ಶ್ರೀಸಾಮಾನ್ಯರ ಅಸಾಮಾನ್ಯ ಸಾಧನೆ' ಎನ್ನುತ್ತ ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಸಂಗತ

ಹಿಮಾಚಲದಲ್ಲಿ ಇಂಗಿನ ಗುಂಗು

ಹಿಮಾಲಯದ ತಪ್ಪಲಿನಲ್ಲಿ ಪ್ರಾಯೋಗಿಕವಾಗಿ ಬೆಳೆಯಲಾಗುತ್ತಿರುವ ಇಂಗಿನ ಬೆಳೆ ಯಶಸ್ವಿಯಾದರೆ, ದೇಶದ ರೈತರಲ್ಲಿ ಹೊಸ ಭರವಸೆ ಮೂಡಲಿದೆ

• ಗುರುರಾಜ್ ಎಸ್. ದಾವಣಗೆರೆ

ಅವರ ಹೆಸರು ಮೋತಿಲಾಲ್. ಹಿಮಾಚಲ ಪ್ರದೇಶದ ಹಿಮ ತುಂಬಿದ ಗಿರಿಶ್ರೇಣಿಗಳ ನಡುವಿನ ಲಾಹುಲ್ ಕಣಿವೆಯ ಒಂದು ಹೆಕ್ಟೇರ್ ಜಮೀನಿನಲ್ಲಿ ಕೃಷಿ ಮಾಡುತ್ತಿರುವ ಅವರು ಈಗ ಅತ್ಯಂತ ಖುಷಿಯಲ್ಲಿದ್ದಾರೆ. ಅದಕ್ಕೆ ಕಾರಣ, ಭಾರತದ ಯಾವ ರೈತನೂ ಮಾಡಿರದ ದಾಖಲೆ ಮತ್ತು ಬೆಳೆಯಿಂದ ಸಿಗಲಿರುವ ಎರಡು ಲಕ್ಷ ರೂಪಾಯಿ ಹೆಚ್ಚುವರಿ ಆದಾಯ! ಆಶ್ಚರ್ಯವಾಗುತ್ತಿದೆಯೇ? ಎಲ್ಲವೂ ಅಂದುಕೊಂಡಂತೆ ನಡೆದರೆ ಇದು ಅತಿದೊಡ್ಡ ಸಾಧನೆ ಎನಿಸಲಿದೆ.

ಅಂದಹಾಗೆ ಮೋತಿಲಾಲ್ ಬೆಳೆದಿರುವುದು ಭಾರತೀಯ ಅಡುಗೆ ಮನೆಗಳಲ್ಲಿ ಸಾಮಾನ್ಯವಾಗಿ ಇದ್ದೇ ಇರುವ, ಆಹಾರ ಪದಾರ್ಥಗಳಿಗೆ ಹಾಕುವ ಒಗ್ಗರಣೆಯ ಘಮ ಹೆಚ್ಚಿಸುವ 'ಇಂಗಿ'ನ ಗಿಡಗಳನ್ನು. ನೆಟ್ಟ 60ರಲ್ಲಿ 30ಕ್ಕೂ ಹೆಚ್ಚು ಸಸಿಗಳು ಯಾವ ಕೀಟಬಾಧೆಯೂ ಇಲ್ಲದೆ ಸಮೃದ್ಧವಾಗಿ ಬೆಳೆದುನಿಂತಿವೆ. ಫೆರುಲಾ ಅಸಾಫೆಟಿಡ (ಫೆಟಿಡ ಎಂದರೆ ದುರ್ವಾಸನೆ ಬೀರುವ ವಸ್ತು) ಎಂಬ ತಳಿಯ ಈ ಗಿಡಗಳನ್ನು 'ಸಾವಿಲ್ಲದ ಶಾಶ್ವತ ಸಸ್ಯ'ಗಳೆಂದು ಕರೆಯುತ್ತಾರೆ. ಪಾಲಂಪುರದ ಇನ್‌ಸ್ಟಿಟ್ಯೂಟ್ ಆಫ್ ಹಿಮಾಲಯನ್ ಬಯೊರಿಸೋರ್ಸ್ ಟೆಕ್ನಾಲಜಿಯವರು (ಐಎಚ್‌ಬಿಟಿ) ಕಳೆದ ಅಕ್ಟೋಬರ್‌ನಲ್ಲಿ ಮೋತಿಲಾಲ್‌ಗೆ 60 ಇಂಗಿನ ಸಸಿಗಳನ್ನು ನೀಡಿದ್ದರು.

ಅದುವರೆಗೂ ತರಕಾರಿ ಬೆಳೆಯುತ್ತಿದ್ದ ಮೋತಿಲಾಲ್ ಸಸಿಗಳನ್ನು ನೆಟ್ಟು ಆರೈಕೆ ಶುರುಮಾಡಿದರು. ಆಗಾಗ ಜಮೀನಿಗೆ ಭೇಟಿ ನೀಡಿ ಸೂಕ್ತ ಮಾರ್ಗದರ್ಶನ ನೀಡಿದ ಐಎಚ್‌ಬಿಟಿಯ ಕೃಷಿ ವಿಜ್ಞಾನಿಗಳು, 'ಬೆಳೆ ಕೈಗೆ ಬಂದರೆ ಕೆ.ಜಿಗೆ ₹ 20 ಸಾವಿರದಿಂದ 30 ಸಾವಿರ ದೊರಕುತ್ತದೆ ಮತ್ತು ಈ ಭಾಗದಲ್ಲಿ ಇದನ್ನು ಬೆಳೆದ ಪ್ರಪ್ರಥಮ ರೈತ ನೀನಾಗುತ್ತೀಯೆ' ಎಂದು ಹುರಿದುಂಬಿಸಿದ್ದರು.

ಇಂಗಿಗೆ ಭಾರತ ಮತ್ತು ಉಪಖಂಡಗಳಲ್ಲಿ ಭಾರೀ ಬೇಡಿಕೆಯಿದೆ. ತಂಪಾದ ಹವೆ ಮತ್ತು ಒಣಪ್ರದೇಶಗಳಲ್ಲಿ ಸಮೃದ್ಧವಾಗಿ ಬೆಳೆಯುವ ಇಂಗು ಮಸಾಲೆಯಾಗಿ ಮತ್ತು ನಾಟಿ ಔಷಧಿಯಾಗಿ ಬಳಕೆಯಲ್ಲಿದೆ. ಮಧ್ಯ ಮತ್ತು ಪೂರ್ವ ಏಷ್ಯಾದ ಶೀತ ಹಾಗೂ ಒಣಹವೆಯ ಪ್ರದೇಶಗಳ ಕಾಡುಗಳಲ್ಲಿ ಇಂಗಿನ ಗಿಡ ಹುಲುಸಾಗಿ ಬೆಳೆಯುತ್ತದೆ. ಕಳೆದ ಸಾಲಿನಲ್ಲಿ ನಾವು ಸಾವಿರ ಕೋಟಿ ರೂಪಾಯಿ ಮೌಲ್ಯದ 1,540 ಟನ್ ಕಚ್ಚಾ ಇಂಗನ್ನು ಇರಾನ್, ಅಫ್ಘಾನಿಸ್ತಾನ, ಉಜ್ಬೇಕಿಸ್ತಾನದಿಂದ ಆಮದು ಮಾಡಿಕೊಂಡಿದ್ದೇವೆ.

ಅಚ್ಚರಿಯ ಸಂಗತಿ ಏನು ಗೊತ್ತೇ? ನಮ್ಮ ದೇಶದಲ್ಲಿ ಇಂಗನ್ನು ಬೆಳೆಯಲು ಪ್ರಾರಂಭಿಸಿದ್ದು 2018ರಲ್ಲಿ! ದೆಹಲಿಯ ನ್ಯಾಷನಲ್ ಬ್ಯೂರೊ ಆಫ್ ಪ್ಲಾಂಟ್ ಜೆನೆಟಿಕ್ ರಿಸೋರ್ಸಸ್‌ನವರು (ಎನ್‌ಬಿಪಿಜಿಆರ್) ಇರಾನ್‌ನಿಂದ ಬೀಜಗಳನ್ನು ತರಿಸಿ, ಐಎಚ್‌ಬಿಟಿಯ ಅಂಗಸಂಸ್ಥೆಯಾದ ಸೆಂಟರ್ ಫಾರ್ ಹೈ ಆಲ್ಟಿಟ್ಯೂಡ್ ಬಯಾಲಜಿಗೆ (ಸಿಇಎಚ್‌ಎಬಿ) ನೀಡಿ, 'ನಮ್ಮ ನೆಲದಲ್ಲಿ ಬೆಳೆಯಲು ಸಾಧ್ಯವೇ ಪರೀಕ್ಷಿಸಿ ಹೇಳಿ' ಎಂದರು.

ಐಎಚ್‌ಬಿಟಿ ಸಂಶೋಧಕರು ಬೆಳೆಗೆ ಬೇಕಾದ ವಾತಾವರಣವನ್ನು ನರ್ಸರಿಗಳಲ್ಲಿ ಕೃತಕವಾಗಿ ನಿರ್ಮಿಸಿ, ಹಾರ್ಮೋನ್ ಚಿಕಿತ್ಸೆಯನ್ನೂ ನೀಡಿ ಹಲವು ಸಲ ಪ್ರಯತ್ನಿಸಿದರು. ನಿರ್ದೇಶಕ ಕುಮಾರ್ ಅವರ ಪ್ರಕಾರ, ಬೀಜ ಮೊಳಕೆಯ ಪ್ರಮಾಣ ಶೇ 60-70 ಮಾತ್ರ. 'ಸಹಜ ವಾತಾವರಣದಲ್ಲಿ ಪ್ರಯತ್ನಿಸಿದರೆ ಹೇಗೆ?' ಎಂದು ಸಿಇಎಚ್‌ಎಬಿ ಸಹಯೋಗದಲ್ಲಿ ಲಾಹುಲ್, ರಿಬ್ಲಿಂಗ್ ಮತ್ತು ಸ್ಪಿತಿ ಕಣಿವೆಯ ಹತ್ತಾರು ರೈತರಿಗೆ ಇರಾನ್‌ನಿಂದ ತರಿಸಿದ ಸಸಿಗಳನ್ನೇ ನೀಡಿ, ಒಟ್ಟು ಎಂಟೂವರೆ ಎಕರೆಯಲ್ಲಿ ನೆಡಿಸಲಾಯಿತು. ಮೋತಿಲಾಲ್ ನೆಟ್ಟ ಸಸಿಗಳು ಈ ಮಾರ್ಚ್‌ನಲ್ಲಿ ಎಲೆ ಬಿಡಲಾರಂಭಿಸಿದವು. ಇನ್ನೊಬ್ಬ ರೈತ ಸಂತೋಷ್ ನೆಟ್ಟಿದ್ದ 30 ಸಸಿಗಳಲ್ಲಿ 18 ಉಳಿದಿವೆ. ಇವು ಇನ್ನೂ ನಾಲ್ಕು ವರ್ಷಕಾಲ ಬದುಕುಳಿದರೆ ಫಲ ಗ್ಯಾರಂಟಿ ಎನ್ನುವ ಅಧಿಕಾರಿ ಅಶೋಕ್, 'ನಮ್ಮ ಈ ಪ್ರಾಯೋಗಿಕ ಯೋಜನೆ ಯಶಸ್ಸು ಕಂಡರೆ, ಇಂಗಿನ ಬೆಳೆಗೆ ಹೆಚ್ಚು ಒತ್ತು ನೀಡಲಾಗುತ್ತದೆ' ಎಂದಿದ್ದಾರೆ.

ಹದವಾದ ಬಿಸಿಲು, 250- 300 ಮಿ.ಮೀ ಮಳೆ ಮತ್ತು 35 ಡಿಗ್ರಿ ಸೆಂಟಿಗ್ರೇಡ್‌ಗಿಂತ ಕಡಿಮೆ ಉಷ್ಣಾಂಶದಲ್ಲಿ ಮಾತ್ರ ಬದುಕುವ ಇಂಗಿನ ಗಿಡ ಫಲ ಕೊಡಲು 5 ವರ್ಷ ಬೇಕು.

ಗಜ್ಜರಿಯಂಥ ಬೇರು ಮತ್ತು ಸೀಳಿದ ಎಲೆಗಳಿರುವ ಗಿಡವು ಐದು ವರ್ಷಗಳ ಬೆಳವಣಿಗೆಯ ನಂತರ ಹೂ ಬಿಡುತ್ತದೆ. ಆಗ ಕಾಂಡವನ್ನು ನೆಲದವರೆಗೆ ಕತ್ತರಿಸಿ ಬೇರನ್ನು ಬಿಸಿಲಿಗೆ ಒಣಗಿಸಿದಾಗ, ಹಾಲಿನಂಥ ಪದಾರ್ಥವನ್ನು ಬೇರು ಸ್ರವಿಸುತ್ತದೆ. ಕ್ರಮೇಣ ಇದು ಮೇಣದ ರೂಪ ಪಡೆದು ಕಂದು ಬಣ್ಣಕ್ಕೆ ತಿರುಗುತ್ತದೆ. ಇದನ್ನು ತರಿದು ಸಂಗ್ರಹಿಸಿ ಬೇರನ್ನು ಮತ್ತೆ ನಾಲ್ಕೈದು ದಿನ ಬಿಸಿಲಿಗೆ ಹರವುತ್ತಾರೆ. ಮತ್ತಷ್ಟು ಮೇಣ ಉತ್ಪತ್ತಿಯಾಗುತ್ತದೆ. ಇದೇ ಕಟುವಾದ ವಾಸನೆಯಿರುವ ಇಂಗು. ಇದಕ್ಕೆ ಸ್ವಲ್ಪ ಅಕ್ಕಿ ಅಥವಾ ಗೋಧಿ ಹಿಟ್ಟನ್ನು ಸವರಿ ಪ್ಯಾಕ್ ಮಾಡಲಾಗುತ್ತದೆ. ಒಂದು ಗಿಡವು ಸುಮಾರು 20ರಿಂದ 25 ಗ್ರಾಂ ಇಂಗು ನೀಡುತ್ತದೆ. ಒಂದು ಹೆಕ್ಟೇರ್‌ನಲ್ಲಿ ಬೆಳೆಯುವ ಇಂಗು ಪ್ರತೀ ಐದು ವರ್ಷಕ್ಕೆ ₹ 10 ಲಕ್ಷ ಆದಾಯ ತರಬಲ್ಲದು!

ವಾಚಕರ ವಾಣಿ

ಬಂದ್ ಕರೆ: ಅಪ್ರಬುದ್ಧ ನಡೆ

ಮಹಾರಾಷ್ಟ್ರ ಏಕೀಕರಣ ಸಮಿತಿಯು (ಎಂಇಎಸ್) ಕನ್ನಡಿಗರನ್ನು ಪ್ರಚೋದಿಸಿ ನೆಮ್ಮದಿಯನ್ನು ಕದಡುವ, ಕರ್ನಾಟಕದ ಹಿತಕ್ಕೆ ಮಾರಕವಾಗುವ ಕೆಲಸವನ್ನು ಕರ್ನಾಟಕ ಏಕೀಕರಣವಾದಂದಿನಿಂದ ನಿರಂತರವಾಗಿ ಮಾಡಿಕೊಂಡು ಬಂದಿದೆ. ಇತ್ತೀಚೆಗೆ ಎಂಇಎಸ್ ಕಾರ್ಯಕರ್ತರು, ಕನ್ನಡಿಗರ ಸ್ವಾಭಿಮಾನದ ಸಂಕೇತವಾಗಿರುವ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ವಿರೂಪಗೊಳಿಸಿದ್ದು, ಕನ್ನಡ ಬಾವುಟವನ್ನು ಸುಟ್ಟಿರುವುದು ಅಕ್ಷಮ್ಯ. ಎಂಇಎಸ್‌ನ ಇಂತಹ ಚಟುವಟಿಕೆಗೆ ಕಡಿವಾಣ ಹಾಕಲೇಬೇಕು. ಆದರೆ, ಅದರ ತುರ್ತು ನಿಷೇಧಕ್ಕೆ ಆಗ್ರಹಿಸಿ 'ಕರ್ನಾಟಕ ಬಂದ್'ಗೆ ಕರೆ ನೀಡಿರುವುದು ಸರಿಯಲ್ಲ. ಬಂದ್ ಅನ್ನುವುದು ಜನಾಗ್ರಹದ ಕೊನೆಯ ಅಸ್ತ್ರ. ಎಂಇಎಸ್ ರಾಜಕೀಯ ಪಕ್ಷವಾಗಿ ನೋಂದಣಿಯಾಗಿದೆ. ರಾಜ್ಯ ಸರ್ಕಾರ ನೇರವಾಗಿ ಅದನ್ನು ನಿಷೇಧಿಸಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು, ಕೇಂದ್ರವು ಚುನಾವಣಾ ಆಯೋಗಕ್ಕೆ ಇದನ್ನು ರವಾನಿಸಿ ಸೂಕ್ತ ಕ್ರಮಕ್ಕೆ ಸೂಚಿಸಬೇಕು. ಆಗಲೂ ನಿಷೇಧಿಸುವ ಸಾಧ್ಯತೆ ಕಡಿಮೆಯೇ.

ಕಳೆದೆರಡು ವರ್ಷಗಳಿಂದ ಕೊರೊನಾ ಸಂಕಟದಿಂದ ನರಳಿರುವ ಜನ ಸ್ವಲ್ಪಮಟ್ಟಿಗೆ ಸುಧಾರಿಸಿಕೊಳ್ಳುತ್ತಿರುವ ಈ ಕಾಲದಲ್ಲಿ ಬಂದ್ ಮಾಡುವುದು ಎಷ್ಟು ಸರಿ? ಬಂದ್‌ನಿಂದ ಕನ್ನಡಿಗರೇ ತೊಂದರೆಗೊಳಗಾಗುವರು ವಿನಾ ಮರಾಠಿಗರಲ್ಲ. ಬಂದ್ ವಿಫಲವಾದರೆ ಕನ್ನಡ ಹೋರಾಟಗಾರರಿಗೆ ಮುಜುಗರವಾಗುತ್ತದೆ, ಕನ್ನಡ ಚಳವಳಿಯ ಗಾಂಭೀರ್ಯಕ್ಕೂ ಚ್ಯುತಿ ಬರುತ್ತದೆ. ಬಂದ್ ಕರೆಯನ್ನು ಹಿಂದಕ್ಕೆ ಪಡೆದು, ತಪ್ಪಿತಸ್ಥರನ್ನು ಸಮಾಜವಿರೋಧಿ ಅಥವಾ ಗೂಂಡಾ ಕಾಯ್ದೆಯಡಿ ಬಂಧಿಸಿ ಕಠಿಣ ಶಿಕ್ಷೆ ವಿಧಿಸುವಂತೆ ಸರ್ಕಾರವನ್ನು ಒತ್ತಾಯಿಸುವುದು ಪ್ರಬುದ್ಧ ನಡೆಯಾಗುತ್ತದೆ.

ರಾ.ನಂ.ಚಂದ್ರಶೇಖರ, ಬೆಂಗಳೂರು

ಸಮರ್ಥನೆಯ ಹೇಳಿಕೆ ದುರದೃಷ್ಟಕರ

ಮೈಸೂರು ರಂಗಾಯಣದ ಈಗಿನ ನಿರ್ದೇಶಕರನ್ನು ವಜಾಗೊಳಿಸಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಪ್ರತಿಭಟನೆಯನ್ನು ಪಟ್ಟಭದ್ರ ಹಿತಾಸಕ್ತಿಗಳ ಕಾರ್ಯವೆಂದು ಖಂಡಿಸಿ, ಈಗಿನ ನಿರ್ದೇಶಕರನ್ನು ಬೆಂಲಿಸುವುದಾಗಿ ಕೊಡವ ಸಮಾಜದ ಹೆಸರಿನಲ್ಲಿ ಪ್ರಕಟವಾಗಿರುವ ಹೇಳಿಕೆಯು (ಪ್ರ.ವಾ., ಡಿ. 26) ದುರದೃಷ್ಟಕರ. ಸ್ವಾಯತ್ತತೆಯನ್ನು ಹೊಂದಿರುವ ರಂಗಾಯಣವನ್ನು ಸದ್ಯದ ನಿರ್ದೇಶಕರು ಸಂಘ ಪರಿವಾರದ ಸಂಘಟನೆಯನ್ನಾಗಿ ಪರಿವರ್ತಿಸುತ್ತಿರುವುದರ ವಿರುದ್ಧ ಪ್ರತಿಭಟನೆ ನಡೆಯುತ್ತಿದೆಯೇ ಹೊರತು, ಅವರು ಕೊಡವರು ಎಂಬ ಕಾರಣಕ್ಕಾಗಿ ಅಲ್ಲ. ಪಂಜೆ ಮಂಗೇಶರಾಯರ 'ಹುತ್ತರಿಯ ಹಾಡು', ರಾಜರತ್ನಂ ಅವರ 'ಮಡಕೇರೀಲಿ ಮಂಜು' ಓದಿದವರಿಗೆ, ಕೊಡಗಿನ ಸುಪುತ್ರ- ಸುಪುತ್ರಿಯರಾದ ಐ.ಮಾ.ಮುತ್ತಣ್ಣ, ಜನರಲ್ ಕಾರಿಯಪ್ಪ, ಕೊಡಗಿನ ಗೌರಮ್ಮ ಮೊದಲಾದ ಸುಸಂಸ್ಕೃತ ಮನಸ್ಸುಗಳನ್ನು ಬಲ್ಲವರಿಗೆ ಈಗಿನ ನಿರ್ದೇಶಕರ ಮಾತು, ನಡವಳಿಕೆ, ಧೋರಣೆಗಳು ವಿಷಾದ ಹುಟ್ಟಿಸುತ್ತವೆ. ಇಂಥವರನ್ನು ತಿಳಿದೋ ತಿಳಿಯದೆಯೋ ಕೊಡವರ ಹೆಸರಿನಲ್ಲಿ ಬೆಂಬಲಿಸುವವರನ್ನು, 'ಕಾವೇರಮ್ಮೆ ದೇವಿ ತಾಯೆ ಕಾಪಾಡೆಂಗಳಾ..' ಎಂದು ಪ್ರಾರ್ಥಿಸಬೇಕೆನ್ನಿಸುತ್ತದೆ.

ವಿ.ಎನ್.ಲಕ್ಷ್ಮೀನಾರಾಯಣ, ಮೈಸೂರು

ಆಭಾಸವಾಗದಂತೆ ಪದ ಉಚ್ಚಾರಣೆ ಇರಲಿ

'ಕನ್ನಡದ ಕೆಲವು ಪದರೂಪಗಳು ಬರವಣಿಗೆಯಲ್ಲಿ ತಪ್ಪಾಗುತ್ತವೆಯೇ ವಿನಾ ಮಾತುಕತೆಯಲ್ಲಿ ಅವು ಉಚ್ಚಾರಣೆಗೊಳ್ಳುವುದರಿಂದ ಅರ್ಥದಲ್ಲಿ ಯಾವುದೇ ಗೊಂದಲ ಉಂಟಾಗದು' ಎಂಬ ಸಿ.ಪಿ.ನಾಗರಾಜ ಅವರ ಹೇಳಿಕೆ (ವಾ.ವಾ., ಡಿ. 25) ಅಸಮಂಜಸ. ಕನ್ನಡದ ಒಂದೊಂದು ಪದಕ್ಕೂ ಅದರದೇ ಆದ ಧ್ವನಿ, ಉಚ್ಚಾರ, ಅರ್ಥ ಇದೆ. ಅವನ್ನು ಹಾಗೇ ಉಚ್ಚರಿಸಿದರೇನೆ ಅದಕ್ಕೊಂದು ಅರ್ಥ. ಅದನ್ನುಬಿಟ್ಟು ಹೀಗೂ ಅಂದರೆ ತಪ್ಪಿಲ್ಲ ಎನ್ನುವುದಾದರೆ ಅದು ಮಕ್ಕಳ 'ತೊದಲ್ನುಡಿ'ಗೆ ಸಮವಾಗುತ್ತದೆ.

ಉದಾಹರಣೆಗೆ, 'ಅಣ್ಣ' ಪದವನ್ನು 'ಅನ್ನ', ಆದರ– ಹಾದರ, ಕಳ್ಳು– ಕಲ್ಲು, ಬೆಣ್ಣೆ– ಬೆನ್ನೆ, ಮಣೆ– ಮನೆ, ಅಟ್ಟು– ಹಟ್ಟು, ಹಕ್ಕಿ– ಅಕ್ಕಿ ಎಂದು ಕರೆಯುವುದರಲ್ಲಿ ತಪ್ಪಿಲ್ಲವೇ? ಈ ಎಲ್ಲ ಪದಗಳಿಗೂ ಇರುವ ಅರ್ಥಗಳೂ ಬೇರೆ ಬೇರೆಯಾಗಿವೆ. ಇವನ್ನು ಬಳಸಿದಾಗ ಆಭಾಸ, ಅಪಾರ್ಥವುಂಟಾಗದೇ ಇರದು. ಪ್ರಾಂತ್ಯಭೇದದಿಂದಾಗಿ ಇಂಥ ವ್ಯತ್ಯಾಸಗಳು ಸಹಜವಾಗಿರುತ್ತವೆ. ಆದರೆ, ಅರ್ಥಕ್ಕೆ ಧಕ್ಕೆಯಾಗದಂತೆ, ಆಭಾಸವಾಗದಂತೆ ಪದವನ್ನು ಸರಿಯಾಗಿ ಉಚ್ಚರಿಸುವ ರೂಢಿ ಮಾಡಿಕೊಂಡರೆ ಕನ್ನಡದ ಗರಿಮೆಯೂ ಹೆಚ್ಚುತ್ತದೆ.

ಡಾ. ರಾಜಶೇಖರ ಸಿ.ಡಿ., ಈಚಲಯಲ್ಲಾಪುರ, ಹಾವೇರಿ

ಕಾಂಗ್ರೆಸ್‌ಗೆ ಕಾಯಕಲ್ಪ ಅನಿವಾರ್ಯ

'ಕಾಂಗ್ರೆಸ್ ಮತಪೆಟ್ಟಿಗೆಗೆ ಲಗ್ಗೆ' ಎಂಬ ಎ.ಸೂರ್ಯಪ್ರಕಾಶ್ ಅವರ ಲೇಖನದಲ್ಲಿ (ಪ್ರ.ವಾ., ಡಿ. 25) ಒಂದಂತೂ ಸ್ಪಷ್ಟವಾಗಿದೆ: ಬಿಜೆಪಿಗೆ ಪರ್ಯಾಯವಾದ ಪಕ್ಷವೊಂದನ್ನು ಕಟ್ಟುವುದು ಎಂದಿಗಿಂತ ಈಗ ಹೆಚ್ಚು ಪ್ರಸ್ತುತ ಮತ್ತು ಅನಿವಾರ್ಯ. ಪ್ರಜಾಸತ್ತಾತ್ಮಕ ರಾಜಕೀಯದಲ್ಲಿ ಎದುರು ಪಕ್ಷವೇ ಇಲ್ಲದ ಅಥವಾ ದುರ್ಬಲ ಎದುರಾಳಿಗಳಿರುವ ಪರಿಸ್ಥಿತಿ ಯಾವತ್ತೂ ಅತಂತ್ರವೇ. ದೇಶವು 2024ರ ಹೊತ್ತಿಗೆ ಒಂದು ದಶಕ ಕಾಲದ ಬಿಜೆಪಿಯ ಆಳ್ವಿಕೆಯನ್ನು ಕಂಡಿರುತ್ತದೆ.

ಸದ್ಯದ ಸ್ಥಿತಿಯಲ್ಲಿ ಕೇಂದ್ರದಲ್ಲಿ ಬಿಜೆಪಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ಪ್ರಬಲ ಪರ್ಯಾಯ ಪಕ್ಷ ಇಲ್ಲ. ಈಗಿರುವ ವಿರೋಧ ಪಕ್ಷಗಳ ಸ್ಥಿತಿ ದುರ್ಬಲವೇ. ಪ್ರಾದೇಶಿಕ ಪಕ್ಷಗಳಲ್ಲಿ ಕೂಡ ಒಮ್ಮತ ಸಾಧ್ಯವಿಲ್ಲ. ಹೀಗಾಗಿ ಈ ತೆರನ ಹಲವು ಪಕ್ಷಗಳ ಒಕ್ಕೂಟವೇ ಪ್ರತಿಪಕ್ಷವೆನ್ನುವ ಸ್ಥಿತಿ ಇದ್ದಾಗ ಆಡಳಿತದಲ್ಲಿರುವ ಪ್ರಬಲ ಪಕ್ಷವು ನಿರಂಕುಶಾಧಿಕಾರಕ್ಕೆ ಸರಿಯುವುದು ನಿಶ್ಚಿತ. ಇದ್ದುದರಲ್ಲೇ ಅಖಿಲ ಭಾರತ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಮಾತ್ರವೇ ಹೆಚ್ಚು ಪರಿಚಿತವಾಗಿದೆ. ಆದರೆ, ಲೇಖಕರು ಹೇಳುವಂತೆ ಕಾಂಗ್ರೆಸ್ಸಿನದು 'ವಯಸ್ಸಾದ ಕುಂಟ ಸಿಂಹ'ದ ಸ್ಥಿತಿ. ರಾಷ್ಟ್ರಮಟ್ಟದಲ್ಲಿ, ಪ್ರಾದೇಶಿಕ ಮಟ್ಟದಲ್ಲೂ ಕಾಂಗ್ರೆಸ್‌ಗೆ ಜರೂರಾಗಿ ಕಾಯಕಲ್ಪದ ಅಗತ್ಯವಿದೆ. ಹೊಸ ಮುಖಗಳು ಮುಂದೆ ಬರಬೇಕಾಗಿದೆ. ತಳಮಟ್ಟದಲ್ಲಿ ಪಕ್ಷದ ಕೆಲಸ ಮಾಡಿರುವ ನಿಸ್ಪೃಹರೂ ಕಳಂಕರಹಿತರೂ ಕಾಂಗ್ರೆಸ್ಸಿಗೆ ಕಾಯಕಲ್ಪ ಕಲ್ಪಿಸಬೇಕು. ಇಂದಿನ ಪಕ್ಷ ರಾಜಕೀಯ ವಾತಾವರಣದಲ್ಲಿ, ಕಾಯಕಲ್ಪಗೊಂಡ ಕಾಂಗ್ರೆಸ್ ಮಾತ್ರವೇ ಸದೃಢ ಪರ್ಯಾಯ ಪಕ್ಷವಾಗಿ ನಿಲ್ಲಲು ಸಾಧ್ಯ. ಮಿಕ್ಕ ಯಾವೊಂದು ಪಕ್ಷಕ್ಕೂ ರಾಷ್ಟ್ರಮಟ್ಟದ ವರ್ಚಸ್ಸಿಲ್ಲ. ಹಾಗಾಗಿ ಅವು ಪ್ರಾದೇಶಿಕ ಮಟ್ಟದಲ್ಲಷ್ಟೇ ಬಿಜೆಪಿಗೆ ಪ್ರಬಲ ಪೈಪೋಟಿ ನೀಡಲು ಸಾಧ್ಯ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲಸಿಕೆಯ ರಕ್ಷಣೆ ಮಕ್ಕಳಿಗೂ ವಿಸ್ತರಣೆ

ಅಮೆರಿಕದ ಬಾಲಕನೊಬ್ಬ ಫೈಝರ್ ಲಸಿಕೆ ಹಾಕಿಸಿಕೊಂಡ ಕ್ಷಣ —ಎಎಫ್‌ಪಿ ಚಿತ್ರ

ದೇಶದಲ್ಲಿ ಒಟ್ಟು 10 ಕೋಟಿಯಷ್ಟು ಇರುವ 15-18 ವರ್ಷ ವಯಸ್ಸಿನ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರವು ಘೋಷಿಸಿದೆ. 2022ರ ಜನವರಿ 3ರಿಂದ ಈ ಕಾರ್ಯಕ್ರಮ ಆರಂಭವಾಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ. ಓಮೈಕ್ರಾನ್ ರೂಪಾಂತರ ತಳಿಯ ಪ್ರಕರಣಗಳ ಜತೆಗೆ ಡೆಲ್ಟಾ ತಳಿಯ ಪ್ರಕರಣಗಳೂ ಏರಿಕೆಯಾಗುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಈ ನಿರ್ಧಾರ ಪ್ರಕಟಿಸಿದೆ.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಬಗ್ಗೆ ಹಲವು ತಿಂಗಳಿಂದ ಚರ್ಚೆಗಳು ನಡೆಯುತ್ತಲೇ ಇವೆ. ಲಸಿಕೆ ಲಭ್ಯವಿಲ್ಲದೇ ಇದ್ದ ಕಾರಣ ಮಕ್ಕಳಿಗೆ ಲಸಿಕೆ ನೀಡಲು ಸಾಧ್ಯವಾಗಿರಲಿಲ್ಲ. ಆದರೆ ಈಗ ಭಾರತ್ ಬಯೊಟೆಕ್‌ನ ಕೋವ್ಯಾಕ್ಸಿನ್ ಲಸಿಕೆಯನ್ನು 12 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳಿಗೆ ತುರ್ತು ಸಂದರ್ಭದಲ್ಲಿ ನೀಡಲು ಅನುಮತಿ ದೊರೆತಿದೆ. ಝೈಡಸ್ ಕ್ಯಾಡಿಲಾ ಕಂಪನಿಯ ಝೈಕೋವ್-ಡಿ ಸೂಜಿರಹಿತ ಲಸಿಕೆಯನ್ನು 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ನೀಡಲು ಅನುಮತಿ ದೊರೆತಿದೆ.

18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಇನ್ನೆರಡು ವಾರಗಳಲ್ಲಿ ವರ್ಷ ತುಂಬಲಿದೆ. 94 ಕೋಟಿಯಷ್ಟಿರುವ ಈ ವರ್ಗದ ಎಲ್ಲರಿಗೂ ಈವರೆಗೆ ಎರಡೂ ಡೋಸ್‌ಗಳನ್ನು ನೀಡಲು ಸಾಧ್ಯವಾಗಿಲ್ಲ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಂದಾಜು 40 ಕೋಟಿಯಷ್ಟಿರುವ ಮಕ್ಕಳಿಗೆ ಒಂದೂ ಡೋಸ್ ಲಸಿಕೆ ನೀಡಲಾಗಿಲ್ಲ.

ದೇಶದ ಬಹುತೇಕ ರಾಜ್ಯಗಳಲ್ಲಿ ಶಾಲಾ-ಕಾಲೇಜುಗಳು ಆರಂಭವಾಗಿವೆ. ಆದರೆ ಆ ಸಂಸ್ಥೆಗಳಲ್ಲಿನ ಸಿಬ್ಬಂದಿಗೆ ಲಸಿಕೆ ನೀಡಲಾಗಿದೆಯೇ ಹೊರತು, ಸೋಂಕು ತಗಲುವ ಸಾಧ್ಯತೆ ಅತ್ಯಧಿಕವಾಗಿರುವ ಮಕ್ಕಳಿಗೆ ಲಸಿಕೆಯ ರಕ್ಷಣೆ ಇಲ್ಲ. ಶಾಲಾ-ಕಾಲೇಜುಗಳಲ್ಲಿ ಮಕ್ಕಳು ಅಕ್ಕಪಕ್ಕ ಕುಳಿತೇ ಪಾಠ ಕೇಳಬೇಕಾದ, ಪರೀಕ್ಷೆ ಬರೆಯಬೇಕಾದ ಸ್ಥಿತಿ ಇದೆ. ಹೀಗಾಗಿ ಒಂದು ಮಗುವಿಗೆ ಸೋಂಕು ತಗುಲಿದರೂ, ತರಗತಿಯಲ್ಲಿನ ಇತರ ವಿದ್ಯಾರ್ಥಿಗಳಿಗೆ ಸೋಂಕು ಹರಡುವ ಅಪಾಯ ಅತ್ಯಧಿಕವಾಗಿರುತ್ತದೆ. ಲಸಿಕೆಯ ಪರಿಣಾಮದ ಪ್ರಮಾಣ ಎಷ್ಟೇ ಇದ್ದರೂ, ಮಕ್ಕಳಿಗೆ ಲಸಿಕೆ ನೀಡಲೇಬೇಕಾದ ಸ್ಥಿತಿ ಇದೆ.

ಆದರೆ ಈಗ ಸರ್ಕಾರವು 15-18 ವರ್ಷ ಮಕ್ಕಳಿಗಷ್ಟೇ ಲಸಿಕೆ ನೀಡಲು ಮುಂದಾಗಿದೆ. ಈ ವಯಸ್ಸಿನ ಮಕ್ಕಳ ಸಂಖ್ಯೆ 10.02 ಕೋಟಿಯಷ್ಟು. ಆದರೆ, 15 ವರ್ಷಕ್ಕಿಂತ ಕಡಿಮೆ ಮಯಸ್ಸಿನ ಮಕ್ಕಳ ಸಂಖ್ಯೆ 29 ಕೋಟಿಗಿಂತ ಹೆಚ್ಚು. ಈ ಮಕ್ಕಳಿಗೆ ಲಸಿಕೆ ಯಾವಾಗ ನೀಡಲಾಗುತ್ತದೆ ಎಂಬುದರ ಸೂಚನೆಯನ್ನು ಸರ್ಕಾರ ನೀಡಿಲ್ಲ.

‘ಅವೈಜ್ಞಾನಿಕ ನಿರ್ಧಾರ’

‘15-18 ವರ್ಷದ ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ನಿರ್ಧಾರವು ಅವೈಜ್ಞಾನಿಕವಾದುದು’ ಎಂದು ದೆಹಲಿ ಏಮ್ಸ್‌ನ ವೈರಾಣುರೋಗಶಾಸ್ತ್ರಜ್ಞ ಡಾ.ಸಂಜಯ್ ಕೆ.ರಾಯ್ ಹೇಳಿದ್ದಾರೆ.

‘ಮಕ್ಕಳಿಗೆ ಲಸಿಕೆ ನೀಡುವುದರ ಹಿಂದಿನ ಉದ್ದೇಶ ಏನು ಎಂಬುದನ್ನು ಸರ್ಕಾರವು ಸ್ಪಷ್ಟಪಡಿಸಿಲ್ಲ. ರೋಗ ಹರಡುವುದನ್ನು ತಡೆಯಲು ಲಸಿಕೆ ನೀಡಲಾಗುತ್ತಿದೆಯೇ ಅಥವಾ ರೋಗದ ತೀವ್ರತೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಲಸಿಕೆ ನೀಡಲಾಗುತ್ತಿದೆಯೇ ಎಂಬುದನ್ನು ಸರ್ಕಾರ ತಿಳಿಸಿಲ್ಲ’ ಎಂದು ಅವರು ಹೇಳಿದ್ದಾರೆ. ಭಾರತೀಯ ಸಾರ್ವಜನಿಕ ಆರೋಗ್ಯ ಸಂಘಟನೆಯ ಅಧ್ಯಕ್ಷರೂ ಆಗಿರುವ ಅವರು, ಮಕ್ಕಳಿಗೆ ಕೋವ್ಯಾಕ್ಸಿನ್ ಲಸಿಕೆ ನೀಡುವ ಕ್ಲಿನಿಕಲ್ ಟ್ರಯಲ್‌ನ ಪ್ರಧಾನ ಪರೀಕ್ಷಕರಾಗಿದ್ದರು.

‘ವಿಶ್ವದ ಎಲ್ಲೆಡೆ ಲಸಿಕೆಯ ಎರಡೂ ಡೋಸ್ ಪಡೆದುಕೊಂಡವರಿಗೂ ಕೋವಿಡ್ ತಗುಲುತ್ತಿದೆ. ಹೀಗಾಗಿ ಲಸಿಕೆ ನೀಡುವ ಮೂಲಕ ಮಕ್ಕಳಿಗೆ ಕೋವಿಡ್ ಹರಡುವುದನ್ನು ತಪ್ಪಿಸುತ್ತೇವೆ ಎಂಬುದರಲ್ಲಿ ಅರ್ಥವಿಲ್ಲ. ಕೋವಿಡ್ ತಗುಲಿದ 10 ಲಕ್ಷ ಮಕ್ಕಳಲ್ಲಿ ಇಬ್ಬರಷ್ಟೇ ಮೃತಪಡುತ್ತಿದ್ದಾರೆ. ಆದರೆ ಲಸಿಕೆ ನೀಡಿಕೆಯ ಅಪಾಯದ ಪ್ರಮಾಣವು ಇದಕ್ಕಿಂತಲೂ ಅಧಿಕವಾಗಿದೆ. ಹೀಗಿರುವಾಗ ವಿಶ್ವದ ಬೇರೆಡೆ ಮಕ್ಕಳಿಗೆ ಲಸಿಕೆ ನೀಡುತ್ತಿರುವ ಕಾರ್ಯಕ್ರಮಗಳನ್ನು ಪರಿಶೀಲಿಸಿ, ನಮ್ಮಲ್ಲಿ ಕಾರ್ಯಕ್ರಮ ಜಾರಿಗೆ ತರಬೇಕಿತ್ತು’ ಎಂದು ಅವರು ವಿವರಿಸಿದ್ದಾರೆ.

‘ಸದ್ಯದ ಸ್ಥಿತಿಯಲ್ಲಿ ಮಕ್ಕಳಿಗೆ ಕೋವಿಡ್ ಹರಡುವುದನ್ನು ತಡೆಯಲು ಲಸಿಕೆಗಳಿಂದ ಸಾಧ್ಯವಿಲ್ಲ. ರೋಗವು ತೀವ್ರಗೊಳ್ಳುವ ಮಕ್ಕಳ ಪ್ರಮಾಣ ಶೇ 1ಕ್ಕಿಂತಲೂ ಕಡಿಮೆ ಇರುವ ಕಾರಣ, ರೋಗದ ತೀವ್ರತೆಯನ್ನು ಕಡಿಮೆ ಮಾಡಲೂ ಸಾಧ್ಯವಿಲ್ಲ. ಈ ಲಸಿಕೆ ಕಾರ್ಯಕ್ರಮದಿಂದ ಈ ಎರಡು ಉದ್ದೇಶಗಳೂ ಈಡೇರುವುದಿಲ್ಲ’ ಎಂದು ಅವರು ಹೇಳಿದ್ದಾರೆ.

ಸಾಮಾನ್ಯ ಸ್ಥಿತಿಗೆ ಮರಳಿವೆಯೇ ಶಾಲಾ-ಕಾಲೇಜುಗಳು?

‘ಈ ಲಸಿಕೆ ಕಾರ್ಯಕ್ರಮದಿಂದ ಶಾಲಾ-ಕಾಲೇಜುಗಳ ಕಾರ್ಯಚಟುವಟಿಕೆಗಳು ಸಾಮಾನ್ಯ ಸ್ಥಿತಿಗೆ ಮರಳಲಿದೆ’ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಆದರೆ, ಮಕ್ಕಳಿಗೆ ಲಸಿಕೆ ನೀಡುವ ಅಭಿಯಾನದ ಕಾರ್ಯಯೋಜನೆಯ ಬಗ್ಗೆ ಕೇಂದ್ರ ಸರ್ಕಾರವು ಸ್ಪಷ್ಟ ಮಾಹಿತಿ ನೀಡಿಲ್ಲ.

ಮಕ್ಕಳಿಗೆ ನೀಡಬೇಕಿರುವ ಲಸಿಕೆಯ ಡೋಸ್‌ಗಳ ತಯಾರಿಕೆ, ಲಭ್ಯತೆ ಮತ್ತು ಪೂರೈಕೆ ಬಗ್ಗೆ ಸರ್ಕಾರವು ಯಾವುದೇ ಮಾಹಿತಿ ಬಹಿರಂಗಪಡಿಸಿಲ್ಲ. ಮಕ್ಕಳಿಗೆ ಲಸಿಕೆ ನೀಡುವ ಅಭಿಯಾನದ ಬಗ್ಗೆ ಕೇಂದ್ರ ಸರ್ಕಾರವು ಯಾವುದೇ ಸ್ಪಷ್ಟ ಮಾರ್ಗ-ಸೂಚಿಯನ್ನೂ ಹೊರಡಿಸಿಲ್ಲ. ಆದರೆ ಕೇಂದ್ರ ಸರ್ಕಾರದಿಂದ ಇನ್ನಷ್ಟೇ ಪೂರೈಕೆ-ಯಾಗಬೇಕಿರುವ ಈ ಲಸಿಕೆಗಳಿಗಾಗಿ ರಾಜ್ಯ ಸರ್ಕಾರಗಳು ಎದುರು ನೋಡುತ್ತಿವೆ. ಅಭಿಯಾನವನ್ನು ಅನುಷ್ಠಾನಕ್ಕೆ ತರಲು ಸಿದ್ಧತೆಯನ್ನೂ ನಡೆಸಿವೆ. ಕೆಲವು ರಾಜ್ಯಗಳು ಪ್ರತ್ಯೇಕ ಲಸಿಕಾ ಶಿಬಿರಗಳನ್ನು ನಡೆಸಲು ಯೋಜನೆ ಹಾಕಿಕೊಂಡಿವೆ. ಕೆಲವು ರಾಜ್ಯಗಳು ಶಾಲೆ ಮತ್ತು ಕಾಲೇಜುಗಳಲ್ಲೇ ಲಸಿಕೆ ನೀಡಲು ಸಿದ್ಧತೆ ಮಾಡಿಕೊಂಡಿವೆ.

ಈ ಕಾರ್ಯಕ್ರಮದ ಅನುಷ್ಠಾನದ ಯಶಸ್ಸು, ಕೇಂದ್ರ ಸರ್ಕಾರವು ಪೂರೈಸಲಿರುವ ಲಸಿಕೆಯ ಡೋಸ್‌ಗಳ ಸಂಖ್ಯೆಯನ್ನು ಆಧರಿಸಿದೆ. ದೇಶದಲ್ಲಿ 15-18 ವರ್ಷ ವಯಸ್ಸಿನ ಮಕ್ಕಳ ಸಂಖ್ಯೆ ಅಂದಾಜು 10.02 ಕೋಟಿಯಷ್ಟಿದೆ. ಈ ಮಕ್ಕಳಿಗೆ ಲಸಿಕೆಯ ಎರಡು ಡೋಸ್ ನೀಡಬೇಕು ಎಂದರೂ, ಅಂದಾಜು 21 ಕೋಟಿ ಡೋಸ್‌ಗಳಷ್ಟು ಲಸಿಕೆ ಬೇಕಾಗುತ್ತದೆ. ಮಕ್ಕಳಿಗೆಂದೇ ಪ್ರತ್ಯೇಕವಾಗಿ ಅಭಿವೃದ್ಧಿಪಡಿಸಿರುವ ಈ ಲಸಿಕೆಗಳ ತಯಾರಿಕೆ ಸಾಮರ್ಥ್ಯ ಎಷ್ಟು ಎಂಬುದರ ದತ್ತಾಂಶ ಬಹಿರಂಗವಾಗಿಲ್ಲ. ಅಲ್ಲದೆ, 18 ವರ್ಷ ಮೇಲ್ಪಟ್ಟ ಜನರಿಗೆ ಲಸಿಕೆ ನೀಡುವ ಕಾರ್ಯಕ್ರಮವು ಇನ್ನೂ ಪೂರ್ಣಗೊಂಡಿಲ್ಲ. ಹೀಗಿರುವಾಗ ಲಸಿಕೆ ತಯಾರಿಕೆ ಕಂಪನಿಗಳು, ತಮ್ಮ ತಯಾರಿಕೆ ಸಾಮರ್ಥ್ಯವನ್ನು ವಯಸ್ಕರಿಗೆ ನೀಡುವ ಲಸಿಕೆಗಳು ಮತ್ತು ಮಕ್ಕಳಿಗೆ ನೀಡುವ ಲಸಿಕೆಗಳ ಮಧ್ಯೆ ಹೇಗೆ ಹಂಚಿಕೆ ಮಾಡಿಕೊಳ್ಳುತ್ತವೆ ಎಂಬುದರ ಕಾರ್ಯಯೋಜನೆ ಸಿದ್ಧವಾಗಿಲ್ಲ. ಮಕ್ಕಳಿಗೆ ನೀಡುವ ಲಸಿಕೆಗಳನ್ನು ಕೇಂದ್ರ ಸರ್ಕಾರವು ಯಾವ ಪ್ರಮಾಣದಲ್ಲಿ ಪೂರೈಸುತ್ತದೆ ಎಂಬುದು ಅಸ್ಪಷ್ಟವಾಗಿದೆ.

ಮಕ್ಕಳಿಗಾಗಿ 5 ಲಸಿಕೆಗಳು

ಮಕ್ಕಳಿಗೆ ನೀಡುವ ಉದ್ದೇಶದಿಂದ 5 ಕೋವಿಡ್ ಲಸಿಕೆಗಳು ದೇಶದಲ್ಲಿ ಸಿದ್ಧವಾಗುತ್ತಿವೆ. ಈ ಪೈಕಿ ಎರಡು ಲಸಿಕೆಗಳ ತುರ್ತು ಬಳಕೆಗೆ ಅನುಮೋದನೆ ಸಿಕ್ಕಿದೆ. ಇನ್ನೂ 3 ಲಸಿಕೆಗಳು ಕ್ಲಿನಿಕಲ್ ಪ್ರಯೋಗದ ವಿವಿಧ ಹಂತಗಳಲ್ಲಿವೆ.

ಝೈಕೋವ್-ಡಿ: 12 ವರ್ಷಕ್ಕೆ ಮೇಲ್ಪಟ್ಟ ಮಕ್ಕಳಿಗೆ ನೀಡಲಾಗುವ ಲಸಿಕೆಯ 3ನೇ ಹಂತದ ಪ್ರಾಯೋಗಿಕ ಪರೀಕ್ಷೆಯನ್ನು (ಮರುಸಂಯೋಜಿತ ಡಿಎನ್‌ಎ) ಝೈಡಸ್ ಕ್ಯಾಡಿಲಾ ಸಂಸ್ಥೆ ನಡೆಸಿದೆ. ಇದರ ತುರ್ತು ಬಳಕೆಗೆ ಆಗಸ್ಟ್ 20ರಂದು ಅನುಮತಿ ಸಿಕ್ಕಿತ್ತು. 28 ದಿನಗಳ ಅಂತರದಲ್ಲಿ ಮೂರು ಡೋಸ್‌ಗಳನ್ನು ನೀಡಲಾಗುತ್ತದೆ.

ಕೋವ್ಯಾಕ್ಸಿನ್: ಭಾರತ್ ಬಯೊಟೆಕ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಕೋವ್ಯಾಕ್ಸಿನ್ ಲಸಿಕೆಯನ್ನು 2 ಡೋಸ್‌ಗಳಲ್ಲಿ ನೀಡಲಾಗುತ್ತದೆ. ಮೊದಲ ಡೋಸ್ ಬಳಿಕ 20 ದಿನಗಳ ಅಂತರ ಇರಲಿದೆ. 2ರಿಂದ 18 ವರ್ಷ ವಯೋಮಾನದವರ ಮೇಲೆ ಲಸಿಕೆಯ ಎರಡು ಹಾಗೂ ಮೂರನೇ ಹಂತದ ಪರೀಕ್ಷೆಗಳು ನಡೆಯುತ್ತಿವೆ. ಲಸಿಕೆಯ ತುರ್ತು ಬಳಕೆಗೆ ಡಿ.25ರಂದು ಭಾರತೀಯ ಔಷಧ ನಿಯಂತ್ರಣ ನಿರ್ದೇಶನಾಲಯವು ಅನುಮತಿ ನೀಡಿತ್ತು. ಪ್ರಾಯೋಗಿಕ ಹಂತದಲ್ಲಿ ಲಭ್ಯವಾದ ಸುರಕ್ಷತಾ ಹಾಗೂ ರೋಗನಿರೋಧಕ ಶಕ್ತಿ ಕುರಿತ ಮಾಹಿತಿಯನ್ನು ಒಳಗೊಂಡ ಮಧ್ಯಂತರ ವರದಿಯನ್ನು ಸಂಸ್ಥೆಯು ಸಲ್ಲಿಸಿದ ಬಳಿಕ ಇದರ ಬಳಕೆಗೆ ಅನುಮತಿ ನೀಡಲಾಗಿದೆ.

15 ವರ್ಷಕ್ಕಿಂತ ಕಡಿಮೆ ವಯಸ್ಸಿನ 29 ಕೋಟಿ ಮಕ್ಕಳಿಗೆ ಲಸಿಕೆ ಸದ್ಯಕ್ಕೆ ಇಲ್ಲ



● ಜನಸಂಖ್ಯೆಯ ಎಲ್ಲಾ ದತ್ತಾಂಶಗಳು ಭಾರತೀಯ ಪ್ರಧಾನ ರಿಜಿಸ್ಟ್ರಾರ್ ಮತ್ತು ಜನಗಣತಿ ಆಯುಕ್ತರ ಕಚೇರಿಯ, 2019ರ ಮಧ್ಯಂತರ ಜನಸಂಖ್ಯಾ ಅಂದಾಜಿನ ವರದಿಯನ್ನು ಆಧರಿಸಿದೆ

ಅಡ್ಡ ಪರಿಣಾಮಗಳು ಕಡಿಮೆ

ಲಸಿಕೆ ಪಡೆದ ಬಳಿಕ ಕೆಲವೊಂದು ಅಡ್ಡ ಪರಿಣಾಮಗಳು ಉಂಟಾಗಬಹುದು. ಲಸಿಕೆ ಹಾಕಿಸಿಕೊಂಡ ಕೈಯಲ್ಲಿ ನೋವು, ಊತ ಕಾಣಿಸಿಕೊಳ್ಳಬಹುದು ಅಥವಾ ಲಸಿಕೆ ಹಾಕಿಸಿಕೊಂಡ ಜಾಗ ಕೆಂಪಗಾಗಬಹುದು. ಮಗುವಿನಲ್ಲಿ ಸುಸ್ತು, ತಲೆನೋವು, ಸ್ನಾಯುನೋವು, ವಾಕರಿಕೆ, ಜ್ವರ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ದೇಹದ ರೋಗನಿರೋಧಕ ಶಕ್ತಿಯ ಜೊತೆಗೆ ಲಸಿಕೆಯು ಹೊಂದಾಣಿಕೆ ಮಾಡಿಕೊಳ್ಳುವಾಗ ಸಣ್ಣಪುಟ್ಟ ವ್ಯತ್ಯಾಸಗಳು ಕಂಡುಬಂದರೂ, ಅವು ಸ್ವಾಭಾವಿಕ ಎಂದು ತಜ್ಞರು ಹೇಳುತ್ತಾರೆ.

ಸಣ್ಣಪುಟ್ಟ ಸಮಸ್ಯೆಗಳು ಕಾಣಿಸಿಕೊಂಡರೂ ಅವು ದೀರ್ಘಕಾಲ ಬಾಧಿಸುವುದಿಲ್ಲ. ಕೆಲವರಲ್ಲಿ ಯಾವುದೇ ಅಡ್ಡಪರಿಣಾಮಗಳು ಕಂಡಬರುವುದಿಲ್ಲ. ಕೆಲವರಲ್ಲಿ ಅಲರ್ಜಿಯಿಂದ ಸಮಸ್ಯೆ ಉಂಟಾಗಬಹುದು. ಆದರೆ ಇಂತಹವರ ಪ್ರಮಾಣ ತೀರಾ ಕಡಿಮೆ. ಸಮಸ್ಯೆ ಕಂಡುಬಂದಲ್ಲಿ, ಆರೋಗ್ಯ ಕಾರ್ಯಕರ್ತರು ತಕ್ಷಣ ಚಿಕಿತ್ಸೆಗೆ ವ್ಯವಸ್ಥೆ ಮಾಡುತ್ತಾರೆ.

ಅಮೆರಿಕದಲ್ಲಿ, ಮಕ್ಕಳ ಲಸಿಕೆ ಸೇರಿದಂತೆ ಎಲ್ಲ ವಯೋಮಾನದವರ ಕೋವಿಡ್ ಲಸಿಕೆಗಳ ಸುರಕ್ಷತೆ ಮೇಲೆ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ (ಸಿಡಿಸಿ) ಸಂಸ್ಥೆಯು ನಿಗಾ ಇರಿಸಿದೆ. ಅಮೆರಿಕದಲ್ಲಿ ಫೈಝರ್-ಬಯೊಎನ್‌ಟೆಕ್ ಅಭಿವೃದ್ಧಿಪಡಿಸಿದ ಲಸಿಕೆಯನ್ನು 12-17 ವರ್ಷದೊಳಗಿನ ಮಕ್ಕಳಿಗೆ ನೀಡಿದಾಗ, ಮಯೊಕಾರ್ಡಿಟಿಸ್ (ಹೃದಯ ಸ್ನಾಯುವಿನ ಉರಿಯೂತ) ಹಾಗೂ ಪೆರಿಕಾರ್ಡಿಟಿಸ್ (ಹೃದಯದ ಹೊರ ಪದರದ ಉರಿಯೂತ) ಸಮಸ್ಯೆಗಳು ಕಂಡುಬಂದಿದ್ದರೂ, ಇವುಗಳ ಪ್ರಮಾಣ ತೀರಾ ಕಡಿಮೆಯಿತ್ತು. 5-11 ವರ್ಷ ವಯೋಮಾನದ ಮಕ್ಕಳಿಗೆ ಹೋಲಿಸಿದರೆ, 12-17 ವರ್ಷದೊಳಗಿನ ಮಕ್ಕಳಲ್ಲಿ ಈ ಸಮಸ್ಯೆಗಳು ಹೆಚ್ಚು ಕಂಡುಬಂದರೂ, ಅಪಾಯಕಾರಿ ಪ್ರಮಾಣದಲ್ಲಿ ಇರುವುದಿಲ್ಲ ಎಂಬುದು ಕ್ಲಿನಿಕಲ್ ಪ್ರಯೋಗದಲ್ಲಿ ದೃಢಪಟ್ಟಿದೆ.

ಎಲ್ಲೆಲ್ಲಿ ಮಕ್ಕಳಿಗೆ ಲಸಿಕೆ?

ಮಕ್ಕಳಿಗೆ ಕೋವಿಡ್ ಲಸಿಕೆ ನೀಡುವ ಅಭಿಯಾನವನ್ನು ವಿಶ್ವದ ಹಲವು ದೇಶಗಳು ಈಗಾಗಲೇ ಶುರು ಮಾಡಿವೆ.

ದೇಶ	ಲಸಿಕೆ	ವಯಸ್ಸು
ಅಮೆರಿಕ	ಫೈಝರ್	5-11
ಅಮೆರಿಕ	ಮೊಡೆರ್ನಾ	2-17
ಕೆನಡಾ	ಫೈಝರ್	5-11
ಚೀನಾ	ಸಿನೊವ್ಯಾಕ್	3-11
ಹಾಂಗ್‌ಕಾಂಗ್	ಸಿನೊವ್ಯಾಕ್	3-11
ನಾರ್ವೆ	ಫೈಝರ್	12-15
ವೆನಿಜುವೆಲಾ	ಸೊಬೆರಾನ	2-11
ಇಸ್ರೇಲ್	ಫೈಝರ್	5 ಮೇಲ್ಪಟ್ಟು
ಬ್ರೆಜಿಲ್	ಫೈಝರ್	12 ವರ್ಷ ಮೇಲ್ಪಟ್ಟು

ಆಧಾರ: ಪಿಟಿಐ, ನಾಗರಿಕ ನೋಂದಣಿ ವ್ಯವಸ್ಥೆಯ ವಾರ್ಷಿಕ ಸಾಂಖ್ಯಿಕ ವರದಿ–2019

ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 6

ಪಾಪಿ ದೇವರಾಜ ಪುನೀತನಾದ

‘ಕಲಿಯುಗದಲ್ಲಿ ಪಾಪಿಗಳು ಶಿವಪುರಾಣ ಕೇಳಿದರೆ ಪುನೀತರಾಗುವರೇ?’ ಎಂದು ಶೌನಕಮುನಿ ಕೇಳುತ್ತಾನೆ. ಅದಕ್ಕೆ ವ್ಯಾಸರ ಪರಮಶಿಷ್ಯ ಸೂತಮುನಿ ‘ಖಂಡಿತ ಪುನೀತರಾಗುವರು. ಇದಕ್ಕೆ ಪರಮ ಪಾಪಿಷ್ಠನಾದ ದೇವರಾಜನ ವೃತ್ತಾಂತವೇ ಸಾಕ್ಷಿ’ ಅಂತ ದೇವರಾಜನೆಂಬ ದುಷ್ಟ ಬ್ರಾಹ್ಮಣನ ಕಥೆಯನ್ನ ಹೇಳುತ್ತಾನೆ.

ಕಿರಾತವೆಂಬ ಪಟ್ಟಣದಲ್ಲಿ ದೇವರಾಜನೆಂಬ ಬ್ರಾಹ್ಮಣನಿದ್ದ. ಅವನು ತನ್ನ ಸ್ವಧರ್ಮವಾದ ಬ್ರಾಹ್ಮಣಕರ್ಮವನ್ನೆಲ್ಲಾ ಬಿಟ್ಟು, ದೇವರ ಪೂಜೆಯನ್ನೂ ಮಾಡದೆ, ಸ್ನಾನ-ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನೂ ಮಾಡದೆ, ಸದಾ ಕಾಲ ರಸವಿಕ್ರಯ, ಪರವಂಚನೆಯಂಥ ದುರ್ವ್ಯವಹಾರ ಗಳಲ್ಲಿ ತೊಡಗಿದ್ದ. ಎಲ್ಲಾ ಜಾತಿಯವರನ್ನೂ ಕೊಲ್ಲುತ್ತ, ಅವರ ಧನವ ನ್ನೆಲ್ಲಾ ಅಪಹರಿಸುತ್ತಿದ್ದ. ಅನ್ಯಾಯಮಾರ್ಗದಿಂದ ಬೇಕಾದಷ್ಟು ಹಣ ವನ್ನ ಸಂಪಾದಿಸಿದರೂ ಆ ಪಾಪಿ ಸ್ವಲ್ಪವನ್ನೂ ಧರ್ಮಕಾರ್ಯಗಳಿಗೆ ಉಪಯೋಗಿಸುತ್ತಿರಲಿಲ್ಲ.

ಒಂದು ದಿನ ದೇವರಾಜ ಸ್ನಾನಕ್ಕೆಂದು ಕೆರೆಗೆ ಹೋದ. ಅಲ್ಲಿ ಶೋಭಾವತಿ ಎಂಬ ವೇಶ್ಯೆಯನ್ನು ನೋಡಿ ಮೋಹಿತನಾದ. ಶೋಭಾವತಿಯು ದೇವರಾಜನಲ್ಲಿ ಹಣ ಇದೆ ಅಂತ, ಅವನೊಂದಿಗೆ ಮೋಹಕವಾಗಿ ಮಾತನಾಡಿ, ತನ್ನ ಮೋಹ ಪಾಶಕ್ಕೆ ಬೀಳಿಸಿಕೊಂಡಳು. ದೇವರಾಜ ಅವಳೊಂದಿಗೆ ಸಂಸಾರ ಮಾಡುತ್ತಾ, ಇಹಪರ ಮರೆತು ಸುಖ ಅನುಭವಿಸುತ್ತಿದ್ದ.

ಹೀಗೆ ದೇವರಾಜ ವೇಶ್ಯೆಯೊಂದಿಗೆ ಸುಖ-ಭೋಗ ಅನುಭವಿಸುತ್ತಿದ್ದ. ವೇಶ್ಯೆಯ ಸಹವಾಸ ಬಿಡು ಎಂದು ಬುದ್ಧಿ ಹೇಳಿದ ತನ್ನ ತಂದೆ-ತಾಯಿ-ಪತ್ನಿಯನ್ನ ಕೊಂದು, ಮನೆಯಲ್ಲಿದ್ದ ಹಣವನ್ನೆಲ್ಲಾ ದೋಚಿಕೊಂಡು ವೇಶ್ಯೆ ಶೋಭಾಳಿಗೆ ಕೊಟ್ಟ. ದೇವರಾಜ ನಿತ್ಯ ಮಾಂಸ ತಿನ್ನುತ್ತಾ, ಮದ್ಯವನ್ನು ಕುಡಿಯುತ್ತಾ, ವೇಶ್ಯೆಯೊಡನೆ ಒಂದೇ ತಟ್ಟೆಯಲ್ಲಿ ಊಟ ಮಾಡುವ ಮಹಾಪಾಪಿಯಾಗಿದ್ದ. ಕಾಲಕಳೆದಂತೆ ದೇವರಾಜನ ಕೈ ಬರಿದಾಯಿತು. ಹಣವಿಲ್ಲದ ದೇವರಾಜನನ್ನು ವೇಶ್ಯೆ ತನ್ನ ಮನೆಯಿಂದ ಹೊರ ಹಾಕಿದಳು. ಬೀದಿಪಾಲಾದ ದೇವರಾಜ ತಿನ್ನಲು ಅನ್ನವಿಲ್ಲದೆ ಅಲ್ಲಲ್ಲಿ ತಿರುಗುತ್ತಾ ಒಂದು ದಿನ ಶಿವದೇವಾಲಯದ ಬಳಿ ಬಂದ. ಅಲ್ಲಿ ಅನೇಕ ಸಾಧುಗಳು ನೆರೆದು ಶಿವಕಥಾಶ್ರವಣ ಮಾಡುತ್ತಿದ್ದರು. ವಿಪರೀತವಾದ ಜ್ವರದಿಂದ ಬಳಲುತ್ತಿದ್ದ ದೇವರಾಜ ನಡೆಯಲಾಗದೆ, ಆ ಶಿವದೇವಾಲಯದಲ್ಲಿಯೇ ಕುಳಿತ. ಅಲ್ಲಿ ಬ್ರಾಹ್ಮಣರು ಹೇಳುತ್ತಿದ್ದ ಶಿವನ ಕಥೆ ಅವನ ಕಿವಿಗೆ ಬೀಳು ತ್ತಿತ್ತು. ಹೀಗೆ ಶಿವಪುರಾಣ ಕೇಳಿದ ಒಂದು ತಿಂಗಳ ನಂತರ ದೇವರಾಜನ ಜ್ವರವಾಸಿಯಾಗದೆ ಸತ್ತುಹೋದ. ಯಮನಭಟರು ಅವನನ್ನ ಯಮಪಾಶಗಳಿಂದ ಬಿಗಿದು, ಯಮನಪಟ್ಟಣಕ್ಕೆ ಒಯ್ದರು.

ಇದನ್ನು ಕಂಡ ಶಿವದೂತರು ಕೈಲಾಸದಿಂದ ತ್ರಿಶೂಲಗಳನ್ನು ಹಿಡಿದು ಉರಿಗೋಪದಿಂದ ಯಮನ ಪಟ್ಟಣಕ್ಕೆ ಧಾವಿಸಿ ಬಂದರು. ಯಮದೂತರನ್ನ ತಡೆದು, ದೇವರಾಜನನ್ನ ನರಕಲೋಕದಿಂದ ಬಿಡಿಸಿ ದರು. ಇನ್ನೇನು ದೇವರಾಜನನ್ನು ದೇವವಿಮಾನದಲ್ಲಿ ಕೈಲಾಸಕ್ಕೆ ಕರೆದೊ ಯ್ಯುವಷ್ಟರಲ್ಲಿ, ಮತ್ತೆ ಯಮದೂತರು ದುಷ್ಟ ದೇವರಾಜನನ್ನು ಆತನ ಪಾಪಕೃತ್ಯಕ್ಕಾಗಿ ನರಕದಲ್ಲೇ ಇರಬೇಕೆಂದು ಅಡ್ಡಿಪಡಿಸಿದರು. ಈ ಗಲಾಟೆ ಕೇಳಿ ಯಮಪುರಿ ಮಹಾರಾಜನಾದ ಸ್ವತಃ ಯಮನೇ ಅಲ್ಲಿಗೆ ಬಂದು ಶಿವದೂತರಿಗೆ ವಿನೀತನಾಗಿ ನಮಸ್ಕರಿಸಿದ. ಶಿವದೂತರು ಏಕೆ ಯಮಪುರಿಗೆ ಬಂದು, ದೇವರಾಜನನ್ನ ಕೈಲಾಸಕ್ಕೆ ಕರೆದೊಯ್ಯುತ್ತಿದ್ದಾರೆ ಎಂಬುದನ್ನ ತನ್ನ ದಿವ್ಯದೃಷ್ಟಿಯಿಂದ ತಿಳಿದುಕೊಂಡ. ನಂತರ ಯಮರಾಜ ಶಿವದೂತರನ್ನ ಯಥೋಚಿತವಾಗಿ ಪೂಜಿಸಿ ಬೀಳ್ಕೊಟ್ಟ. ದೇವರಾಜನನ್ನು ಕೈಲಾಸಕ್ಕೆ ಕರೆದೊಯ್ದ ಶಿವದೂತರು ಈಶ್ವರನಿಗೆ ಅರ್ಪಿಸಿದರು.

ವೇದ ಬಲ್ಲ ಜ್ಞಾನಿಗಳೆಲ್ಲಾ ಹೇಳೋ ಪ್ರಕಾರ ‘ಎಲ್ಲ 14 ಲೋಕ ಗಳಿಗಿಂತಲೂ ಕೈಲಾಸಲೋಕ ಶ್ರೇಷ್ಠವಾದದ್ದು. ಕೈಲಾಸಲೋಕ ಮೇಲಿದ್ದರೆ, ಅದರ ಕೆಳಗೆ ಇತರೆ ಲೋಕಗಳಿವೆ. ಇಂಥ ಕೈಲಾಸ ಸೇರಲು ಬಹಳ ಪುಣ್ಯ ಮಾಡಿರಬೇಕು. ಪರಮಪವಿತ್ರವಾದ ಕೈಲಾಸವನ್ನ ಪರಮಪಾಪಿಯಾದ ದೇವರಾಜ ಸೇರಿದ್ದು ಶಿವಪುರಾಣಾಮೃತದಿಂದ. ದೇವರಾಜನಂತಹ ಪಾಪಿಯೇ ಶಿವಪುರಾಣದಿಂದ ಸದ್ಗತಿ ಪಡೆಯುತ್ತಾನೆಂದ ಮೇಲೆ, ಶಿವಪುರಾಣವನ್ನ ಕೇಳಿದ ಉತ್ತಮರು ಇನ್ನೆಂಥ ಪುಣ್ಯ ಸಂಪಾದಿಸಿ, ಶಿವನ ಪ್ರೀತಿಗೆ ಪಾತ್ರರಾಗುತ್ತಾರೆ ಎಂಬುದನ್ನ ಊಹಿಸಬಹುದು’ ಎಂದ ಸೂತಮುನಿ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಶಿ ವಿಶ್ವನಾಥ ಧಾಮವನ್ನು ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ ಅವರು ಅಲ್ಲಿಯ ನೈರ್ಮಲ್ಯ ಕಾರ್ಯಕರ್ತರ ಮೇಲೆ ಹೂವಿನ ದಳಗಳನ್ನು ಸುರಿದಿದ್ದರು. ವಾಹಿನಿಯೊಂದರ ಸುದ್ದಿ ನಿರೂಪಕರು ಈ ಸುದ್ದಿ ನಿರೂಪಿಸುವ ವೇಳೆ, ತಾಜ್‌ಮಹಲ್ ನಿರ್ಮಿಸಿದ್ದವರ ಕೈಗಳನ್ನು ಮೊಘಲ್ ದೊರೆ ಶಾಜಹಾನ್ ಕತ್ತರಿಸಿದ್ದ. ಮೋದಿ ನೈರ್ಮಲ್ಯ ಕಾರ್ಯಕರ್ತರಿಗೆ ಹೂವಿನ ಅಭಿಷೇಕ ಮಾಡಿದರು ಎಂದಿದ್ದರು. ಇದಾದ ಬಳಿಕ ಕೇಂದ್ರ ಸಚಿವರೂ ಸೇರಿ ಹಲವರು ಶಾಜಹಾನ್, ಕಾರ್ಮಿಕರ ಕೈ ಕತ್ತರಿಸಿದ್ದರ ಕುರಿತು ಹೇಳಿಕೆಗಳನ್ನು ನೀಡಿದ್ದರು ಮತ್ತು ಟ್ವೀಟ್‌ಗಳನ್ನು ಮಾಡಿದ್ದರು.

ಶಾಜಹಾನ್ ತಾಜ್‌ಮಹಲ್ ನಿರ್ಮಿಸಿದ್ದವರ ಕೈಗಳನ್ನು ಕತ್ತರಿಸಿದ್ದ ಎಂಬುದು ಬಹಳ ಪ್ರಸಿದ್ಧ ಕಟ್ಟುಕತೆ ಎಂದು ಇತಿಹಾಸಕಾರ ಎಸ್. ಇರ್ಫಾನ್ ಹಬೀಬ್ ಆಲ್ಟ್ ನ್ಯೂಸ್‌ಗೆ ಹೇಳಿದ್ದಾರೆ. ಈ ಆರೋಪವನ್ನು ಸಾಬೀತುಪಡಿಸಲು ಯಾವ ಪುರಾವೆಯೂ ಇಲ್ಲ. ಯಾವ ವೃತ್ತಿಪರ ಇತಿಹಾಸಕಾರರೂ ಈ ಕುರಿತು ಏನನ್ನೂ ಹೇಳಿಲ್ಲ. ನಾನು ಈ ಕಥೆಯನ್ನು ಸುಮಾರು 1960ರಿಂದಲೂ ಕೇಳುತ್ತಿದ್ದೇನೆ. ಅಂದಿಗೂ ಇಂದಿಗೂ ವ್ಯತ್ಯಾಸವೇನೆಂದರೆ, ಆಗ ಅದು ಶಾಜಹಾನ್ ಕುರಿತಾದ ವ್ಯಂಗ್ಯವಾಗಿತ್ತು ಆದರೆ ಈಗ ಈ ಕಥೆಗೆ ಕೋಮು ಬಣ್ಣ ಬಂದಿದೆ ಎಂದು ಅವರು ಹೇಳಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಜ್ಞಾನ ದೀವಿಗೆ

ಜೀವಕಾರಣ ಮೂಲ ಗೂಢವಾಗಿರ್ದೊಡಂ |
ಧೀವಿಕಾಸದ ಬೆಳಕನಾದನಿತು ಗಳಿಸಿ ||
ಕೈವಲ್ಯಪಥವನರಸುತ ಯಾತ್ರಿಸಲೆಬೇಕು |
ದೀವಿಗೆಯು ಮತಿಯೊಂದೆ – ಮಂಕುತಿಮ್ಮ
|| 527||

ಪದ-ಅರ್ಥ: ಗೂಢವಾಗಿರ್ದೊಡಂ = ಗೂಢವಾಗಿ + ಇರ್ದೊಡಂ(ಇದ್ದರೂ), ಧೀವಿಕಾಸದ = ಧೀ(ಬುದ್ಧಿಯ) + ವಿಕಾಸದ, ಬೆಳಕನಾದನಿತು = ಬೆಳಕನು + ಆದ + ಅನಿತು(ತುಸು), ಕೈವಲ್ಯಪಥ = ಪರಮಾರ್ಥದ ದಾರಿ.

ವಾಚ್ಯಾರ್ಥ: ಪ್ರಪಂಚದ ಮೂಲಕಾರಣವಾದ ತತ್ವ ಗೂಢವಾಗಿದ್ದರೂ, ಬುದ್ಧಿಯ ಬೆಳವಣಿಗೆಗಾಗಿ ಸಾಧ್ಯವಾದಷ್ಟು ಬೆಳಕನ್ನು ಗಳಿಸಿಕೊಂಡು, ಮುಕ್ತಿಯ ಮಾರ್ಗವನ್ನು ಅರಸುತ್ತ ಪ್ರಯಾಣ ಮಾಡಲೇಬೇಕು. ಆಗ ನಮ್ಮ ಬುದ್ಧಿಯೊಂದೇ ನಮಗೆ ದಾರಿತೋರುವ ದೀಪ.

ವಿವರಣೆ: ಆಚಾರ್ಯ ಶಂಕರರು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ಅದರ ಆಘಾತ ಅವರ ಮೇಲೆ ಅಪಾರವಾಗಿತ್ತು. ತಂದೆಗೆ ಏನಾಯಿತು ಎಂದು ತಾಯಿಯನ್ನು ಕೇಳಿದರು. ‘ನಿನ್ನ ತಂದೆ ಮರಣಹೊಂದಿ ಸ್ವರ್ಗ ಸೇರಿದರು’ ಎಂದರು ತಾಯಿ. ‘ಏಕೆ ಹಾಗೆ ಮರಣ ಬಂತು?’ ಮರುಪ್ರಶ್ನೆ ಮಾಡಿದ ಬಾಲಕ. ‘ಹೌದಪ್ಪ, ಇದು ಯಾರನ್ನೂ ಬಿಟ್ಟದ್ದಲ್ಲ. ನಾನು, ನೀನು ಎಲ್ಲರೂ ಒಂದು ದಿನ ಮರಣವನ್ನು ಹೊಂದಲೇಬೇಕು’ ಎಂದು ತಿಳಿಸಿದರು ಅಮ್ಮ. ಅತ್ಯಂತ ಬುದ್ಧಿವಂತ ಮಗ ಕೇಳಿದ, ‘ಅಮ್ಮ, ಸಾಯುವುದು ಖಚಿತವಾಗಿದ್ದರೆ ನಾವು ಇಲ್ಲಿಗೆ ಬಂದದ್ದೇಕೆ? ಕೋ ಹಂ? ಕುತ ಆಯಾತ:, ನಾನು ಯಾರು? ಯಾಕೆ ಇಲ್ಲಿಗೆ ಬಂದಿದ್ದೇನೆ?’ ಈ ಪ್ರಶ್ನೆಯನ್ನು ಸಹಸ್ರಾರು ಜನ, ಸಹಸ್ರಾರು ವರ್ಷಗಳಿಂದ ಕೇಳುತ್ತಲೇ ಬಂದಿದ್ದಾರೆ. ಏನು ಈ ಪ್ರಪಂಚ? ಯಾರು ಇದನ್ನು ಸೃಷ್ಟಿ ಮಾಡಿದರು? ಯಾವ ಕಾರಣಕ್ಕೆ ಇದು ಸಿದ್ಧವಾಯಿತು? ಬರೀ ಪ್ರಶ್ನೆಗಳು! ಸರಿಯಾದ ಉತ್ತರವೇ ದೊರೆಯಲಿಲ್ಲ. ಏನೇನೋ ಸಮಾಧಾನಗಳನ್ನು ಕೊಟ್ಟರು. ಇದು ಭಗವಂತ ತನ್ನ ಲೀಲೆಯನ್ನು ತೋರಲು ಮಾಡಿದ ಕೃತಿ ಎಂದರು. ಅವೆಲ್ಲ ಸಮಾಧಾನಗಳು. ಆದರೆ ಅದು ತುಂಬ ಗೂಢ ಎನ್ನಿಸಿತು.

ನಾನು ಈ ಪ್ರಪಂಚಕ್ಕೆ ಬಂದ ಮೇಲೆ ಇರುವಷ್ಟು ಕಾಲ ಬದುಕಲೇ ಬೇಕು. ಆಗ ನನಗೆ ದೊರೆಯುವ ಅನೇಕ ಬಗೆಯ ಜ್ಞಾನದ ಬೆಳಕುಗಳನ್ನು ಸಾಧ್ಯವಾದಷ್ಟು ಗಳಿಸಿಕೊಳ್ಳುತ್ತ, ಬುದ್ಧಿಯನ್ನು ವಿಕಾಸಗೊಳಿಸಿಕೊಳ್ಳಬೇಕು.

ನನ್ನ ಬದುಕನ್ನು ನಾನು ನಡೆಸಲೇಬೇಕು. ಅದು ಅನಿವಾರ್ಯ. ಹೀಗೆ ಅನಿವಾರ್ಯವಾದದ್ದನ್ನು ಅಪರೂಪವನ್ನಾಗಿಸಲು ಜ್ಞಾನದ ಬೆಳಕು ಬೇಕು. ನನಗೆ, ಪ್ರಪಂಚದ, ಪ್ರಪಂಚದ ಹಿಂದಿರುವ ಶಕ್ತಿಯ ಬಗೆಗೆ ತಿಳಿಯಲು ಈ ಜ್ಞಾನ ಬೇಕು. ಈ ಜ್ಞಾನರತ್ನವನ್ನು ಪಡೆದರೆ ಅದಕ್ಕಿಂತ ಹೆಚ್ಚಿನ ಸಾರ್ಥಕ್ಯವಿಲ್ಲ ಎನ್ನುತ್ತಾನೆ ಅಲ್ಲಮಪ್ರಭು.

ನಿನ್ನ ಒಡವೆ ಎಂಬುದು ಜ್ಞಾನರತ್ನ
ಅಂತಪ್ಪ ದಿವ್ಯರತ್ನವ ಕೆಡಗುಡದೆ
ಆ ರತ್ನವ ನೀನು ಅಲಂಕರಿಸಿದೆಯಾದಡೆ
ನಮ್ಮ ಗುಹೇಶ್ವರ ಲಿಂಗದಲ್ಲಿ
ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ, ಎಲೆ ಮನವೆ

ಈ ಬದುಕಿನ ಯಾತ್ರೆಯಲ್ಲಿ ದಾರಿ ತೋರುವ ದೀವಿಗೆ, ಈ ಜ್ಞಾನತುಂಬಿದ ಬುದ್ಧಿ ಮಾತ್ರ.

ದಿನ ಭವಿಷ್ಯ

ಸೋಮವಾರ ಡಿಸೆಂಬರ್ 27, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿರ (ಧನುರ್ಮಾಸ) ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮೂಲ ಅಷ್ಟಮಿ ಗಂ. 18-36 (ಹ. 2-12) ಸೋಮವಾರ ನಿತ್ಯ ನಕ್ಷತ್ರ ಹಸ್ತ ಗಂ. 45-26 (ರಾ. 12-56) ಶೋಭನ ನಾಮ ಯೋಗ ಗಂ. 51-44 ಕೌಲವ ಕರಣ ಗಂ. 18-36 ವಿಷ ಗಂ. 7-1 ಅಮೃತ ಗಂ. 30-22 ರಾಹುಕಾಲ: ಬೆ. ಗಂ. 7-30 ರಿಂದ 9-00 ಗುಳಿಕ ಮ. ಕಾಲ ಗಂ 1-30 ರಿಂದ 3-00 ಯಮಗಂಡ ಕಾಲ ಬೆ. ಗಂ 10-30 ರಿಂದ 12-00 : ಸೂರ್ಯೋದಯ: 6-42 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 3, 8

ಮೇಷ: ವಾಹನಗಳ ವ್ಯವಹಾರದಿಂದಾಗಿ ಅಧಿಕ ಲಾಭ. ನ್ಯಾಯಾಲಯದ ವಿಚಾರಗಳಿಗಾಗಿ ನಡೆಸುವ ಅಲೆದಾಟ ಕಡಿಮೆಯಾಗುವುದು. ಹೊಸ ಹೊಸ ಕೆಲಸ ಕಾರ್ಯಗಳನ್ನು ಪ್ರಾರಂಭಿಸಲು ಅತ್ಯುತ್ತಮ ದಿನವಾಗಿರುವುದು.

ವೃಷಭ: ಸಮಸ್ಯೆಗಳನ್ನು ಯಥೋಚಿತವಾಗಿ ಬಗೆಹರಿಸಿಕೊಳ್ಳುವ ಅವಕಾಶಗಳು ಲಭಿಸಲಿವೆ. ಕಳೆದು ಹೋಗಬಹುದಾದ ಹಳೆಯ ಸಂಬಂಧ – ವ್ಯವಹಾರಗಳನ್ನು ಕಳಚಿಕೊಳ್ಳದೇ ನವಿರಾಗಿ ಮುಂದುವರಿಸಿಕೊಳ್ಳುವುದು ಉತ್ತಮ.

ಮಿಥುನ: ದೊಡ್ಡ ಪ್ರಮಾಣದ ನಿರ್ಯಾತ ಉದ್ಯಮದ ಬಗ್ಗೆ ಯೋಜನೆ ರೂಪಿಸುವ ಸಾಧ್ಯತೆ. ಕಚೇರಿಯಲ್ಲಿ ಹೊಸ ಹೊಸ ಮುಖಗಳ ಆಗಮನ ಸಾಧ್ಯತೆ. ಸಕುಟುಂಬ ದೇವಾಲಯ ದರ್ಶನ ಸಾಧ್ಯತೆ. ದೂರ ಪ್ರಯಾಣ.

ಕರ್ಕಾಟಕ: ಈ ದಿನದ ಕೆಲಸ-ಕಾರ್ಯಗಳಲ್ಲಿ ಹಿಂದೆ ಇದ್ದ ಅಡಚಣೆ ಹಾಗೂ ಭಿನ್ನಾಭಿಪ್ರಾಯಗಳು ದೂರವಾಗುವವು. ಮಾನಸಿಕ ಸಮತೋಲನ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ವಾಹನ ಚಾಲನೆಯಲ್ಲಿ ಜಾಗೃತೆ ಇರಲಿ.

ಸಿಂಹ: ಗಮನವಿಟ್ಟು ಕೆಲಸ ಮಾಡಬೇಕಾಗುವುದು. ನಿಮ್ಮ ಎಲ್ಲಾ ವ್ಯವಹಾರಗಳ ಬಗ್ಗೆ ಹೆಚ್ಚಿನ ಜಾಗರೂಕತೆ ಅವಶ್ಯ. ಜಮೀನು ವಿಷಯಗಳಿಗೆ ಸಂಬಂಧಿಸಿದಂತೆ ನೆರೆಯವರಲ್ಲಿ ಚಕಮಕಿ ನಡೆಯುವ ಸಾಧ್ಯತೆ. ಆರ್ಥಿಕ ಲಾಭ.

ಕನ್ಯಾ: ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಆತ್ಮೀಯರಲ್ಲಿ ಚರ್ಚಿಸಿ, ಮತ್ತೊಮ್ಮೆ ಯೋಚಿಸಿ. ಸಾರಿಗೆ ಉದ್ಯೋಗಿಗಳಿಗೆ ಪ್ರಗತಿಯೊಂದಿಗೆ ಲಾಭದಲ್ಲಿ ಹೆಚ್ಚಳ. ಹೊಸ ಮನೆಗೆ ಪ್ರವೇಶ ಮಾಡುವ ಸಾಧ್ಯತೆ.

ತುಲಾ: ನಿರ್ಮಾಣದ ಕೆಲಸಗಳಿಗಾಗಿ ಆರ್ಥಿಕ ಸಂಪನ್ಮೂಲ ಹೊಂದಾಣಿಕೆಯಲ್ಲಿ ವ್ಯತ್ಯಯ. ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಸಾಧ್ಯತೆ. ನಿರುದ್ಯೋಗಿಗಳಿಗೆ ಹಣಕಾಸು ಸಂಸ್ಥೆಗಳಲ್ಲಿ ತಾತ್ಕಾಲಿಕ ಅವಕಾಶ.

ವೃಶ್ಚಿಕ: ಎಂದಿನ ಕೆಲಸಗಳನ್ನು ಸಲೀಸಾಗಿ ಮುಂದುವರಿಸಿಕೊಂಡು ಹೋಗಲು ಬಯಸುವಿರಿ. ನೀವು ದೂರ ಮಾಡುತ್ತಿರುವ ವಿಷಯಗಳ ಬಗ್ಗೆ ಈಗ ಗಮನ ಹರಿಸಬೇಕಾದೀತು. ಸಂಗಾತಿಯ ಆರೋಗ್ಯದ ಬಗ್ಗೆ ಗಮನ ವಹಿಸಿ.

ಧನು: ಭೂ ಸಂಬಂಧಿ ವ್ಯವಹಾರಗಳಲ್ಲಿ ತೊಡಗಿರುವವರ ವ್ಯವಹಾರದಲ್ಲಿ ಚುರುಕುತನ. ಕಾರ್ಖಾನೆಯ ಕೆಲಸದಲ್ಲಿರುವವರಿಗೆ ಪ್ರಗತಿ. ಮನೆಯವರ ಒತ್ತಾಯದಿಂದಾಗಿ ವಾಹನ ಖರೀದಿ ಸಾಧ್ಯತೆ.

ಮಕರ: ನಿರುದ್ಯೋಗಿಗಳಿಗೆ ಒಳ್ಳೆಯ ಜನರ ಪರಿಚಯದಿಂದಾಗಿ ಉದ್ಯೋಗ ಲಭ್ಯವಾಗುವುದು. ಉದ್ಯೋಗ ಅರ್ಜಿಯ ಅನುಮೋದನೆ ಒಂದು ಪತ್ರವು ಕೈ ಸೇರುವ ಸಾಧ್ಯತೆ. ಧಾನ್ಯ ವ್ಯವಹಾರದಲ್ಲಿ ತೊಡಗಿಕೊಂಡವರಿಗೆ ಹಿನ್ನಡೆ.

ಕುಂಭ: ಬಂಧುಮಿತ್ರರಿಂದ ಉತ್ತಮ ಸಹಾಯ ಸಹಕಾರಗಳು ದೊರಯಲಿದೆ. ಉದ್ವೇಗಗೊಳ್ಳದೇ ಶಾಂತರೀತಿಯಿಂದ ವ್ಯವಹರಿಸಿದಲ್ಲಿ ಕೆಲಸ ಕಾರ್ಯಗಳು ಸುಗಮಗೊಳ್ಳುವವು. ಮನೆ ಜನರ ಸಹಕಾರದಿಂದಾಗಿ ನೆಮ್ಮದಿ.

ಮೀನ: ನೀವು ತೆಗೆದುಕೊಂಡ ನಿರ್ಧಾರಗಗಳು ಯಾವುದೇ ಚ್ಯುತಿ ಬಾರದೆ ಸರಿಯಾದ ಮಾರ್ಗದಲ್ಲಿ ಸಾಗುವವು. ಉದ್ಯೋಗ ನಿಮಿತ್ತ ದೂರದ ಊರುಗಳಿಗೆ ಪ್ರಯಾಣ ಸಾಧ್ಯತೆ. ಮಕ್ಕಳಿಗೆ ಉದ್ಯೋಗ ಬದಲಾವಣೆ ಸಾಧ್ಯತೆ.

ನಿಮ್ಮ ಜನ್ಮದಿನ 27-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಯಾವುದೇ ಕೆಲಸದಲ್ಲಿ ಪಾದಾರ್ಪಣೆ ಮಾಡಿದರೂ ನಿರ್ವಿಘ್ನವಾಗಿ ಮುಂದುವರಿಯುವುದರಲ್ಲಿ ಸಂಶಯವಿಲ್ಲ. ಅವಿವಾಹಿತರಿಗೆ ವಿವಾಹದ ಶುಭ ಸಮಾಚಾರಗಳು ಒದಗಿ ಬಂದು ಅನುಕೂಲವಾಗುವುದು. ಬೇರೆಯವರಿಗೆ ಒಳ್ಳೆಯದನ್ನು ಬಯಸುವ ನಿಮ್ಮ ಗುಣವೇ ಈ ವರ್ಷ ನಿಮ್ಮನ್ನು ಕಾಯಲಿದೆ.

ಪದಬಂಧ 4820

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಬಲು ಶೌರ್ಯವುಳ್ಳವನು (4)
3.ಒಳ್ಳೆಯ ಮಾತಿದು (4)
5.ಹೈದರಾಬಾದಿನ ದೊರೆಗಳಿಗೆ ಇದ್ದ ಹೆಸರು (3)
6.ಇಲ್ಲವೆಂದು ಹೇಳುವಿಕೆ (3)
8.ಉತ್ತಮ ಜಾತಿಯ ಜೇನುತುಪ್ಪ (3)
10.ಗಿಲಿ ಗಿಲಿ ಸದ್ದು ಮಾಡುವ ಮಕ್ಕಳ ಆಟಿಕೆ (3)
11.ಅತ್ಯಂತ ಶ್ರೇಷ್ಠವಾದುದು (3)
13.ಹುಟ್ಟುವ ಸ್ಥಳ (3)
15.ಲೋಕಕ್ಕೆಲ್ಲಾ ಪೂಜ್ಯನಾದವನು (4)
16.ಆನಂದಾನುಭಕ್ಕೆ ಅಡ್ಡಿ (4)

ಮೇಲಿಂದ ಕೆಳಕ್ಕೆ
1.ಸಂಚಾರವನ್ನು ಹೀಗೆ ಹೇಳಿ (4)
2.ಬಂಗಾರ ಇಲ್ಲಿದೆ (3)
3.ಶ್ರೀ ಕೃಷ್ಣನ ಸ್ನೇಹಿತ (3)
4.ತರ ತರದ ಕಾಯಿಪಲ್ಲೆ (4)
7.ಹುರಿಯುವ ಹೆಂಚು (3)
9.ವಾಹನವನ್ನು ಏರಿದವನು (3)
10.ಪರ್ವತಗಳ ರಾಜ (4)
12.ಅಪಸ್ಮಾರವನ್ನು ಹೀಗೂ ಹೇಳುವರು (4)
13.ಗುರುವಿನ ನಖ! (3)
14.ಮರದಲ್ಲಿರುವ ದ್ವಿದಳ ಧಾನ್ಯ! (3)



4819ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಪಜಯ 3.ತದಕು 5.ಮದುಮಗ 7.ವಕ್ತಾರ 8.ಪ್ರತಿಷ್ಠಾಪನೆ 11.ಸಮ್ಮತಿ 12.ವಿತರಕ 14.ಕುಸುರಿ 15.ಕರಣಿಕ

ಮೇಲಿಂದ ಕೆಳಕ್ಕೆ: 1.ಅರಮನೆ 2.ಜನುಮ 4.ಕುಟೀರ 6.ಗರತಿ 7.ವರ್ತನೆ 8.ಪ್ರಗತಿ 9.ಪದವಿ 10.ಅಕಳಂಕ 11.ಸರಕು 13.ತತ್ತರ

ಸುಡೊಕು 5206

		7	1		2		6	
				3		8		9
2		4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5205 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಆರ್.ಎಲ್ ಜಾಲಪ್ಪ
ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಾಜಿ ಸಚಿವರು
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ
ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ
ಪ್ರಾಂಶುಪಾಲರು,ಮುಖ್ಯೋಪಾಧ್ಯಾರು
ಮತ್ತು ಸಿಬ್ಬಂದಿ ವರ್ಗ
ವಿವೇಕಾನಂದ ಶಾಲಾ ಕಾಲೇಜುಗಳು
ಬೆಂಗಳೂರು–560055

'ನ್ಯಾಯಾಧೀಶರೇ ನ್ಯಾಯಾಧೀಶರನ್ನು ನೇಮಿಸುತ್ತಾರೆ' ಎಂಬುದು ಮಿಥ್ಯೆ: ಸಿಜೆಐ

ಅಮರಾವತಿ (ಪಿಟಿಐ): 'ನ್ಯಾಯಾಧೀಶರೇ ನ್ಯಾಯಾಧೀಶರನ್ನು ನೇಮಿಸಿಕೊಳ್ಳುತ್ತಾರೆ' ಎಂಬುದು ಮಿಥ್ಯೆಯಾಗಿದೆ. ನ್ಯಾಯಾಂಗದ ಅಧಿಕಾರಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಹಲವು ಸಂಸ್ಥೆಗಳಲ್ಲಿ ನ್ಯಾಯಾಂಗವೂ ಒಂದು ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಭಾನುವಾರ ತಿಳಿಸಿದರು.

ವಿಜಯವಾಡದ ಸಿದ್ಧಾರ್ಥ ಕಾನೂನು ಕಾಲೇಜಿನಲ್ಲಿ ಅವರು 'ಭಾರತೀಯ ನ್ಯಾಯಾಂಗ - ಭವಿಷ್ಯದ ಸವಾಲುಗಳು' ಕುರಿತು ದತ್ತಿ ಉಪನ್ಯಾಸ ನೀಡಿದರು.

ಇತ್ತೀಚಿನ ದಿನಗಳಲ್ಲಿ ನ್ಯಾಯಾಂಗದ ಅಧಿಕಾರಿಗಳ ಮೇಲೆ ದೈಹಿಕ ಹಲ್ಲೆಗಳು ಹೆಚ್ಚುತ್ತಿವೆ. ಇನ್ನು ಕಕ್ಷಿದಾರರಿಗೆ ಪೂರಕವಾಗಿ ಆದೇಶಗಳು ಬಾರದಿದ್ದಾಗ ಅವರಿಂದ ಮುದ್ರಣ ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ನ್ಯಾಯಾಧೀಶರ ವಿರುದ್ಧ ಸಂಘಟಿತ ಅಪಪ್ರಚಾರಗಳೂ ನಡೆಯುತ್ತಿವೆ. ಇವೂ ಪ್ರಾಯೋಜಿತ ದಾಳಿಗಳೇ ಆಗಿವೆ ಎಂದರು.

ಎನ್.ವಿ.ರಮಣ

ಸರ್ಕಾರಿ ವಕೀಲರ ನೇಮಕ ವ್ಯವಸ್ಥೆಯನ್ನು ಸ್ವತಂತ್ರಗೊಳಿಸುವ ಅಗತ್ಯವಿದೆ. ಅವರು ನ್ಯಾಯಾಲಯಗಳಿಗೆ ಮಾತ್ರ ಉತ್ತರಿಸುವಂತಿರಬೇಕು ಎಂದರು.

ಹೈಕೋರ್ಟ್ ಮತ್ತು ಸುಪ್ರೀಂ ನ್ಯಾಯಮೂರ್ತಿಗಳ (ವೇತನ ಮತ್ತು ಸೇವಾ ಷರತ್ತುಗಳು) ತಿದ್ದುಪಡಿ ಮಸೂದೆ, 2021ರ ಕುರಿತು ಇತ್ತೀಚೆಗೆ ಸಂಸತ್ತಿನಲ್ಲಿ ನಡೆದ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಕೇರಳ ಸಂಸದ ಜಾನ್ ಬ್ರಿಟಾಸ್ ಅವರು 'ನ್ಯಾಯಾಧೀಶರು ನ್ಯಾಯಾಧೀಶರನ್ನು ನೇಮಿಸುವುದು ಎಲ್ಲಿಯೂ ಕೇಳಿಲ್ಲ' ಎಂದರು.

'ಸತ್ಯವೇನೆಂದರೆ, ಕೇಂದ್ರ ಕಾನೂನು ಸಚಿವಾಲಯ, ರಾಜ್ಯ ಸರ್ಕಾರಗಳು, ರಾಜ್ಯಪಾಲರು, ಹೈಕೋರ್ಟ್ ಕೊಲಿಜಿಯಂ, ಗುಪ್ತಚರ ಬ್ಯೂರೊ ಸೇರಿದಂತೆ ಹಲವು ಅಧಿಕಾರಿಗಳು ನ್ಯಾಯಾಧೀಶರ ನೇಮಕ ಪ್ರಕ್ರಿಯೆಯಲ್ಲಿ ಇರುತ್ತಾರೆ' ಎಂದು ಸಿಜೆಐ ತಿಳಿಸಿದರು.

'ಬ್ರಹ್ಮೋಸ್: ದಾಳಿ ಮಾಡುವ ಉದ್ದೇಶವಿಲ್ಲ'

ಲಖನೌ (ಪಿಟಿಐ): 'ಯಾವುದೇ ದೇಶದ ಮೇಲೆ ದಾಳಿ ಮಾಡುವ ಉದ್ದೇಶದಿಂದ ನಾವು ಬ್ರಹ್ಮೋಸ್ ಕ್ಷಿಪಣಿಗಳನ್ನು ತಯಾರಿಸುತ್ತಿಲ್ಲ. ಬೇರೆ ಯಾವುದೇ ದೇಶವು ನಮ್ಮನ್ನು ಕೆಟ್ಟ ದೃಷ್ಟಿಯಿಂದ ನೋಡಬಾರದು ಎಂಬುದು ಇದರ ಉದ್ದೇಶವಾಗಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಜೊತೆಗೆ ಲಖನೌನಲ್ಲಿ ರಕ್ಷಣಾ ತಂತ್ರಜ್ಞಾನಗಳು ಮತ್ತು ಪರೀಕ್ಷಾ ಕೇಂದ್ರ ಹಾಗೂ ಬ್ರಹ್ಮೋಸ್ ಕ್ಷಿಪಣಿ ತಯಾರಿಕಾ ಘಟಕಕ್ಕೆ ಭಾನುವಾರ ಅಡಿಗಲ್ಲು ನೆರವೇರಿಸಿ ಮಾತನಾಡಿದ ಅವರು, 'ಅಣ್ವಸ್ತ್ರ ಶಕ್ತ ಭಾರತದ ವಿರುದ್ಧ ಯಾರೊಬ್ಬರೂ ಕೆಟ್ಟ ದೃಷ್ಟಿಯಿಂದ ನೋಡಬಾರದು ಎಂಬುದೇ ಕ್ಷಿಪಣಿ ಅಭಿವೃದ್ಧಿಯ ಉದ್ದೇಶ' ಎಂದು ತಿಳಿಸಿದರು.

'ನಾವು ತಯಾರಿಸುತ್ತಿರುವ ಬ್ರಹ್ಮೋಸ್ ಕ್ಷಿಪಣಿ, ಇತರ ಶಸ್ತ್ರಾಸ್ತ್ರಗಳು ಮತ್ತು ರಕ್ಷಣಾ ಉಪಕರಣಗಳು ಬೇರೆ ಯಾವುದೇ ದೇಶದ ಮೇಲೆ ದಾಳಿ ಮಾಡಲು ಅಲ್ಲ. ಯಾವುದೇ ದೇಶದ ಮೇಲೆ ದಾಳಿ ಮಾಡುವುದು ಅಥವಾ ಯಾವುದೇ ದೇಶದ ಒಂದು ಇಂಚು ಭೂಮಿಯನ್ನು ಕಬಳಿಸುವುದು ಭಾರತದ ಉದ್ದೇಶವಲ್ಲ' ಎಂದು ಹೇಳಿದರು.

ಪಾಕಿಸ್ತಾನವನ್ನು ಉಲ್ಲೇಖಿಸಿ ಮಾತನಾಡಿದ ಸಚಿವರು, 'ಕೆಲವು ವರ್ಷಗಳ ಹಿಂದೆ ನಮ್ಮಿಂದ ಬೇರ್ಪಟ್ಟಿದ್ದರೂ ಭಾರತದ ವಿರುದ್ಧವಾಗಿ ಅದರ ಉದ್ದೇಶಗಳು ಯಾವಾಗಲೂ ಏಕೆ ಕೆಟ್ಟದ್ದಾಗಿವೆ ಎಂದು ನನಗೆ ತಿಳಿದಿಲ್ಲ. ಉರಿ ಮತ್ತು ಪುಲ್ವಾಮಾದಲ್ಲಿ ಭಯೋತ್ಪಾದನಾ ಕೃತ್ಯಗಳನ್ನು ನಡೆಸಿದ್ದಕ್ಕೆ ನಾವು ತಕ್ಕ ಉತ್ತರ ಕೊಟ್ಟಿದ್ದೇವೆ' ಎಂದು ಹೇಳಿದರು.

ಲಖನೌದಲ್ಲಿ ಭಾನುವಾರ ಬ್ರಹ್ಮೋಸ್ ಕ್ಷಿಪಣಿ ಉತ್ಪಾದನಾ ಘಟಕಕ್ಕೆ ಶಿಲಾನ್ಯಾಸ ಮಾಡಿದ ಬಳಿಕ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಡಿಆರ್‌ಡಿಒ ವಸ್ತುಪ್ರದರ್ಶನ ವೀಕ್ಷಿಸಿದರು –ಪಿಟಿಐ ಚಿತ್ರ

ವರ್ಷಾಂತ್ಯದಲ್ಲಿ ಪ್ರವಾಸಿಗರ ದಂಡು

ಪ್ರಜಾವಾಣಿ ವಾರ್ತೆ

ಕಾರ್ಗಲ್ (ಶಿವಮೊಗ್ಗ): ಇಲ್ಲಿನ ವಿಶ್ವ ವಿಖ್ಯಾತ ಜೋಗ ಜಲಪಾತದ ವೀಕ್ಷಣೆಗೆ ವರ್ಷಾಂತ್ಯದ ವಾರದ ಕೊನೆಯಲ್ಲಿ ಪ್ರವಾಸಿಗರು ಲಗ್ಗೆ ಇಟ್ಟಿದ್ದಾರೆ.

ಎರಡು ತಿಂಗಳಿನಿಂದ ಕೊರೊನಾ ಮತ್ತು ಹೊಸ ರೂಪಾಂತರ ತಳಿ ಓಮೈಕ್ರಾನ್ ಬಗ್ಗೆ ಇದ್ದ ಆತಂಕದ ಕಾರಣದಿಂದ ಪ್ರವಾಸಿಗರ ಸಂಖ್ಯೆಯಲ್ಲಿ ಭಾರಿ ಇಳಿಮುಖ ಕಂಡುಬಂದಿತ್ತು. ಶನಿವಾರ ಮತ್ತು ಭಾನುವಾರ ಜೋಗ ಜಲಪಾತಕ್ಕೆ ದಿಢೀರನೆ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯವಾಗಿ ಏರಿಕೆಯಾಗಿದೆ.

'ಎರಡು ದಿನಗಳಿಂದ ಸುಮಾರು 10 ಸಾವಿರಕ್ಕೂ ಹೆಚ್ಚಿನ ಪ್ರವಾಸಿಗರು 1,500ಕ್ಕೂ ಹೆಚ್ಚಿನ ಪ್ರವಾಸಿ ವಾಹನಗಳಲ್ಲಿ ಬಂದಿದ್ದಾರೆ. ಜೋಗ ನಿರ್ವಹಣಾ ಪ್ರಾಧಿಕಾರಕ್ಕೆ ₹2 ಲಕ್ಷಕ್ಕೂ ಅಧಿಕ ಆದಾಯ ಸಂಗ್ರಹವಾಗಿದೆ' ಎಂದು ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಕಾರ್ಗಲ್‌ನ ಜೋಗ ಜಲಪಾತಕ್ಕೆ ಭಾನುವಾರ ಹೆಚ್ಚಿನ ಪ್ರವಾಸಿಗರು ಭೇಟಿ ನೀಡಿದರು.

ಬಿಸಿಲಿನಲ್ಲಿ ಕಂಗೊಳಿಸುತ್ತಿದ್ದ ಜಲಸಿರಿಯ ವೈಭವಕ್ಕೆ ಬೆರಗಾಗಿ ಪ್ರವಾಸಿಗರು ಜೋಗದ ಗುಂಡಿಯ ಮಾರ್ಗದಲ್ಲಿ ಇಳಿಯಲು ಪ್ರಯತ್ನ ನಡೆಸಿದರು. ಜೋಗದ ಗುಂಡಿಯ ಮಾರ್ಗಕ್ಕೆ ಪ್ರವೇಶ ನಿಷೇಧಿಸಿರುವ ಪ್ರಾಧಿಕಾರ ಸೂಕ್ತ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿರುವುದರಿಂದ ಯುವ ಸಮೂಹಕ್ಕೆ ನಿರಾಸೆಯಾಯಿತು.

ಸ್ಥಳೀಯ ವ್ಯಾಪಾರಿಗಳ ಬಳಿಯಿದ್ದ ಸಾಮಗ್ರಿಗಳೆಲ್ಲವೂ ಎರಡು ದಿನಗಳಲ್ಲಿಯೇ ಖಾಲಿಯಾಗಿದ್ದು, ಅವರ ಮುಖಗಳಲ್ಲಿ ಸಂತಸ ಮನೆ ಮಾಡಿತ್ತು. ಶರಾವತಿ ಕಣಿವೆ ಪ್ರದೇಶದಲ್ಲಿರುವ ಎಲ್ಲಾ ವಸತಿ ಗೃಹಗಳು, ಹೋಂ ಸ್ಟೇಗಳು ಭರ್ತಿಯಾಗಿ ಪ್ರವಾಸಿಗರು ವಸತಿ ವ್ಯವಸ್ಥೆಗೆ ಶನಿವಾರ ಪರದಾಡಿದರು.

ವರದಕ್ಷಿಣೆ: ಕ್ರಿಮಿನಲ್ ಮೊಕದ್ದಮೆ ರದ್ದು

'ಪ್ರಾಸಂಗಿಕ ಉಲ್ಲೇಖಕ್ಕೆ ಮೊಕದ್ದಮೆ ಅನಗತ್ಯ'

ನವದೆಹಲಿ (ಪಿಟಿಐ): ವರದಕ್ಷಿಣೆ ಕಿರುಕುಳ ಪ್ರಕರಣದಲ್ಲಿ ಮಹಿಳೆ ಸೇರಿದಂತೆ ಇಬ್ಬರು ವ್ಯಕ್ತಿಗಳ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸಿರುವ ಸುಪ್ರೀಂಕೋರ್ಟ್, 'ಎಫ್‌ಐಆರ್‌ನಲ್ಲಿ ವೈವಾಹಿಕ ವಿವಾದಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಯ ಪತಿ ಹಾಗೂ ಆತನ ಕುಟುಂಬಸ್ಥರ ಬಗ್ಗೆ ಕೇವಲ ಪ್ರಾಸಂಗಿಕ ಉಲ್ಲೇಖ ಮಾಡಲಾಗಿದೆ' ಎಂದು ಹೇಳಿದೆ.

ಈ ಪ್ರಕರಣ ಸಂಬಂಧ ನೀಡಿದ್ದ ತೀರ್ಪನ್ನು ನ್ಯಾಯಮೂರ್ತಿಗಳಾದ ಆರ್. ಸುಭಾಷ್ ರೆಡ್ಡಿ ಮತ್ತು ಹೃಷಿಕೇಶ್ ರಾಯ್ ಅವರಿದ್ದ ಪೀಠವು ಅಸಿಂಧುಗೊಳಿಸಿದೆ.

ವರದಕ್ಷಿಣೆ ಕಿರುಕುಳ ಪ್ರಕರಣದ ಆರೋಪಿಗಳಾದ ಸಂತ್ರಸ್ತೆಯ ಸೋದರ ಮಾವ ಮತ್ತು ಅತ್ತೆಗೆ ಪೊಲೀಸರಿಗೆ ಶರಣಾಗತಿಯಾಗುವಂತೆ ಈ ಹಿಂದೆ ಅಲಹಾಬಾದ್ ಹೈಕೋರ್ಟ್ ನಿರ್ದೇಶನ ನೀಡಿತ್ತು.

'ಎಫ್‌ಐಆರ್‌ನಲ್ಲಿ ಸಂತ್ರಸ್ತೆಯ ಗಂಡನ ಕುಟುಂಬದ ಹಲವು ಸದಸ್ಯರ ಹೆಸರುಗಳನ್ನು ಕೇವಲ ಪ್ರಾಸಂಗಿಕವಾಗಿ ಉಲ್ಲೇಖಿಸಲಾಗಿದೆಯೇ ಹೊರತು ಅಪರಾಧದಲ್ಲಿ ಅವರ ಸಕ್ರಿಯ ಪಾತ್ರವನ್ನು ವಿವರಿಸಲಾಗಿಲ್ಲ. ಹೀಗಿರುವಾಗ ಅವರ ವಿರುದ್ಧ ಕ್ರಮಕೈಗೊಳ್ಳುವುದು ಸರಿಯಲ್ಲ' ಎಂದು ಪೀಠ ಹೇಳಿದೆ.

'ಸಂತ್ರಸ್ತೆಯ ತಂದೆ ದೂರಿನಲ್ಲಿ ಕುಟುಂಬಸ್ಥರು ಅಪರಾಧದಲ್ಲಿ ಭಾಗಿಯಾಗಿರುವ ಕುರಿತಾಗಿ ನಿಖರ ಮಾಹಿತಿ ನೀಡಿಲ್ಲ. ಅಲ್ಲದೇ, ದೂರಿನಲ್ಲಿ ಸಂತ್ರಸ್ತೆ ಮೈ ಮೇಲೆ ಹಲವು ಗಾಯಗಳಿದ್ದವು ಎಂದು ಹೇಳಲಾಗಿದೆ. ಆದರೆ ಆಂತರಿಕ ಗಾಯವೊಂದನ್ನು ಹೊರತುಪಡಿಸಿ ದೇಹದಲ್ಲಿ ಗಾಯಗಳು ಪತ್ತೆಯಾಗಿಲ್ಲ' ಎಂದು ಹೇಳಿದೆ.

ನಾಳೆಯಿಂದ ರಾತ್ರಿ ಕರ್ಫ್ಯೂ

ಒಂದನೇ ಪುಟದಿಂದ

2020ರ ಮಾರ್ಚ್‌ನಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಗೊಳಿಸಲಾಗಿತ್ತು. ಆಗ ಲಾಕ್‌ಡೌನ್ ಸಡಿಲಿಕೆ ಸಮಯದಲ್ಲಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿತ್ತು. ಅಂದಿನಿಂದ 2021ರ ನವೆಂಬರ್ ಮೊದಲ ವಾರದವರೆಗೂ ಬಹುತೇಕ ದಿನಗಳಲ್ಲಿ ರಾಜ್ಯದಲ್ಲಿ ರಾತ್ರಿ ಕರ್ಫ್ಯೂ ಆದೇಶ ಜಾರಿಯಲ್ಲಿತ್ತು. ಒಂದೂವರೆ ತಿಂಗಳಲ್ಲೇ ಮತ್ತೆ ರಾತ್ರಿ ಕರ್ಫ್ಯೂ ಆದೇಶ ಜಾರಿಗೆ ಬರುತ್ತಿದೆ.

ಉನ್ನತ ಮಟ್ಟದ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸುಧಾಕರ್, ಕೋವಿಡ್ ಪ್ರಕರಣಗಳು, ಅದರಲ್ಲೂ ಓಮೈಕ್ರಾನ್ ತಳಿಯ ಕೊರೊನಾ ವೈರಾಣು ಸೋಂಕಿನ ಪ್ರಕರಣಗಳ ಹೆಚ್ಚಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ರಾಜ್ಯ ಮಟ್ಟದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರ ಅಭಿಪ್ರಾಯವನ್ನೂ ಪಡೆಯಲಾಯಿತು. ಆ ಬಳಿಕ ರಾತ್ರಿ ಕರ್ಫ್ಯೂ ಜಾರಿ ಮಾಡುವ ತೀರ್ಮಾನಕ್ಕೆ ಬರಲಾಯಿತು ಎಂದರು.

ಹತ್ತು ದಿನಗಳವರೆಗೂ ಇದೇ ಮಾರ್ಗಸೂಚಿ ಮುಂದುವರಿಯಲಿದೆ. ಸದ್ಯಕ್ಕೆ ಹೋಟೆಲ್, ರೆಸ್ಟೋರೆಂಟ್, ಕ್ಲಬ್ ಮತ್ತು ಪಬ್‌ಗಳಲ್ಲಿ ಮಾತ್ರ ಸಾಮರ್ಥ್ಯದ ಶೇ 50ರಷ್ಟು ಆಸನಗಳನ್ನು ಭರ್ತಿ ಮಾಡಬೇಕೆಂಬ ನಿರ್ಬಂಧ ವಿಧಿಸಲಾಗಿದೆ. ಸದ್ಯಕ್ಕೆ ಈ ನಿರ್ಬಂಧ ಉಳಿದ ವಾಣಿಜ್ಯ ವಹಿವಾಟುಗಳಿಗೆ ಅನ್ವಯವಾಗುವುದಿಲ್ಲ. ಜ.7 ಕ್ಕೆ ಪರಿಸ್ಥಿತಿ ಅವಲೋಕಿಸಿದ ಬಳಿಕ ಆ ಬಗ್ಗೆ ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಓಮೈಕ್ರಾನ್ ತಳಿಯ ಕೊರೊನಾ ವೈರಾಣು ಸೋಂಕು ವೇಗವಾಗಿ ಹರಡುತ್ತಿದೆ. ರಾಜ್ಯದಲ್ಲೇ 38 ಪ್ರಕರಣಗಳು ದಾಖಲಾಗಿವೆ. ದೇಶದಲ್ಲಿ ಒಟ್ಟು 400 ಕ್ಕಿಂತ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ಕೋವಿಡ್ ನಿಯಂತ್ರಿಸಲು ಬಿಗಿಯಾದ ಮುನ್ನೆಚ್ಚರಿಕೆ ಕ್ರಮಗಳು ಅಗತ್ಯ ಎಂದರು.

ಪರಿಸ್ಥಿತಿ ನಿಯಂತ್ರಣಕ್ಕೆ ಸಜ್ಜು: ಮುಂದಿನ ದಿನಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ತೀವ್ರಗತಿಯ ಏರಿಕೆಯಾಗದಂತೆ ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಲಾಯಿತು. ಲಸಿಕೆ ನೀಡುವುದನ್ನು ತ್ವರಿತಗೊಳಿಸುವಂತೆ ಮುಖ್ಯಮಂತ್ರಿಯವರು ನಿರ್ದೇಶನ ನೀಡಿದ್ದಾರೆ ಎಂದು ಸಚಿವರು ಹೇಳಿದರು.

ಈಗ ರಾಜ್ಯದ ಶೇ 97ರಷ್ಟು ಮಂದಿ ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಶೇ 75ರಷ್ಟು ಮಂದಿ ಎರಡನೇ ಡೋಸ್ ಪಡೆದಿದ್ದಾರೆ. 45 ಲಕ್ಷ ಮಂದಿ ಎರಡನೇ ಡೋಸ್ ಲಸಿಕೆ ಪಡೆಯುವುದು ಬಾಕಿ ಇದೆ. ಎಲ್ಲರಿಗೂ ತ್ವರಿತವಾಗಿ ಲಸಿಕೆ ನೀಡಲು ಸೂಚಿಸಲಾಗಿದೆ ಎಂದರು.

ಕಂದಾಯ ಸಚಿವ ಆರ್. ಅಶೋಕ, ಗೃಹ ಸಚಿವ ಆರಗ ಜ್ಞಾನೇಂದ್ರ, ಮುಖ್ಯ ಕಾರ್ಯದರ್ಶಿ ಮತ್ತು ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಸಭೆಯಲ್ಲಿದ್ದರು.

ಗಡಿಯಲ್ಲಿ ಕಟ್ಟೆಚ್ಚರ: ಕೊರೊನಾ ವೈರಾಣು, ಅದರಲ್ಲೂ ಓಮೈಕ್ರಾನ್ ತಳಿಯ ವೈರಾಣುವಿನ ಸೋಂಕು ಹರಡದಂತೆ ತಡೆಯಲು ಕೇರಳ ಮತ್ತು ಮಹಾರಾಷ್ಟ್ರಗಳ ಗಡಿಯಲ್ಲಿರುವ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಬೇಕು ಎಂದು ಮುಖ್ಯ ಕಾರ್ಯದರ್ಶಿ ಆದೇಶದಲ್ಲಿ ಸೂಚಿಸಿದ್ದಾರೆ.

ಕಾಂಗೊ: ಆತ್ಮಾಹುತಿ ದಾಳಿ, 6 ಸಾವು

ಬೆನಿ, ಕಾಂಗೊ (ಎಪಿ): ಕಾಂಗೋದ ಪೂರ್ವಭಾಗದ ಬೆನಿ ಎಂಬ ಪಟ್ಟಣದಲ್ಲಿ ಕ್ರಿಸ್‌ಮಸ್ ದಿನದ ಆಚರಣೆಗೆ ಶನಿವಾರ ಬಾರ್ ಮತ್ತು ರೆಸ್ಟೋರೆಂಟ್‌ವೊಂದರಲ್ಲಿ ಸೇರಿದ್ದ ಜನರ ಗುಂಪಿನ ಮೇಲೆ ಆತ್ಮಾಹುತಿ ಬಾಂಬ್ ದಾಳಿಯೊಂದು ನಡೆದಿದ್ದು, ಕನಿಷ್ಠ ಆರು ಮಂದಿ ಮೃತಪಟ್ಟಿದ್ದಾರೆ.

ಇದು ಇಸ್ಲಾಮಿಕ್ ಸಂಘಟನೆಗಳ ಕೃತ್ಯ ಇರಬೇಕು ಎಂದು ಶಂಕಿಸಲಾಗಿದೆ.

'ದಾಳಿಕೋರ ಬಾರ್‌ನ ಪ್ರವೇಶ ದ್ವಾರದಲ್ಲೇ ಸ್ಫೋಟಿಸಿಕೊಂಡಿದ್ದಾನೆ' ಎಂದು ಉತ್ತರ ಕಿವು ರಾಜ್ಯದ ಗವರ್ನರ್ ಅವರ ವಕ್ತಾರ ಜನರಲ್ ಸಿಲ್ವೈನ್ ಎಕೆಂಗೆ ಹೇಳಿದರು.

ಪಿಯು ಕಾಲೇಜುಗಳಲ್ಲಿ 'ಸೂರ್ಯ ನಮಸ್ಕಾರ'

ಒಂದನೇ ಪುಟದಿಂದ

'75ನೇ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವಕ್ಕೂ ಸೂರ್ಯ ನಮಸ್ಕಾರಕ್ಕೂ ಏನು ಸಂಬಂಧವಿದೆ? ಸ್ವಾತಂತ್ರ್ಯ ಹೋರಾಟಗಾರರ ಜೀವನಗಾಥೆ ತಿಳಿಸುವ, ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಅರಳಿಸುವಂಥ ಕಾರ್ಯಕ್ರಮಗಳ ಬದಲು ಸೂರ್ಯ ನಮಸ್ಕಾರದಂಥ ಆಚರಣೆಗಳನ್ನು ಜಾರಿ ಮಾಡುವುದು ಅವಿವೇಕದ ಪರಮಾವಧಿ' ಎಂದು ಹೆಸರು ಹೇಳಲಿಚ್ಛಿಸದ ಉಪನ್ಯಾಸಕರೊಬ್ಬರು ಪ್ರತಿಕ್ರಿಯಿಸಿದರು.

ಪ್ರಜಾಪ್ರಭುತ್ವಕ್ಕೆ ಕುತ್ತು: 'ಉಪನ್ಯಾಸಕರ ಸಂಘಟನೆಗಳು, ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುವ ಶಾಸಕರು ಈ ಬಗ್ಗೆ ಧ್ವನಿ ಎತ್ತಬೇಕು. ಸೂರ್ಯ ನಮಸ್ಕಾರ ಅಲ್ಲವೇ; ಹಾಳಾಗಿ ಹೋಗಲಿ ಎಂದು ಕೈಕಟ್ಟಿ ಕುಳಿತರೆ ಸಂವಿಧಾನ, ಪ್ರಜಾಪ್ರಭುತ್ವಕ್ಕೆ ಕುತ್ತು ಬರುವುದರಲ್ಲಿ ಸಂಶಯವಿಲ್ಲ' ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಮಾಜಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚೀನಾ: ಶಕ್ತಿಶಾಲಿ ಕ್ಯಾಮೆರಾ ಒಳಗೊಂಡ ಉಪಗ್ರಹ ಉಡಾವಣೆ

ಬೀಜಿಂಗ್ (ಪಿಟಿಐ): ಐದು ಮೀಟರ್ ರೆಸಲ್ಯೂಶನ್‌ವುಳ್ಳ ಭೂಮಿಯ ಚಿತ್ರಗಳನ್ನು ತೆಗೆಯಬಲ್ಲ ಕ್ಯಾಮೆರಾವನ್ನು ಹೊಂದಿರುವ ಹೊಸ ಉಪಗ್ರಹವನ್ನು ಚೀನಾವು ಭಾನುವಾರ ಉಡಾವಣೆ ಮಾಡಿದೆ ಎಂದು ಚೀನಾದ ರಾಷ್ಟ್ರೀಯ ಅಂತರಿಕ್ಷ ಆಡಳಿತ (ಸಿಎನ್‌ಸಿಎ) ಹೇಳಿದೆ.

ಚೀನಾದ ಶಾಂಕ್ಸಿ ಪ್ರಾಂತ್ಯದಲ್ಲಿರುವ ತೈಯುವಾನ್ ಉಪಗ್ರಹ ಉಡಾವಣೆ ಕೇಂದ್ರದಿಂದ ಲಾಂಗ್ ಮಾರ್ಚ್–4ಸಿ ರಾಕೆಟ್ ಮೂಲಕ 'ಝಿಯುವಾನ್–1 02ಇ' ಉಪಗ್ರಹವನ್ನು ಉಡಾವಣೆ ಮಾಡಲಾಗಿದೆ.

'ಈ ಉಪಗ್ರಹವು 2.5 ಕಿ.ಗ್ರಾಂ ತೂಕವಿದ್ದು, ಇನ್‌ಫ್ರಾರೆಡ್, ನಿಯರ್–ಇನ್‌ಫ್ರಾರೆಡ್, ಹೈಪರ್‌ಸ್ಪೆಕ್ಟ್ರಲ್ ಕ್ಯಾಮೆರಾಗಳನ್ನು ಹೊಂದಿದೆ. ಈ ಕ್ಯಾಮೆರಾಗಳು ಭೂಮಿಯ ಪೂರ್ಣ–ಬಣ್ಣದ ಪ್ಯಾಂಕ್ರೊಮ್ಯಾಟಿಕ್ ಚಿತ್ರಗಳನ್ನು ತೆಗೆಯುವ ಸಾಮರ್ಥ್ಯವನ್ನು ಹೊಂದಿದೆ' ಎಂದು ಸಿಜಿಟಿಎನ್–ಟಿವಿ ವರದಿ ಮಾಡಿದೆ.

ಲಂಡನ್: ಅರಮನೆ ಮೈದಾನಕ್ಕೆ ನುಸುಳಿದ ಶಸ್ತ್ರಸಜ್ಜಿತ ವ್ಯಕ್ತಿ

ಲಂಡನ್ (ಪಿಟಿಐ): ರಾಣಿ ಎಲಿಜಬೆತ್ II ತಮ್ಮ ಕ್ರಿಸ್‌ಮಸ್ ದಿನಗಳನ್ನು ಕಳೆಯುತ್ತಿರುವ ವಿಂಡ್ಸರ್ ಅರಮನೆಯ ಮೈದಾನದಲ್ಲಿ ಭದ್ರತೆಯನ್ನು ಉಲ್ಲಂಘಿಸಿ ಒಳಗೆ ಬಂದ ಹಾಗೂ ಶಸ್ತ್ರಾಸ್ತ್ರ ಹೊಂದಿದ್ದ 19 ವರ್ಷದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

95 ವರ್ಷದ ರಾಣಿ ಎಲಿಜಬೆತ್ ಕೋವಿಡ್ ಪ್ರಕರಣಗಳ ಹೆಚ್ಚಳದ ನಂತರ ನಾರ್ಫೋರ್ಕ್‌ನ ಸ್ಯಾಂಡ್ರಿಂಗ್‌ಹ್ಯಾಮ್ ಎಸ್ಟೇಟ್‌ನಲ್ಲಿ ತಮ್ಮ ಸಾಂಪ್ರದಾಯಿಕ ಕ್ರಿಸ್‌ಮಸ್ ಆಚರಣೆಯನ್ನು ರದ್ದುಗೊಳಿಸಿದ ನಂತರ ಅವರು ಆಗ್ನೇಯ ಇಂಗ್ಲೆಂಡ್‌ನ ಬರ್ಕ್‌ಶೈರ್‌ನಲ್ಲಿಯ ವಿಂಡ್ಸರ್ ಅರಮನೆಯಲ್ಲಿ ರಾಜಕುಮಾರ ಚಾರ್ಲ್ಸ್ ಮತ್ತು ಅವರ ಪತ್ನಿ ಕ್ಯಾಮಿಲ್ಲಾ ಅವರೊಂದಿಗೆ ಕ್ರಿಸ್‌ಮಸ್ ದಿನಗಳನ್ನು ಕಳೆಯುತ್ತಿದ್ದಾರೆ.

ಅರಮನೆಯ ಸುರಕ್ಷಿತ ವಲಯವನ್ನು ಉಲ್ಲಂಘಿಸಿ ಆಕ್ರಮಣಕಾರಿ ಶಸ್ತ್ರವೊಂದನ್ನು ಹೊಂದಿದ್ದ ಸೌತ್ಯಾಂಪ್ಟನ್‌ನಿಂದ ಬಂದಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ. ರಾಜ ಪರಿವಾರಕ್ಕೆ ಈ ಬಗ್ಗೆ ಮಾಹಿತಿ ನೀಡಲಾಗಿದೆ. ಘಟನೆಯಲ್ಲಿ ಅವರಿಗೆ ಯಾವುದೇ ತೊಂದರೆಯಾಗಿಲ್ಲ. ಆರೋಪಿಯನ್ನು ಈ ಸಮಯದಲ್ಲಿ ಬಂಧನದಲ್ಲಿ ಇರಿಸಲಾಗಿದೆ ಎಂದು ಥೇಮ್ಸ್ ವ್ಯಾಲಿ ಮತ್ತು ಮೆಟ್ರೊಪಾಲಿಟನ್ ಪೊಲೀಸರು ತಿಳಿಸಿದರು.

ಚಾಂಗು ಸರೋವರದ ಬಳಿ ಹಿಮಪಾತ

ಸಿಲಿಗುರಿ (ಪಿಟಿಐ): ಸಿಕ್ಕಿಂನ ಚಾಂಗು ಸರೋವರದ ಬಳಿ ಶನಿವಾರ ಸಂಭವಿಸಿದ ಭಾರಿ ಹಿಮಪಾತದಿಂದಾಗಿ ಸರೋವರದ ಬಳಿ ನೂರಾರು ಪ್ರವಾಸಿಗರು ಸಿಲುಕಿಕೊಂಡಿದ್ದಾರೆ.

ಆ ಪ್ರದೇಶದಲ್ಲಿ ಸೇನೆಯು ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದು, ಹಲವರನ್ನು ರಕ್ಷಿಸಿದೆ. ಇವರಿಗೆ ಸೇನಾ ಶಿಬಿರದಲ್ಲಿ ಆಶ್ರಯ ಕಲ್ಪಿಸಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಶನಿವಾರ ಭಾರೀ ಹಿಮಪಾತದಿಂದಾಗಿ ಜವಾಹರಲಾಲ್ ನೆಹರೂ ರಸ್ತೆ ಮುಚ್ಚಿದ್ದರಿಂದ ನೂರಾರು ಪ್ರವಾಸಿಗರು ಚಾಂಗು ಸರೋವರದ ಬಳಿ ಸಿಲುಕಿಕೊಂಡರು ಎಂದು ಅವರು ಹೇಳಿದ್ದಾರೆ.

ಭಾನುವಾರ ಬೆಳಿಗ್ಗೆ ಹವಾಮಾನ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ್ದರಿಂದ ಪ್ರವಾಸಿಗರನ್ನು ಸಣ್ಣ ಗುಂಪುಗಳಾಗಿ ವಿಂಗಡಿಸಿ, ಕಾಲ್ನಡಿಗೆಯ ಮೂಲಕ ಸುಮಾರು 40 ಕಿ.ಮೀ ದೂರದಲ್ಲಿರುವ ಗ್ಯಾಂಗ್ಟಕ್‌ಗೆ ಕರೆತರಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಒಳನೋಟ

ದಾರಿ ತಪ್ಪುತ್ತಿವೆಯೇ ವಿಶೇಷ ವಿ.ವಿಗಳು

ಬೆಂಗಳೂರು: 'ಘನ ಉದ್ದೇಶದ ನಿರ್ಲಕ್ಷ್ಯ,' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಡಿ.26) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ವಿ.ವಿಗಳ ಅಸ್ಮಿತೆ ಅಳಿಯದಿರಲಿ

ಉತ್ಕೃಷ್ಟ ಶಿಕ್ಷಣದ ವಿಶ್ವವಿದ್ಯಾಲಯಗಳಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರವನ್ನು ತುರ್ತಾಗಿ ತಡೆಯಬೇಕು. ವಿಶ್ವವಿದ್ಯಾಲಯಗಳಲ್ಲಿ ಸ್ವಜನ ಪಕ್ಷಪಾತ, ವ್ಯಕ್ತಿನಿಷ್ಠೆಯಂತಹ ಪೂರ್ವಾಗ್ರಹಗಳಿಗೆ ಒಳಗಾಗಬಾರದು. ಅರ್ಹತೆ ಇರುವ ಬೋಧಕರ ನೇಮಕಾತಿ ಶೀಘ್ರವಾಗಿ ನಡೆಯಬೇಕು. ಈ ಮೂಲಕ ವಿಶ್ವವಿದ್ಯಾಲಯಗಳ ಅಸ್ಮಿತೆಯನ್ನು ಉಳಿಸಬೇಕು.

ಎಸ್.ಎಚ್.ಸೋಮಶೇಖರ ಮಾಗಳ, ವಿಜಯನಗರ

ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ

ವಿದ್ಯಾರ್ಥಿಗಳಲ್ಲಿ ಉನ್ನತ ಶಿಕ್ಷಣ, ಸಂಶೋಧನೆ ಮತ್ತು ವಿಮರ್ಶೆಯ ಮನೋಭಾವ ಮೂಡಿಸುವ ಉದ್ದೇಶದೊಂದಿಗೆ ರಚನೆಯಾಗಿರುವ ವಿಶ್ವವಿದ್ಯಾಲಯಗಳಲ್ಲಿ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಕಾಯಂ ಬೋಧಕರ ಕೊರತೆಯಂತಹ ಸಮಸ್ಯೆಗಳು ವಿದ್ಯಾರ್ಥಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ. ಕ್ರಮೇಣ ಶಿಕ್ಷಣದ ಗುಣಮಟ್ಟವೂ ಕುಸಿಯಲು ಆರಂಭಿಸಿದೆ. ವಿಶ್ವವಿದ್ಯಾಲಯಗಳು ಶೈಕ್ಷಣಿಕ, ಸಾಮಾಜಿಕ ಹಾಗೂ ಸದೃಢವಾಗಿ ಬೆಳೆಯಬೇಕಾದರೆ, ಸಿಬ್ಬಂದಿಯ ನೇಮಕಾತಿಯನ್ನು ಪಾರದರ್ಶಕವಾಗಿ ನಡೆಸಬೇಕು.

ಯಲ್ಲಪ್ಪ ಗುದಗಿ, ಬಾಗಲಕೋಟೆ

ತಲೆ ಹಾಕದ ಸಚಿವರು

ಕನ್ನಡ ವಿ.ವಿಯಲ್ಲಿನ ಅವಾಂತರಗಳು ರಾಜ್ಯದ ಉನ್ನತ ಶಿಕ್ಷಣ ವ್ಯವಸ್ಥೆಗೆ ಕಪ್ಪುಚುಕ್ಕೆ. ಸರ್ಕಾರ ತರಾತುರಿಯಲ್ಲಿ ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸಲು ಹೊರಟಿದೆ. ಆದರೆ, ಸಚಿವರು ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡುವುದು, ಅಲ್ಲಿನ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳ ಜೊತೆ ಸಂವಹನ ನಡೆಸಿರುವ ಉದಾಹರಣೆಗಳು ವಿರಳ. ಬದಲಾಗಿ ಆನ್‌ಲೈನ್ ಸಭೆಗಳಲ್ಲೇ ಮಗ್ನರಾಗಿ, ಸಚಿವರು ದಿನಚರಿ ಮುಗಿಸುತ್ತಿರುವುದು ದುರದೃಷ್ಟಕರ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ

ರಾಜ್ಯದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬೋಧಕರಿಲ್ಲ. ಕೆಲವು ಕಡೆ ಸಿಬ್ಬಂದಿ ಕೊರತೆ ಕಾರಣಕ್ಕೆ ತಾತ್ಕಾಲಿಕ ನೇಮಕ ಮಾಡಿಕೊಳ್ಳಲಾಗುತ್ತಿದೆ. ಬೋಧಕ ಸಿಬ್ಬಂದಿಗೆ ಹೊರೆಯೂ ಹೆಚ್ಚಾಗಿದ್ದು, ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ. ಹೀಗೆಯೇ ಮುಂದುವರಿದರೆ ನಮ್ಮ ಹೆಮ್ಮೆಯ ವಿಶ್ವವಿದ್ಯಾಲಯಗಳು ದಾರಿ ತಪ್ಪಲಿವೆ. ಸರ್ಕಾರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ವಿಶ್ವವಿದ್ಯಾಲಯಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬುವ ಕೆಲಸ ಮಾಡಬೇಕು.

ರಮ್ಯಾ, ಬೆಂಗಳೂರು

ಕೊರತೆಗಳನ್ನು ನೀಗಿಸಿ

ಇಂದಿನ ಶಿಕ್ಷಣ ವ್ಯವಸ್ಥೆ ಖಾಸಗೀಕರಣದತ್ತ ಸಾಗಿದೆ. ಇದರ ನಡುವೆ ಎಲ್ಲೆಂದರಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು ಹುಚ್ಚುತನವೇ ಸರಿ. ಖಾಸಗಿ ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿಗೆ ಉತ್ತಮ ಸ್ಥಾನಮಾನಗಳನ್ನು ನೀಡಲಾಗುತ್ತಿದೆ. ಇದೇ ರೀತಿಯಲ್ಲಿ ಸರ್ಕಾರಿ ವಿಶ್ವವಿದ್ಯಾಲಯಗಳು ಅಭಿವೃದ್ಧಿಯತ್ತ ಸಾಗಬೇಕು. ಇರುವ ವಿಶ್ವವಿದ್ಯಾಲಯಗಳಲ್ಲಿನ ಕೊರತೆ ನೀಗಿಸಿದರೆ, ಶಿಕ್ಷಣದ ಗುಣಮಟ್ಟ ಹೆಚ್ಚಲಿದೆ.

ವೀಣಾ, ದಾವಣಗೆರೆ

ನೇಮಕಾತಿಯಲ್ಲಿ ಅಕ್ರಮ ಬೇಡ

ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಶೀಘ್ರವಾಗಿ ನಡೆಯಲಿ. ದೇಶದಲ್ಲೇ ಮೊದಲ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಿರುವ ಹೆಗ್ಗಳಿಕೆಗೆ ಪಾತ್ರವಾಗಿರುವುದು ಹೆಮ್ಮೆಯ ಸಂಗತಿ. ನೇಮಕಾತಿಯಲ್ಲಿ ಅಕ್ರಮಗಳಿಗೆ ಅವಕಾಶ ನೀಡಬಾರದು. ಪ್ರವೇಶ ಪರೀಕ್ಷೆಯ ಮೂಲಕ ಅರ್ಹರನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕು. ಇದರಿಂದ ಶಿಕ್ಷಣದ ಗುಣಮಟ್ಟ ತಾನಾಗಿಯೇ ಹೆಚ್ಚಾಗುತ್ತದೆ.

ರಾಹುಲ್ ಜಾಧವ, ಕಲಬುರಗಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

GRT JEWELLERS Since 1964
ಉದ್ಯೋಗ ಅವಕಾಶಗಳು
1964 ರಿಂದ ಅತ್ಯಂತ ವಿಶ್ವಾಸಕ್ಕೆ ಪಾತ್ರವಾಗಿರುವ GRT ಜ್ಯುವೆಲ್ಲರ್ಸ್
ಕೆ.ಆರ್. ಪುರಂ, ಬೆಂಗಳೂರು
ಷೋರೂಂಗಳಿಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ. ಹೊಸದಾಗಿ ಕೆಲಸವನ್ನು ಹುಡುಕುತ್ತಿರುವ ಹಾಗೂ ಅನುಭವವಿರುವ ಅಭ್ಯರ್ಥಿಗಳು ತಮ್ಮ ಸ್ವವಿವರಗಳು ಹಾಗೂ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನಕಲು ಪ್ರತಿಯೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು.
ಸೇಲ್ಸ್‌ಮನ್ / ಸೇಲ್ಸ್‌ಗರ್ಲ್ಸ್
ಪದವೀಧರರು ಅಥವಾ PUC ಉತ್ತೀರ್ಣತೆ ಪಡೆದವರು (ಹೊಸಬರು ಅಥವಾ ಆಭರಣ ವಿಕ್ರಯ ಹಾಗೂ ಇತರೆ ರೀಟೈಲ್ ವಿಭಾಗದಲ್ಲಿ ಅನುಭವವಿರುವವರು)
ವಯೋಮಿತಿ : 22 ರಿಂದ 27 ವರ್ಷಗಳ ವರೆಗೆ
ಸೇಲ್ಸ್ ಅಸಿಸ್ಟೆಂಟ್ಸ್
PUC ಮತ್ತು 10ನೇ ತರಗತಿ (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು).
ವಯೋಮಿತಿ : 17 ರಿಂದ 22 ವರ್ಷಗಳ ವರೆಗೆ
ದಿನಾಂಕ ಮತ್ತು ಸಮಯ
26-12-2021, ಭಾನುವಾರ, 27-12-2021, ಸೋಮವಾರ (ಬೆಳಿಗ್ಗೆ 10.00 ರಿಂದ ಸಂಜೆ 5.00 ರ ವರೆಗೆ)
ಸಂದರ್ಶನದ ಸ್ಥಳ
ಕೇಆರ್ ಇನ್, ಕೃಷ್ಣರಾಜಪುರಂ
ನಂ. 16-17, ಎನ್.ಹೆಚ್-75, ಹಳೆಯ ಮದ್ರಾಸ್ ರಸ್ತೆ, ಕೆ.ಆರ್. ಪುರಂ, ಬೆಂಗಳೂರು - 560 036.
ದಿನಾಂಕ ಮತ್ತು ಸಮಯ
28-12-2021, ಮಂಗಳವಾರ (ಬೆಳಿಗ್ಗೆ 10.00 ರಿಂದ ಸಂಜೆ 5.00 ರ ವರೆಗೆ)
ಸಂದರ್ಶನದ ಸ್ಥಳ
GRT ಜ್ಯುವೆಲರ್ಸ್ (ಇಂಡಿಯಾ) PVT. LTD., ನಂ.96, ಮುನ್ನೇಕೊಳಲು, ವರ್ತೂರು ಮುಖ್ಯ ರಸ್ತೆ, (ತುಳಸಿ ಥಿಯೇಟರ್ ಹತ್ತಿರ), ಮಾರತಹಳ್ಳಿ, ಬೆಂಗಳೂರು - 560 037.
ಸಂಪರ್ಕ ಸಂಖ್ಯೆಗಳು : 96869 05786 96867 99888
ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.
ನಿಮ್ಮ ಸ್ವವಿವರಗಳನ್ನು (Resume) recruitment@grtjewels.comಗೆ ಕಳುಹಿಸಬಹುದು.

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800/- 68,000/- 8884666597, 8884666594.

ಕಂಪನಿಗಳಿಗೆ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, Degreeಯವರು ITIನವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,100- 56,000/- ವಸತಿಯೂಟದೊಂದಿಗೆ. 7899778278, 9611715755

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600- 62000/-(ಆನ್‌ಲೈನ್ ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್, ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000- 60,000 /- ವಸತಿಯೂಟವಿದೆ. 7795837319, 9901312461

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

Part-Time Jobs

GLOBAL INTERNATIONAL Friendship Club Reqd M&F Daily Earn 10,000 To 15,000 PF& ESI Benefits with Food & Room. Whatsapp 9513045046/ 7022770604

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್ ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000- 15,000. 8951315839, 9880545002

ಭವಿಷ್ಯ

Astrology

★॥ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾಧೆ,ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30.ನಿಮಿಷದಲ್ಲಿ ಪರಿಹಾರ. ಬ್ರಹ್ಮಾನಂದ ಗುರೂಜಿ. 8050061378

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★ನಂ.1 ಸ್ತ್ರೀಪುರುಷ★ ವಶೀಕರಣ ಸ್ಪೆಷಲಿಸ್ಟ್.ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ.ಪಂಡಿತ್. ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ,ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷ ಅನೈತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ 9538276534

ಪ್ರವಾಸ

Travel

29/1/2022 ರಿಂದ 17 ದಿನಗಳ ಅಷ್ಟಜ್ಯೋತಿರ್ಲಿಂಗ ಸಮೇತ ಅಹಮದಾಬಾದ್, ದ್ವಾರಕಾ, ಪಟೇಲ್ ಪ್ರತಿಮೆ, ಶಿರಡಿ. ಶಿವರಾತ್ರಿ ಪ್ರಯುಕ್ತ 17/2/2022 ರಿಂದ 22 ದಿನಗಳ ಪುರಿ, ಕೋಲ್ಕತ್ತಾ, ನೇಪಾಳ, ಹರಿದ್ವಾರ್, ಕಾಶಿ, ದೆಹಲಿ ಇತ್ಯಾದಿ ವಿವರಗಳಿಗೆ ಏಷ್ಯನ್ ಟ್ರಾವೆಲ್ ಲೈನ್ಸ್(S) ಆರ್.ವಿ.ರಸ್ತೆ #164/3, ಮಿನರ್ವ ಬಸ್‌ಸ್ಟಾಪ್ ಎದುರು, ಬೆಂಗಳೂರು4, 08026565085. 9480182865, 8105657052

19.01.2022 ರಿಂದ 8 ದಿನಗಳ ಕಾಶಿ, ಗಯಾ, ಪ್ರಯಾಗ, ಅಯೋಧ್ಯ, ನೈಮಿಶಾರಣ್ಯ ಗೊರಕ್-ಪುರ್/ 2022ರ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ 15/20/25ದಿನಗಳ ಗಂಗೋತ್ರಿ, ಯಮುನೋತ್ರಿ, ಬದರಿನಾಥ್, ಕೇದಾರನಾಥ್, ದೆಹಲಿ, ಕಾಶಿ,ಗಯಾ, ಪೂರಿಜಗನ್ನಾಥ್, ವೈಷ್ಣೋದೇವಿ.ಶ್ರೀಸುಧಾ ಟ್ರಾವೆಲ್ಸ್ 22429289, 9019301300, 9448119290

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

ಲಖನೌ: ಮಹಿಳಾ ಮ್ಯಾರಥಾನ್‌ಗೆ ಅವಕಾಶ ನೀಡದ ಸರ್ಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

‘ಬುಲ್ಡೋಜರ್‌ನಾಥ ವಿಧ್ವಂಸಕ ಸರ್ಕಾರ’

ಲಖನೌ (ಪಿಟಿಐ): ಲಖನೌನಲ್ಲಿ ಕಾಂಗ್ರೆಸ್ ಪಕ್ಷವು ಭಾನುವಾರ ಆಯೋಜಿಸಲಾಗಿದ್ದ ‘ಲಡಕೀ ಹೂ, ಲಡ್ ಸಕತೀ ಹೂ’ (ನಾನು ಹುಡುಗಿ, ಹೋರಾಡಬಲ್ಲೆ) ಮಹಿಳಾ ಮ್ಯಾರಥಾನ್ ಅನ್ನು ನಡೆಸಲು ಲಖನೌ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ. ಈ ಕ್ರಮದ ವಿರುದ್ಧ ಪ್ರತಿಭಟನೆ ನಡೆಸಿರುವ ಉತ್ತರ ಪ್ರದೇಶ ಕಾಂಗ್ರೆಸ್ ಘಟಕವು, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ‘ಬುಲ್ಡೋಜರ್‌ನಾಥ್’ ಎಂದು ಹೀಯಾಳಿಸಿದೆ.

ಆದರೆ ಝಾನ್ಸಿಯಲ್ಲಿ ಕರೆನೀಡಿದ್ದ ಮ್ಯಾರಥಾನ್‌ನಲ್ಲಿ ಸಾವಿರಾರು ಯುವತಿಯರು ಮತ್ತು ಮಹಿಳೆಯರು ಭಾಗಿಯಾಗಿದ್ದಾರೆ. ಸರ್ಕಾರದ ವಿರುದ್ಧ ಘೋಷಣೆ ಕೂಗಿದ್ದಾರೆ. ಈ ಮ್ಯಾರಥಾನ್‌ನ ವಿಡಿಯೊಗಳನ್ನು ಕಾಂಗ್ರೆಸ್ ಪಕ್ಷವು ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಉತ್ತರ ಪ್ರದೇಶ ಉಸ್ತುವಾರಿಯಾಗಿರುವ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಮಹಿಳಾ ಸಬಲೀಕರಣವನ್ನು ಕೇಂದ್ರವಾಗಿಸಿಕೊಂಡು ರಾಜ್ಯದ ವಿಧಾನಸಭಾ ಚುನಾವಣೆಯ ಪ್ರಚಾರವನ್ನು ಮುನ್ನಡೆಸುತ್ತಿದ್ದಾರೆ. ಒಟ್ಟು ಸ್ಥಾನಗಳಲ್ಲಿ ಮಹಿಳೆಯರಿಗೆ ಶೇ 40ರಷ್ಟು ಟಿಕೆಟ್‌ಗಳನ್ನು ಕಾಂಗ್ರೆಸ್ ಮೀಸಲಿರಿಸಿದೆ. ಇದರ ಭಾಗವಾಗಿ ಪ್ರಿಯಾಂಕಾ ಅವರು, ‘ಲಡಕೀ ಹೂ, ಲಡ್ ಸಕತೀ ಹೂ’ ಎಂಬ ಘೋಷಣೆಯನ್ನು ಮಾಡಿದ್ದರು. ಈ ಘೋಷಣೆಯನ್ನೇ ಈಗ ಪ್ರಚಾರದ ಪ್ರಮುಖ ಅಸ್ತ್ರವಾಗಿ ಕಾಂಗ್ರೆಸ್ ಬಳಸುತ್ತಿದೆ.

ಮಹಿಳಾ ಕೇಂದ್ರಿತ ಪ್ರಚಾರದ ಭಾಗವಾಗಿಯೇ ಲಖನೌ ಮತ್ತು ಝಾನ್ಸಿಯಲ್ಲಿ 5 ಕಿ.ಮೀ.ಗಳ ಮಹಿಳಾ ಮ್ಯಾರಥಾನ್ ಅನ್ನು ಕಾಂಗ್ರೆಸ್ ಪಕ್ಷವು ಭಾನುವಾರ ಆಯೋಜಿಸಿತ್ತು. ಆದರೆ ಲಖನೌನಲ್ಲಿ ಮ್ಯಾರಥಾನ್ ನಡೆಸಲು ಶನಿವಾರ ತಡರಾತ್ರಿ ಅನುಮತಿ ನಿರಾಕರಿಸಲಾಯಿತು. ಇದರ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಲಖನೌ ಪೊಲೀಸ್ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದರು. ಪ್ರತಿಭಟನಾಕಾರರನ್ನು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಲಾಯಿತು.

ಪೊಲೀಸರ ಈ ಕ್ರಮದ ವಿರುದ್ಧ ರಾಜ್ಯ ಕಾಂಗ್ರೆಸ್ ಘಟಕವು ಕಿಡಿಕಾರಿದೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಆಣತಿಯಂತೆಯೇ ಪೊಲೀಸರು ಹೀಗೆ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

‘ಈ ಬುಲ್ಡೋಜರ್‌ನಾಥ್ ನೇತೃತ್ವದ ವಿಧ್ವಂಸಕ ಸರ್ಕಾರವು ಯುವಜನರ ಕನಸುಗಳನ್ನು ಪದೇ ಪದೇ ತುಳಿಯುತ್ತಲೇ ಇದೆ. ಒಮ್ಮೆ ಪ್ರಶ್ನೆ ಪತ್ರಿಕೆ ಸೋರಿಕೆ ಮೂಲಕ, ಇನ್ನೊಮ್ಮೆ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ನಡೆಸದೆ ಇರುವ ಮೂಲಕ, ಮತ್ತೊಮ್ಮೆ ಅವರ ಮೇಲೆ ಬಲ ಪ್ರಯೋಗಿಸುವ ಮೂಲಕ ಯುವಜನರ ಕನಸುಗಳನ್ನು ಹತ್ತಿಕ್ಕುತ್ತಿದೆ. ಈ ಬಾರಿ ಯೋಗಿ ಅವರ ಮಹಿಳಾ ವಿರೋಧಿ ಬುಲ್ಡೋಜರ್, ಈ ಧೈರ್ಯಶಾಲಿ ಹೆಣ್ಣುಮಕ್ಕಳ ಕನಸುಗಳ ಮೇಲೆ ಹರಿದಿದೆ’ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

‘ಯೋಗಿ ಆದಿತ್ಯನಾಥರೇ, ನೀವು ಮಹಿಳೆಯರನ್ನು ನಿಯಂತ್ರಿಸುವ ಮಾತುಗಳನ್ನಾಡುವ ಮೂಲಕ ಮಹಿಳೆಯರ ವಿರುದ್ಧವಿದ್ದೀರಿ. ಈ ಕಾರಣದಿಂದಲೇ ಲಖನೌನಲ್ಲಿ ಮಹಿಳೆಯರು ಭಾಗಿಯಾಗಬೇಕಿದ್ದ ಮ್ಯಾರಥಾನ್ ನಡೆಯಲು ನೀವು ಬಿಡಲಿಲ್ಲ. ಆದರೆ ನಿಮ್ಮ ಈ ದಬ್ಬಾಳಿಕೆಯನ್ನು ಸಹಿಸಿಕೊಳ್ಳುವುದಿಲ್ಲ ಮತ್ತು ತಮ್ಮ ಹಕ್ಕುಗಳಿಗಾಗಿ ಹೋರಾಡುವುದನ್ನು ತಿಳಿದಿದ್ದಾರೆ ಎಂಬ ಸಂದೇಶವನ್ನು ಝಾನ್ಸಿಯ ಯುವತಿಯರು ರವಾನಿಸಿದ್ದಾರೆ’ ಎಂದು ಪ್ರಿಯಾಂಕಾ ಗಾಂಧಿ ಟ್ವೀಟ್ ಮಾಡಿದ್ದಾರೆ.

ಯೋಗಿ ಆದಿತ್ಯನಾಥ ಅವರು ಮಹಿಳೆಯರಿಗೆ ಹೆದರುತ್ತಿದ್ದಾರೆ. ಹೀಗಾಗಿಯೇ ಅವರು ಮ್ಯಾರಥಾನ್‌ಗೆ ಅನುಮತಿ ನೀಡಲಿಲ್ಲ ಎಂದು ಕಾಂಗ್ರೆಸ್ ಲೇವಡಿ ಮಾಡಿದೆ. ಇದರ ಭಾಗವಾಗಿ ಕಾಂಗ್ರೆಸ್ ಸಾಮಾಜಿಕ ಜಾಲತಾಣಗಳಲ್ಲಿ #ladki_se_darta_hai_Yogi ಎಂಬ ಹ್ಯಾಷ್‌ಟ್ಯಾಗ್‌ನಲ್ಲಿ ಪೋಸ್ಟ್ ಮಾಡಿತು. ಈ ಹ್ಯಾಷ್‌ಟ್ಯಾಗ್‌ನಲ್ಲಿ ಭಾನುವಾರ ಕೆಲವು ಗಂಟೆಗಳವರೆಗೆ ಟ್ವಿಟರ್ ಟ್ರೆಂಡ್ ಆಗಿತ್ತು.

> ‘ನಾನು ಹುಡುಗಿ, ಹೋರಾಡಬಲ್ಲೆ’ ಎಂಬ ಘೋಷಣೆ ಇಡೀ ರಾಜ್ಯದಲ್ಲಿ ಮಾರ್ದನಿಸುತ್ತಿದೆ. ಅಧಿಕಾರವನ್ನು ವಶಪಡಿಸಿಕೊಳ್ಳಲು ರಾಜ್ಯದ ನಾರೀಶಕ್ತಿ ಸಿದ್ಧವಾಗಿದೆ
> **ಉತ್ತರ ಪ್ರದೇಶ ಕಾಂಗ್ರೆಸ್ ಘಟಕ**

> ರಾಜ್ಯದ ಮಹಿಳೆಯರು ಈ ಮ್ಯಾರಥಾನ್‌ಗೆ ಮಾತ್ರ ಸೀಮಿತರಾಗುವುದಿಲ್ಲ. ಅವರು ದೇಶದ ರಾಜಕಾರಣವನ್ನು ಬದಲಿಸಲಿದ್ದಾರೆ, ಅದರ ದಿಕ್ಕನ್ನು ಬದಲಿಸಲಿದ್ದಾರೆ
> **ಪ್ರಿಯಾಂಕಾ ಗಾಂಧಿ ವಾದ್ರಾ**, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಪ್ರಜಾ ಮತ — ಜನತಂತ್ರದ ಹಬ್ಬ 2021

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ — ಪ್ರಜಾವಾಣಿ ನೋಡಿಯೊ

ಲಖಿಂಪುರ ಖೇರಿ ಪ್ರಕರಣ ವಿಪಕ್ಷಕ್ಕೆ ಅಸ್ತ್ರ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗಳು ಹತ್ತಿರವಾಗುತ್ತಿರುವ ಈ ಸಮಯದಲ್ಲಿ, ಕೋವಿಡ್–19 ಎರಡನೇ ಅಲೆಯಲ್ಲಿ ಗಂಗಾ ನದಿಯಲ್ಲಿ ಮೃತದೇಹಗಳು ತೇಲಿದ್ದು, ಲಖಿಂಪುರ್ ಖೇರಿಯಲ್ಲಿ ರೈತರ ಮೇಲೆ ಎಸ್‌ಯುವಿ ಹರಿದದ್ದು, ಭಾರಿ ಸುದ್ದಿಯಾದ ಅಪರಾಧ ಪ್ರಕರಣಗಳು ವಿಪಕ್ಷಗಳಿಗೆ ಅಸ್ತ್ರವಾಗಿ ಪರಿಣಮಿಸುತ್ತಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯಕ್ಕೆ ಆಗಮಿಸಿ ದೊಡ್ಡ ಯೋಜನೆಗಳಿಗೆ ಚಾಲನೆ ನೀಡಿರುವುದು ಮತ್ತು ಕಳೆದ ಸರ್ಕಾರಗಳು ರಾಜ್ಯವನ್ನು ನಿರ್ಲಕ್ಷಿಸಿದ್ದವು ಎಂದು ಆರೋಪಿಸುವುದೂ ನಡೆದಿದೆ. ಎಲ್ಲಾ ಪಕ್ಷಗಳ ಪ್ರಚಾರ ರ‍್ಯಾಲಿಗಳಲ್ಲೂ ಜನರು ಕಿಕ್ಕಿರಿದು ಸೇರುತ್ತಿದ್ದಾರೆ. ಕೋವಿಡ್–19ರ ಮೂರನೇ ಅಲೆಯ ಭೀತಿ ಇದ್ದರೂ ರ‍್ಯಾಲಿಗಳಲ್ಲಿ ಕೋವಿಡ್ ಸಂಬಂಧಿ ಮಾರ್ಗಸೂಚಿಗಳನ್ನು ಅನುಸರಿಸಲಾಗುತ್ತಿಲ್ಲ.

ಕೋವಿಡ್ ಎರಡನೇ ಅಲೆ: ಕೋವಿಡ್ ಎರಡನೇ ಅಲೆ ನಿರ್ವಹಿಸುವುದರಲ್ಲಿ ಉತ್ತರ ಪ್ರದೇಶ ಸರ್ಕಾರ ವಿಫಲವಾಗಿದೆ ಎಂಬ ಆರೋಪ ವ್ಯಾಪಕವಾಗಿ ಕೇಳಿ ಬಂತು. ಆಸ್ಪತ್ರೆಗಳಲ್ಲಿ ಹಾಸಿಗೆಗಳಿಗಾಗಿ ಜನರು ಪಟ್ಟ ಪಡಿಪಾಟಲು ವಿಪರೀತವಾಗಿತ್ತು, ಚಿತಾಗಾರಗಳ ಎದುರು ಮೃತದೇಹಗಳು ಸಾಲುಗಟ್ಟಿದ್ದವು. ಗಂಗಾ ನದಿಯಲ್ಲಿ ಮೃತದೇಹಗಳು ತೇಲಿದವು. ಕೆಲ ಬಿಜೆಪಿ ನಾಯಕರೇ ಅವರ ಸರ್ಕಾರವನ್ನು ಟೀಕಿಸಿದರು. ಇದೆಲ್ಲದರಿಂದಾಗಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ವರ್ಚಸ್ಸಿಗೆ ಧಕ್ಕೆ ಆಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕೊರೊನಾ ಸೋಂಕಿನ ಅಲೆ ನಿಧಾನವಾಗಿ ತಗ್ಗುತ್ತಿದ್ದ ವೇಳೆ ಉತ್ತರ ಪ್ರದೇಶದ ಪಂಚಾಯಿತಿ ಚುನಾವಣೆಗಳು ನಡೆದವು. ಶಿಕ್ಷಕರೂ ಸೇರಿ ಇತರ ಸರ್ಕಾರಿ ನೌಕರರನ್ನು ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಅವರಲ್ಲಿ ಹಲವರು ಕೋವಿಡ್‌ನಿಂದ ಮೃತಪಟ್ಟರು.

ಲಖಿಂಪುರ ಖೇರಿ ಪ್ರಕರಣ: ಕೇಂದ್ರದ ಮೂರು ಕೃಷಿ ಕಾನೂನುಗಳ ವಿರುದ್ಧ ರೈತರು ಒಂದು ವರ್ಷಗಳ ಕಾಲ ನಡೆಸಿದ್ದ ಹೋರಾಟದಲ್ಲಿ ರೈತ ನಾಯಕ ರಾಕೇಶ್ ಟಿಕಾಯತ್ ಅವರ ನೇತೃತ್ವದಲ್ಲಿ ಉತ್ತರ ಪ್ರದೇಶದ ಪಶ್ಚಿಮ ಭಾಗದ ರೈತರು ಪಾಲ್ಗೊಂಡು ಹೋರಾಟಕ್ಕೆ ಬಲ ತುಂಬಿದರು.

ಅದೇ ವೇಳೆ, ಲಖಿಂಪುರ ಖೇರಿಯಲ್ಲಿ ಪ್ರತಿಭಟನೆನಿರತ ರೈತರ ಮೇಲೆ ಎಸ್‌ಯುವಿಯನ್ನು ಹರಿಸಲಾಗಿತ್ತು. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರನ್ನು ಈ ವಾಹನ ಚಾಲನೆ ಮಾಡಿದ್ದ ಆರೋಪದ ಮೇಲೆ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣದ ಕಾರಣ ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ವಿಪಕ್ಷಗಳು ಆಗ್ರಹಿಸುತ್ತಿವೆ.

ಅದಲ್ಲದೇ, ಸಮಾಜವಾದಿ ಪಕ್ಷವು ಹಲವಾರು ಸ್ಥಳೀಯ ಪಕ್ಷಗಳ ಜೊತೆ ಮೈತ್ರಿ ಮಾಡಿಕೊಂಡಿದೆ. ಇದು ಕೂಡಾ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚಿನ ಸ್ಪರ್ಧೆ ಒಡ್ಡಲಿದೆ ಎನ್ನಲಾಗಿದೆ. ಗೋರಖಪುರದಲ್ಲಿ ಉದ್ಯಮಿಯೊಬ್ಬರು ಮೃತಪಟ್ಟ ಪ್ರಕರಣ ಸೇರಿ ಹಲವಾರು ಅಪರಾಧ ಪ್ರಕರಣಗಳು ಈಗ ಮುನ್ನೆಲೆಗೆ ಬಂದಿವೆ.

‘ಟಿಎಂಸಿ, ಎಎಪಿಯಿಂದ ಬಿಜೆಪಿಯೇತರ ಮತ ವಿಭಜನೆ’


ಪಿ. ಚಿದಂಬರಂ

ನವದೆಹಲಿ (ಪಿಟಿಐ): ಬಿಜೆಪಿಯೇತರ ಮತಗಳನ್ನು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಆಮ್ ಆದ್ಮಿ ಪಕ್ಷ (ಎಎಪಿ) ಒಡೆಯುತ್ತಿವೆ ಎಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರು ಆರೋಪಿಸಿದರು. ಬಿಜೆಪಿಯನ್ನು ಸೋಲಿಸುವ ಸಾಮರ್ಥ್ಯ ಇರುವುದು ಕಾಂಗ್ರೆಸ್‌ಗೆ ಮಾತ್ರ ಎಂದರು.

ಗೋವಾ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್‌ನ ಹಿರಿಯ ಚುನಾವಣಾ ವೀಕ್ಷಕರಾಗಿರುವ ಅವರು, ಪಕ್ಷಕ್ಕೆ ಮತ್ತು ಮತದಾರರಿಗೆ ನಿಷ್ಠರಾಗಿರುವುದೇ ಅಭ್ಯರ್ಥಿಗಳ ಆಯ್ಕೆಗೆ ಇರುವ ಮೊದಲ ಮಾನದಂಡ. ಚುನಾವಣೆಯಲ್ಲಿ ಗೆದ್ದ ಬಳಿಕ ಅಭ್ಯರ್ಥಿಗಳು ಪಕ್ಷಕ್ಕೆ ಮತ್ತು ಮತದಾರರಿಗೆ ನಿಷ್ಠರಾಗಿ ಇರುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಶಾಸಕ ಅಲೆಕ್ಸೊ ರೆಜಿನಾಲ್ಡೊ ಲೌರೆಂಕೊ ಶಾಸನಸಭೆಗೆ ರಾಜೀನಾಮೆ ನೀಡಿ ಟಿಎಂಸಿ ಸೇರಿದ ಹಿನ್ನೆಲೆಯಲ್ಲಿ ಅವರು ಈ ಮಾತುಗಳನ್ನಾಡಿದರು.

ಟಿಎಂಸಿ ಪಕ್ಷವು ಬಿಜೆಪಿಗೆ ಸಹಾಯ ಮಾಡುತ್ತಿದೆ ಎಂದು ನಿಮಗೆ ಅನಿಸುತ್ತಿದೆಯಾ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಬೇರೆ ಪಕ್ಷಗಳ ಉದ್ದೇಶಗಳ ಬಗ್ಗೆ ನಾನು ಹೇಳಿಕೆ ನೀಡುವುದಿಲ್ಲ. 2022ರ ಗೋವಾ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಸ್ಪರ್ಧೆ ನಡೆಯಲಿದೆ. ಅದರಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತದೊಂದಿಗೆ ಗೆಲ್ಲುತ್ತದೆ’ ಎಂದರು. 40 ಸದಸ್ಯರ ಗೋವಾ ವಿಧಾನಸಭೆಯಲ್ಲಿ ಸದ್ಯ ಇಬ್ಬರು ಕಾಂಗ್ರೆಸ್ ಶಾಸಕರಿದ್ದಾರೆ.

ಶಬರಿಮಲೆಯಲ್ಲಿ ಮಂಡಲ ಪೂಜೆ ಸಂಪನ್ನ

ಶಬರಿಮಲೆ, ಕೇರಳ (ಪಿಟಿಐ): ನಲ್ವತ್ತೊಂದು ದಿನಗಳ ಮೊದಲ ಹಂತದ ಶಬರಿಮಲೆ ಯಾತ್ರೆಯ ಕೊನೆಯ ಕಾರ್ಯಕ್ರಮವಾದ ಮಂಡಲ ಪೂಜೆಯನ್ನು ಭಾನುವಾರ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಕೋವಿಡ್ ಮಾರ್ಗಸೂಚಿಗಳನ್ವಯ ಆರಂಭವಾದ ಪೂಜೆಯಲ್ಲಿ ಭಾಗವಹಿಸಿದ್ದ ಸೀಮಿತ ಸಂಖ್ಯೆಯ ಭಕ್ತರು ‘ಸ್ವಾಮಿಯೇ ಶರಣಂ ಅಯ್ಯಪ್ಪ’ ಎಂದು ಘೋಷಣೆಗಳನ್ನು ಕೂಗಿದರು. ಕಲಭ ಅಭಿಷೇಕ ಮತ್ತು ಕಲಶ ಅಭಿಷೇಕದಂತಹ ಧಾರ್ಮಿಕ ವಿಧಿವಿಧಾನಗಳಿಗೆ ಜನರು ಸಾಕ್ಷಿಯಾದರು. ಈ ವೇಳೆ ಅಯ್ಯಪ್ಪ ಸ್ವಾಮಿಯ ಸ್ವರ್ಣ ವೇಷಭೂಷಣಗಳ ಅಲಂಕಾರವಾದ ತಂಗ ಅಂಗಿಯನ್ನು ಕಣ್ತುಂಬಿಕೊಂಡರು. ಅರನ್ಮುಳದ ಶ್ರೀ ಪಾರ್ಥಸಾರಥಿ ದೇವಸ್ಥಾನದಿಂದ ತಂಗ ಅಂಗಿಯನ್ನು ಶನಿವಾರ ಸಂಜೆ ಮೆರವಣಿಗೆಯ ಮೂಲಕ ಇಲ್ಲಿಗೆ ತರಲಾಗಿತ್ತು.

ಜನವರಿ 14ರ ಮಕರ ಸಂಕ್ರಾತಿ ನಿಮಿತ್ತ ದೇವಸ್ಥಾನವು ಡಿಸೆಂಬರ್ 30ರಂದು ಪುನಃ ತೆರೆಯಲಿದೆ.

ಶಬರಿಮಲೆ ಅಯ್ಯಪ್ಪ ದೇವಸ್ಥಾನಕ್ಕೆ ಮಂಡಲ ಪೂಜೆ ನೆರವೇರಿಸಲು ಬಂದಿದ್ದ ಭಕ್ತರು –ಪಿಟಿಐ ಚಿತ್ರ

ರಾಷ್ಟ್ರೀಯ ಪುಸ್ತಕ ಟ್ರಸ್ಟ್ ಸ್ಪರ್ಧೆ: ಕನ್ನಡಿಗರಿಬ್ಬರು ಆಯ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಪಿಎಂ–ಯುವ (ಯಂಗ್ ಅಪ್ ಕಮಿಂಗ್ ವರ್ಸಟೈಲ್ ಆಥರ್ ಸ್ಕೀಮ್) ಮಾರ್ಗದರ್ಶನ ಯೋಜನೆ ಅಡಿ ‘ಭಾರತದ ರಾಷ್ಟ್ರೀಯ ಚಳವಳಿ’ ವಿಷಯದ ಕುರಿತು ಪುಸ್ತಕ ರಚನೆ ಸ್ಪರ್ಧೆ ಆಯೋಜಿಸಲಾಗಿತ್ತು. 75 ಬರಹಗಾರರು ಸ್ಪರ್ಧೆಯಲ್ಲಿ ಆಯ್ಕೆ ಆಗಿದ್ದಾರೆ. ಇದರಲ್ಲಿ ಇಬ್ಬರು ಕನ್ನಡಿಗರು ಸೇರಿದ್ದಾರೆ.

ಜಯಸಿಂಹ ಕೆ.ಆರ್ ಮತ್ತು ತೇಜಸ್ ಎಚ್. ಬದಲ ಅವರು ಕನ್ನಡದಲ್ಲಿ ಪುಸ್ತಕ ಬರೆದ ಸ್ಪರ್ಧಿಗಳು. 30 ವರ್ಷ ವಯಸ್ಸಿಗಿಂತ ಕೆಳಗಿರುವವರಿಗಾಗಿ, ಅಖಿಲ ಭಾರತ ಮಟ್ಟದಲ್ಲಿ ನ್ಯಾಷನಲ್ ಬುಕ್ ಟ್ರಸ್ಟ್ (ಎನ್‌ಎಂಐ) ಈ ಸ್ಪರ್ಧೆ ಆಯೋಜಿಸಿತ್ತು. ಮೈಗೌ ಮತ್ತು ನ್ಯಾಷನಲ್ ಬುಕ್ ಟ್ರಸ್ಟ್ ವೇದಿಕೆಗಳ ಮೂಲಕ ಸ್ಪರ್ಧೆ ನಡೆಸಲಾಗಿತ್ತು. 16,000 ಸ್ಪರ್ಧಿಗಳು ಭಾಗವಹಿಸಿದ್ದರು. 22 ಭಾಷೆಗಳು ಮತ್ತು ಇಂಗ್ಲಿಷ್‌ನಲ್ಲಿ ಪುಸ್ತಕ ಬರೆದಿದ್ದರು. ಮೂರು ಹಂತಗಳಲ್ಲಿ ಪುಸ್ತಕಗಳನ್ನು ಪರಿಶೀಲಿಸಲಾಗಿತ್ತು.

ಆಯ್ಕೆ ಆಗಿರುವ 75 ಲೇಖಕರಲ್ಲಿ 38 ಜನ ಪುರುಷರು ಮತ್ತು 37 ಜನರು ಮಹಿಳೆಯರು ಇದ್ದಾರೆ. 16 ಬರಹಗಾರರು 15ರಿಂದ 20 ವರ್ಷ ವಯೋಮಾನದವರು.

ಪ್ರವಾಸಿಗರ ದಂಡು ಕ್ರಿಸ್‌ಮಸ್ ರಜೆಯ ಪ್ರಯುಕ್ತ ಅಪಾರ ಸಂಖ್ಯೆಯಲ್ಲಿ ಜನರು ಪ್ರವಾಸಕ್ಕೆ ತೆರಳಿದ್ದು, ವಿಶ್ವಪ್ರಸಿದ್ಧ ತಾಜ್‌ಮಹಲ್‌ನಲ್ಲಿ ಭಾನುವಾರ ಭಾರಿ ಜನಸ್ತೋಮ ಕಂಡುಬಂತು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಸಿಆರ್‌ಪಿಎಫ್ ಸಿಬ್ಬಂದಿಯಿಂದ ಸಹೋದ್ಯೋಗಿ ಹತ್ಯೆ

ಹೈದರಾಬಾದ್ (ಪಿಟಿಐ): ಕರ್ತವ್ಯ ಹಂಚಿಕೆ ವಿಚಾರವಾಗಿ ಸಿಆರ್‌ಪಿಎಫ್ ಸಬ್ ಇನ್‌ಸ್ಪೆಕ್ಟರ್ ಒಬ್ಬರನ್ನು ಸಹೋದ್ಯೋಗಿಯೇ ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ಛತ್ತೀಸ್‌ಗಡದ ಗಡಿಗೆ ಹೊಂದಿಕೊಂಡಿರುವ ತೆಲಂಗಾಣದ ಮುಲುಗು ಜಿಲ್ಲೆಯ ವೆಂಕಟಾಪುರ ಎಂಬಲ್ಲಿ ಭಾನುವಾರ ಬೆಳಿಗ್ಗೆ ನಡೆದಿದೆ.

ಉಮೇಶ್ ಚಂದ್ರ (45) ಮೃತ ಸಬ್ ಇನ್‌ಸ್ಪೆಕ್ಟರ್.

ಸಿಆರ್‌ಪಿಎಫ್ ಹೆಡ್‌ಕಾನ್‌ಸ್ಟೆಬಲ್ ಸ್ಟಿಫನ್ ಎಂಬುವರು ಕರ್ತವ್ಯ ಹಂಚಿಕೆ ವಿಷಯವಾಗಿ ಉಮೇಶ್ ಚಂದ್ರ ಅವರ ಜೊತೆ ಜಗಳವಾಡಿ ಸ್ವಯಂಚಾಲಿತ ಬಂದೂಕಿನಿಂದ ಉಮೇಶ್ ಚಂದ್ರ ಅವರ ಹೊಟ್ಟೆ ಹಾಗೂ ತಲೆಗೆ ಗುಂಡಿಕ್ಕಿದ್ದಾರೆ. ಇದರಿಂದ ಉಮೇಶ್ ಚಂದ್ರ ಅವರು ಸ್ಥಳದಲ್ಲೇ ಅಸುನೀಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಲ್ಲದೇ ಸ್ಟಿಫನ್ ಕೂಡ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದ. ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದ್ದು, ಅವರ ಪರಿಸ್ಥಿತಿ ಗಂಭೀರವಾಗಿದೆ. ಘಟನೆ ಬೆಳಿಗ್ಗೆ 8.30 ರ ಸುಮಾರು ನಡೆದಿದ್ದು ತನಿಖೆ ಕೈಗೆತ್ತಿಕೊಳ್ಳಲಾಗಿದೆ ಎಂದು ಮುಲಗು ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

‘ಕೃಷಿ ಕಾಯ್ದೆಗಳನ್ನು ಮತ್ತೆ ತರುವ ಯೋಜನೆಯಿಲ್ಲ’

ಮೊರೆನಾ, ಮಧ್ಯಪ್ರದೇಶ (ಪಿಟಿಐ): ‘ಕೇಂದ್ರ ಸರ್ಕಾರ ಹಿಂಪಡೆದಿರುವ ಮೂರು ಕೃಷಿ ಕಾಯ್ದೆಗಳನ್ನು ಮತ್ತೆ ಪರಿಚಯಿಸುವ ಯಾವುದೇ ಯೋಜನೆಯಿಲ್ಲ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಭಾನುವಾರ ಸ್ಪಷ್ಟಪಡಿಸಿದ್ದಾರೆ.

ಮುಂಬರುವ ವಿಧಾನಸಭೆ ಚುನಾವಣೆಯ ಬಳಿಕ ಕೃಷಿ ಕಾಯ್ದೆಗಳನ್ನು ಮತ್ತೆ ಜಾರಿಗೆ ತರಲು ಕೇಂದ್ರ ಸರ್ಕಾರ ಷಡ್ಯಂತ್ರ ರೂಪಿಸುತ್ತಿದೆ’ ಎಂದು ಕಾಂಗ್ರೆಸ್ ಆರೋಪಿಸಿದ ಬೆನ್ನಿಗೇ ಅವರು ಈ ಹೇಳಿಕೆ ನೀಡಿದ್ದಾರೆ.

ಮಹಾರಾಷ್ಟ್ರದ ನಾಗ್ಪುರದ ಕಾರ್ಯ ಕ್ರಮವೊಂದರಲ್ಲಿ ಮಾತನಾಡಿದ್ದ ತೋಮರ್ ಅವರು, ‘ಸರ್ಕಾರ ಹಿಂದಕ್ಕೆ ಹೆಜ್ಜೆ ಇಟ್ಟಿದೆ, ಮತ್ತೆ ಮುಂದಡಿ ಇಡಲಿದೆ’ ಎಂದು ಹೇಳಿದ್ದರು. ನಂತರ ಕಾಂಗ್ರೆಸ್ ಈ ಆರೋಪ ಮಾಡಿತ್ತು.

‘ಈಗ ಹಿಂಪಡೆದಿರುವ ಸುಧಾರಿತ ಕೃಷಿ ಕಾಯ್ದೆಗಳನ್ನು ಮತ್ತೆ ಜಾರಿಗೊಳಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ. ಅಗ್ಗದ ರಾಜಕೀಯದಿಂದ ತೃಪ್ತಿ ಹೊಂದುವ ಜನರು ರಾಹುಲ್ ಗಾಂಧಿಯನ್ನು ಮೆಚ್ಚುತ್ತಾರೆ. ಇಂತಹ ಜನರು ನನ್ನ ಹೇಳಿಕೆಯನ್ನು ತಿರುಚುವ ಮೂಲಕ ಜನರನ್ನು ತಪ್ಪು ದಾರಿಗೆ ಎಳೆಯುವಲ್ಲಿ ವಿಫಲರಾಗಿದ್ದಾರೆ’ ಎಂದು ಮೊರೆನಾ ದಲ್ಲಿ ಭಾನುವಾರ ಸುದ್ದಿಗಾರರು ಕಾಂಗ್ರೆಸ್ ಆರೋಪದ ಬಗ್ಗೆ ಕೇಳಿದಾಗ ಅವರು ಪ್ರತಿಕ್ರಿಯಿಸಿದರು.

ದತ್ತಾಂಶ ಕೋಶ: ಸಮಾಲೋಚನೆ

ನವದೆಹಲಿ (ಪಿಟಿಐ): ಸಹಕಾರ ಸಂಘಗಳ ರಾಷ್ಟ್ರೀಯ ದತ್ತಾಂಶ ಕೋಶ ರೂಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಸಮಾಲೋಚನೆ ಆರಂಭಿಸಿದೆ. ಆರ್‌ಬಿಐ, ನಬಾರ್ಡ್ ಪ್ರತಿನಿಧಿಗಳು ಆ ಸಭೆಯಲ್ಲಿ ಪಾಲ್ಗೊಂಡಿದ್ದರು. ದತ್ತಾಂಶ ಕೋಶ ರೂಪಿಸುವುದರಿಂದ ಕೇಂದ್ರ, ರಾಜ್ಯ ಸರ್ಕಾರಗಳಿಗೆ ಯೋಜನೆ ರೂಪಿಸುವುದಕ್ಕೆ ಸಹಕಾರಿ ಆಗಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

5 ಚೀನಿ ಉತ್ಪನ್ನಗಳಿಗೆ ಹೆಚ್ಚುವರಿ ತೆರಿಗೆ

ನವದೆಹಲಿ (ಪಿಟಿಐ): ಚೀನಾದಿಂದ ಅಗ್ಗದ ವಸ್ತುಗಳ ಆಮದು ಮತ್ತು ಅವುಗಳಿಂದ ಸ್ಥಳೀಯ ಉತ್ಪಾದಕರ ಮೇಲೆ ಆಗುವ ದುಷ್ಪರಿಣಾಮ ತಡೆಯುವ ಉದ್ದೇಶದಿಂದ ಒಟ್ಟು ಐದು ಉತ್ಪನ್ನಗಳ ಮೇಲೆ ಕೇಂದ್ರ ಸರ್ಕಾರವು ಐದು ವರ್ಷಗಳ ಅವಧಿಗೆ ಹೆಚ್ಚುವರಿ ತೆರಿಗೆ ವಿಧಿಸಿದೆ.

ಅಲ್ಯುಮಿನಿಯಂನ ಕೆಲವು ಉತ್ಪನ್ನಗಳು, ಸೋಡಿಯಂ ಹೈಡ್ರೊಸಲ್ಫೈಟ್ (ಬಣ್ಣ ತಯಾರಿಕಾ ಉದ್ದಿಮೆಗಳಲ್ಲಿ ಬಳಸಲಾಗುತ್ತದೆ), ಸಿಲಿಕಾನ್ ಸೀಲೆಂಟ್ (ಉಷ್ಣ ವಿದ್ಯುತ್ ಉಪಕರಣಗಳಲ್ಲಿ ಬಳಕೆಯಾಗುತ್ತದೆ), ರೆಫ್ರಿಜರೇಟರ್ ತಯಾರಿಕಾ ಉದ್ದಿಮೆಗಳು ಬಳಸುವ ಹೈಡ್ರೊಫ್ಲೂರೊಕಾರ್ಬನ್‌ನ ಎರಡು ಬಗೆಗಳ ಮೇಲೆ ಈ ತೆರಿಗೆ ವಿಧಿಸಲಾಗಿದೆ ಎಂದು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿ (ಸಿಬಿಐಸಿ) ಹೊರಡಿಸಿದ ಎರಡು ಪ್ರತ್ಯೇಕ ಅಧಿಸೂಚನೆಗಳಲ್ಲಿ ಹೇಳಲಾಗಿದೆ.

ವಾಣಿಜ್ಯ ಸಚಿವಾಲಯದ ತನಿಖಾ ವಿಭಾಗವಾಗಿರುವ ವಾಣಿಜ್ಯ ಪರಿಹಾರಗಳ ಮಹಾನಿರ್ದೇಶನಾಲಯ ನೀಡಿದ ಶಿಫಾರಸುಗಳಿಗೆ ಅನುಗುಣವಾಗಿ ಈ ತೆರಿಗೆ ವಿಧಿಸಲಾಗಿದೆ. ಈ ಉತ್ಪನ್ನಗಳನ್ನು ಅವುಗಳ ಸಹಜ ಬೆಲೆಗಿಂತ ಕಡಿಮೆ ಬೆಲೆಗೆ ಭಾರತಕ್ಕೆ ರಫ್ತು ಮಾಡಲಾಗುತ್ತಿರುವುದು ಮಹಾನಿರ್ದೇಶನಾಲಯ ನಡೆಸಿದ ತನಿಖೆಯಲ್ಲಿ ಗೊತ್ತಾಗಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ರಾಮನಗರ ರೇಷ್ಮೆ

ಮಿಶ್ರತಳಿ	₹400-698
ದ್ವಿತಳಿ	₹126-821

ಜಿಎಸ್‌ಟಿ: ಜ.1ರಿಂದ ಈ ಬದಲಾವಣೆಗಳು ಜಾರಿಗೆ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಮೂಲಕ ಆಗುವ ತೆರಿಗೆ ಸಂಗ್ರಹ ಹೆಚ್ಚಿಸಲು ಮತ್ತು ತೆರಿಗೆ ಸೋರಿಕೆಯನ್ನು ತಡೆಯುವ ಉದ್ದೇಶದಿಂದ ಜಿಎಸ್‌ಟಿ ಮಂಡಳಿಯು ಆಗಾಗ್ಗೆ ನಿಯಮದಲ್ಲಿ ಬದಲಾವಣೆಗಳನ್ನು ತರುತ್ತಿರುತ್ತದೆ. ಈ ಹಾದಿಯಲ್ಲಿ, ಕೆಲವು ಸರಕುಗಳ ತೆರಿಗೆ ದರ ಹಾಗೂ ರಿಟರ್ನ್ಸ್ ಸಲ್ಲಿಕೆ ನಿಯಮದಲ್ಲಿ ಒಂದಿಷ್ಟು ಬದಲಾವಣೆಗಳನ್ನು ತರಲಾಗಿದೆ. ಈ ಬದಲಾವಣೆಗಳು ಜನವರಿ1ರಿಂದ ಜಾರಿಗೆ ಬರಲಿವೆ. ಈ ಕುರಿತು ಸಂಕ್ಷಿಪ್ತ ವಿವರ ಇಲ್ಲಿದೆ.

5%	ಇ–ಕಾಮರ್ಸ್ ವೇದಿಕೆ (ಆ್ಯಪ್) ಮೂಲಕ ಆಟೊ ಬುಕ್ ಮಾಡಿದರೆ ಪಾವತಿಸಬೇಕಾದ ಜಿಎಸ್‌ಟಿ. ಆಫ್‌ಲೈನ್ ಮೂಲಕ ಪಡೆಯುವ ಆಟೊ ಸೇವೆಗೆ ತೆರಿಗೆ ಇಲ್ಲ
5%	ಸ್ವಿಗ್ಗಿ, ಜೊಮ್ಯಾಟೊದಂತಹ ಕಂಪನಿಗಳು ತಮ್ಮ ಸೇವೆಗೆ ಪಾವತಿಸಬೇಕಿರುವ ಜಿಎಸ್‌ಟಿ. ಸದ್ಯ ರೆಸ್ಟೋರೆಂಟ್‌ಗಳೇ ಈ ತೆರಿಗೆ ಪಾವತಿಸುತ್ತಿವೆ. ಗ್ರಾಹಕರಿಗಿಲ್ಲ ಹೊರೆ
12%	ಪಾದರಕ್ಷೆಗಳ ಮೇಲಿನ ಜಿಎಸ್‌ಟಿ. ಪಾದರಕ್ಷೆಯ ಬೆಲೆ ಎಷ್ಟೇ ಇದ್ದರೂ ಪಾವತಿಸಬೇಕಿರುವ ಜಿಎಸ್‌ಟಿ ಇಷ್ಟು.
12%	ಸಿದ್ಧ ಉಡುಪು ಒಳಗೊಂಡು ಜವಳಿ, ಮೇಲಿನ ಜಿಎಸ್‌ಟಿ (ಹತ್ತಿ ಬಟ್ಟೆ ಹೊರತುಪಡಿಸಿ)

- ಜಿಎಸ್‌ಟಿ ಮರುಪಾವತಿಗೆ ಆಧಾರ್ ದೃಢೀಕರಣ ಕಡ್ಡಾಯ
- ಹಿಂದಿನ ಒಂದು ತಿಂಗಳ ಜಿಎಸ್‌ಟಿಆರ್–3ಬಿ ಸಲ್ಲಿಸದೇ ಇದ್ದರೆ ಜಿಎಸ್‌ಟಿಆರ್–1 ಸಲ್ಲಿಕೆಗೆ ತಡೆ
- ತೆರಿಗೆ ಬಾಕಿ ವಸೂಲಿಗೆ ಶೋಕಾಸ್ ನೋಟಿಸ್ ನೀಡದೆಯೂ ತೆರಿಗೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಬಹುದು

ಆರ್‌ಬಿಐ ರಿಟೇಲ್ ಡೈರೆಕ್ಟ್: ಹೂಡಿಕೆ ಹೇಗೆ?

ಹಣಕಾಸು ಸಾಕ್ಷರತೆ
ಪ್ರಮೋದ್ ಬಿ.ಪಿ.

ಸಣ್ಣ ಹೂಡಿಕೆದಾರರು ಸರ್ಕಾರಿ ಬಾಂಡ್‌ಗಳನ್ನು (ಸಾಲಪತ್ರ) ನೇರವಾಗಿ ಖರೀದಿಸಲು ಮತ್ತು ಮಾರಾಟ ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಚೆಗೆ ಅವಕಾಶ ಕಲ್ಪಿಸಿದೆ. ಸರ್ಕಾರಿ ಸಾಲಪತ್ರಗಳ ಮಾರುಕಟ್ಟೆಯಲ್ಲಿ ನೇರವಾಗಿ ಹೂಡಿಕೆ ಮಾಡುವುದನ್ನು ಪ್ರೋತ್ಸಾಹಿಸಲು ಈ ಕ್ರಮ. ಆರ್‌ಬಿಐನ ರಿಟೇಲ್ ಡೈರೆಕ್ಟ್ ಹೂಡಿಕೆ ಹೇಗೆ, ಅನುಕೂಲಗಳೇನು, ಮಿತಿಗಳೇನು, ಯಾರಿಗೆ ಈ ಹೂಡಿಕೆ ಸೂಕ್ತ ಎನ್ನುವ ಮಾಹಿತಿ ಇಲ್ಲಿದೆ.

ಏನಿವು ಸರ್ಕಾರಿ ಸಾಲಪತ್ರಗಳು?: ಸರ್ಕಾರದ ವಿವಿಧ ಕೆಲಸಗಳಿಗೆ ಹಣಕಾಸಿನ ಅಗತ್ಯ ಇರುತ್ತದೆ. ಇಂತಹ ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ಸರ್ಕಾರ ಹೊರಡಿಸುವ ಪತ್ರಗಳೇ ಸಾಲಪತ್ರಗಳು ಅಥವಾ ಗವರ್ನಮೆಂಟ್ ಸೆಕ್ಯೂರಿಟಿಸ್. ಸರ್ಕಾರದಿಂದ ಸಾಲಪತ್ರಗಳನ್ನು ಖರೀದಿಸಿದವರಿಗೆ ನಿಯಮಿತವಾಗಿ ಬಡ್ಡಿ ಸಿಗುತ್ತದೆ. ಮೆಚ್ಯೂರಿಟಿ ಅವಧಿ ಬಳಿಕ ಹೂಡಿಕೆ ಮೊತ್ತ ವಾಪಸ್ ಸಿಗುತ್ತದೆ. ಸರಳವಾಗಿ ಹೇಳುವುದಾದರೆ ಕೇಂದ್ರ ಸರ್ಕಾರದ ಪರವಾಗಿ ಆರ್‌ಬಿಐ ವಿತರಿಸುವ ಬಾಂಡ್‌ಗಳನ್ನು ಸಾಲಪತ್ರಗಳು ಎನ್ನಬಹುದು. ರಾಜ್ಯ ಸರ್ಕಾರಗಳು ಕೂಡ ಈ ರೀತಿಯ ಬಾಂಡ್ಗಳನ್ನು ನೀಡಿ ಹಣ ಸಂಗ್ರಹಿಸಲು ಅವಕಾಶವಿದೆ.

ಆರ್‌ಬಿಐ ರಿಟೇಲ್ ಡೈರೆಕ್ಟ್‌ನಿಂದ ಯಾವ ಹೂಡಿಕೆ ಮಾಡಬಹುದು?: ಆರ್‌ಬಿಐ ರಿಟೇಲ್ ಡೈರೆಕ್ಟ್‌ನಿಂದ ಹೂಡಿಕೆದಾರರು ಪ್ರಮುಖವಾಗಿ ನಾಲ್ಕು ರೀತಿಯ ಹೂಡಿಕೆ ಉತ್ಪನ್ನಗಳನ್ನು ಖರೀದಿಸಬಹುದು. ಕೇಂದ್ರ ಸರ್ಕಾರದ 91ರಿಂದ 364 ದಿನಗಳ ಅವಧಿಯ ಟ್ರೆಷರಿ ಬಿಲ್‌ಗಳಲ್ಲಿ ಹೂಡಿಕೆ ಮಾಡಬಹುದು. ಕೇಂದ್ರ ಸರ್ಕಾರದ ದೀರ್ಘಾವಧಿ, ಅಂದರೆ 1 ವರ್ಷದಿಂದ 40 ವರ್ಷಗಳ ಅವಧಿಯ, ಬಾಂಡ್‌ಗಳಲ್ಲಿ ಹೂಡಿಕೆ ಸಾಧ್ಯ. ರಾಜ್ಯ ಸರ್ಕಾರಗಳು ವಿತರಿಸುವ 10 ವರ್ಷಗಳ ಬಾಂಡ್‌ಗಳಲ್ಲಿಯೂ ಹೂಡಿಕೆಗೆ ಅವಕಾಶವಿದೆ. ಇವಲ್ಲದೆ ಚಿನ್ನದ ಬಾಂಡ್‌ಗಳಲ್ಲಿಯೂ ಹಣ ತೊಡಗಿಸಬಹುದು.

ಹೂಡಿಕೆ ಅನುಕೂಲಗಳು: ಸರ್ಕಾರದ ಸಾಲಪತ್ರಗಳಲ್ಲಿ ಹೂಡಿಕೆ ಮಾಡಿದಾಗ ರಿಸ್ಕ್ ಬಹಳ ಕಡಿಮೆಯಿದ್ದು ದೀರ್ಘಾವಧಿಯಲ್ಲಿ ಒಳ್ಳೆಯ ಲಾಭಾಂಶ ಗಳಿಸಲು ಸಾಧ್ಯವಿದೆ. ಹಾಗಾಗಿ ಕಡಿಮೆ ರಿಸ್ಕ್ ಇರಬೇಕು, ಒಳ್ಳೆಯ ಲಾಭಾಂಶವೂ ಸಿಗಬೇಕು ಎನ್ನುವವರಿಗೆ ಈ ಹೂಡಿಕೆ ಉತ್ಪನ್ನಗಳು ಒಳ್ಳೆಯ ಆಯ್ಕೆ. ಮುಕ್ತ ಮಾರುಕಟ್ಟೆಯಲ್ಲೂ ಈ ಹೂಡಿಕೆಗಳು ಚಲಾವಣೆಯಲ್ಲಿರುವುದರಿಂದ ನಗದೀಕರಣ ಅವಕಾಶವೂ ಇದೆ. ಹೂಡಿಕೆ ವೈವಿಧ್ಯತೆ ಕಾಯ್ದುಕೊಳ್ಳಲು ಸರ್ಕಾರಿ ಸಾಲಪತ್ರಗಳು ಒಳ್ಳೆಯ ಆಯ್ಕೆ.

ಆರ್‌ಡಿಜಿ ಖಾತೆಯ ಮೂಲಕವೇ ಏಕೆ?: ಆರ್‌ಬಿಐನ ರಿಟೇಲ್ ಡೈರೆಕ್ಟ್ ಗಿಲ್ಟ್ (ಆರ್‌ಡಿಜಿ) ಖಾತೆಯ ಮೂಲಕ ಖರೀದಿಸಿದರೆ ಯಾವುದೇ ಶುಲ್ಕ ಅಥವಾ ಬ್ರೋಕರೇಜ್ ಕಮಿಷನ್ ಕೊಡಬೇಕಿಲ್ಲ. ಅಲ್ಲದೆ, ಕೇವಲ ₹ 10 ಸಾವಿರದಿಂದ ಹೂಡಿಕೆ ಸಾಧ್ಯ. ಒಂದೇ ಒಂದು ಗ್ರಾಂ ಚಿನ್ನದ ಮೇಲೆ ಕೂಡ ಚಿನ್ನದ ಬಾಂಡ್‌ಗಳ ಮೂಲಕ ಹೂಡಿಕೆ ಮಾಡಬಹುದು. ನಿಮಗೆ ಬೇಕಾದಾಗ ಚಿನ್ನದ ಬಾಂಡ್ ಖರೀದಿಸಲು ಸಾಧ್ಯವಿದೆ.

ಹೂಡಿಕೆ ಎಷ್ಟು ಸುರಕ್ಷಿತ?: ಈ ಹೂಡಿಕೆಯಲ್ಲಿ ಹೆಚ್ಚು ರಿಸ್ಕ್ ಇಲ್ಲವಾದರೂ ಕೆಲವು ಮಿತಿಗಳಿವೆ. ಬಡ್ಡಿ ದರ ವ್ಯತ್ಯಾಸ, ಬೆಲೆ ಏರಿಕೆ, ಮಾರುಕಟ್ಟೆಯಲ್ಲಿ ನಗದು ಲಭ್ಯತೆ, ಆರ್‌ಬಿಐ ಹಣಕಾಸು ನೀತಿ ಹೀಗೆ ಹಲವು ಅಂಶಗಳು ಸಾಲಪತ್ರಗಳಲ್ಲಿನ ಹೂಡಿಕೆ ಲಾಭಾಂಶವನ್ನು ನಿರ್ಧರಿಸುತ್ತವೆ. ಸಾಮಾನ್ಯವಾಗಿ ಬಡ್ಡಿ ದರ ಜಾಸ್ತಿಯಾದಾಗ ಬಾಂಡ್ ಗಳಿಕೆ ಇಳಿಕೆಯಾಗುತ್ತದೆ. ಬಡ್ಡಿ ದರ ಇಳಿಕೆಯಾದಾಗ ಬಾಂಡ್ ಗಳಿಕೆ ಹೆಚ್ಚಾಗುತ್ತದೆ. ವಿಚಿತ್ರ ಅನಿಸಿದರೂ ಇದು ಕೆಲಸ ಮಾಡುವುದು ಹೀಗೆಯೇ.

ಬಡ್ಡಿ ದರ ಹೆಚ್ಚಾದಾಗ ಹೊಸ ಬಾಂಡ್‌ಗಳನ್ನು ಹೆಚ್ಚಿನ ಬಡ್ಡಿ ದರಕ್ಕೆ ಬಿಡುಗಡೆ ಮಾಡಲಾಗುತ್ತದೆ. ಹೊಸ ಬಾಂಡ್‌ಗಳಿಂದ ಹೂಡಿಕೆದಾರರಿಗೆ ಹೆಚ್ಚಿನ ಲಾಭ ಸಿಗುತ್ತದೆ. ಆದರೆ ಈಗಾಗಲೇ ಹಳೆಯ ಬಾಂಡ್ ಖರೀದಿಸಿದವರಿಗೆ ಬಡ್ಡಿ ದರ ಹೆಚ್ಚು ಆಗುವುದಿಲ್ಲ. ಬಡ್ಡಿ ದರ ಇಳಿಕೆಯಾದಾಗ ಕಡಿಮೆ ಬಡ್ಡಿ ದರಕ್ಕೆ ಹೊಸ ಬಾಂಡ್‌ಗಳನ್ನು ಬಿಡುಗಡೆ ಮಾಡಲಾಗುತ್ತದೆ. ಹಳೆಯ ಬಾಂಡ್‌ಗಳಲ್ಲಿ ಹೆಚ್ಚಿಗೆ ಬಡ್ಡಿ ದರ ಇರುತ್ತದೆ. ಆದರೆ ಹೊಸ ಬಾಂಡ್‌ಗಳಲ್ಲಿ ಬಡ್ಡಿ ಕಡಿಮೆ ಇರುವ ಕಾರಣ ಬಾಂಡ್‌ಗಳಿಗೆ ಬೇಡಿಕೆ ಕಡಿಮೆಯಾಗುತ್ತದೆ. ಈ ರೀತಿಯ ಮಿತಿ ಈ ಹೂಡಿಕೆಯಲ್ಲಿದೆ.

ಆರ್‌ಡಿಜಿ ಖಾತೆ ತೆರೆಯುವುದು ಹೇಗೆ?: ರಿಟೇಲ್ ಡೈರೆಕ್ಟ್ ಗಿಲ್ಟ್ ಖಾತೆ ತೆರೆಯಲು ಉಳಿತಾಯ ಖಾತೆ, ಪ್ಯಾನ್ ಕಾರ್ಡ್, ಆಧಾರ್, ಕೆವೈಸಿ ದಾಖಲೆಗಳು, ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರ್ ಅಗತ್ಯ. ಮೊದಲು www.rbiretaildirect.org.inಗೆ ಲಾಗಿನ್ ಆಗಿ ನೋಂದಣಿ ಪ್ರಕ್ರಿಯೆ ಪೂರೈಸಿದ ಮೇಲೆ ಮೊಬೈಲ್ ಮತ್ತು ಇ–ಮೇಲ್ ಒಟಿಪಿ ವೆರಿಫಿಕೇಷನ್ ಆಗುತ್ತದೆ. ನಂತರ ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸಿ ನಾಮನಿರ್ದೇಶನ ಯಾರ ಹೆಸರಿಗೆ ಎಂಬುದನ್ನು ತಿಳಿಸಿ, ಬ್ಯಾಂಕ್ ಖಾತೆಯನ್ನು ಜೋಡಿಸಿದರೆ ನಿಮ್ಮ ಖಾತೆ ಹೂಡಿಕೆಗೆ ಸಿದ್ಧವಾಗುತ್ತದೆ.

(ಲೇಖಕ: ಸುವಿಷನ್ ಹೋಲ್ಡಿಂಗ್ಸ್ ಪ್ರೈ.ಲಿ.,ನ ಸಂಶೋಧನಾ ವಿಭಾಗದ ಮುಖ್ಯಸ್ಥ)

ಷೇರುಪೇಟೆ

ಅನಿಶ್ಚಿತತೆ ನಡುವೆ ಗಳಿಕೆ ಕಂಡ ಸೂಚ್ಯಂಕಗಳು

ಡಿಸೆಂಬರ್ 24ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಹಾದಿಗೆ ಮರಳಿವೆ. 57,124 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1.07ರಷ್ಟು ಗಳಿಕೆ ಕಂಡಿದೆ. 17,003 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.06ರಷ್ಟು ಏರಿಕೆಯಾಗಿದೆ. ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಹಿತಿ ತಂತ್ರಜ್ಞಾನ ವಲಯ ಶೇ 2.95ರಷ್ಟು ಗಳಿಕೆ ಕಂಡಿದೆ. ಫಾರ್ಮಾ ವಲಯ ಶೇ 1.97ರಷ್ಟು, ಎಫ್‌ಎಂಸಿಜಿ ಶೇ 1.31ರಷ್ಟು, ಲೋಹ ವಲಯ ಶೇ 0.29ರಷ್ಟು ಮತ್ತು ರಿಯಲ್ ಎಸ್ಟೇಟ್ ಶೇ 0.28ರಷ್ಟು ಗಳಿಕೆ ಕಂಡಿವೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.21ರಷ್ಟು, ನಿಫ್ಟಿ ಬ್ಯಾಂಕ್ ಶೇ 2.14ರಷ್ಟು, ಮಾಧ್ಯಮ ಶೇ 1.54ರಷ್ಟು, ಮಿಡ್ ಕ್ಯಾಪ್ ಶೇ 1.09ರಷ್ಟು, ವಾಹನ ವಲಯ ಶೇ 0.54ರಷ್ಟು ಇಳಿಕೆ ಕಂಡಿವೆ.

ಏರಿಕೆ-ಇಳಿಕೆ: ನಿಫ್ಟಿಯಲ್ಲಿ ಎಚ್‌ಸಿಎಲ್ ಟೆಕ್ ಶೇ 8.01ರಷ್ಟು, ಸಿಪ್ಲಾ ಶೇ 5.59ರಷ್ಟು, ಟೆಕ್ ಮಹೀಂದ್ರ ಶೇ 4.93ರಷ್ಟು, ಯುಪಿಸಿಎಲ್ ಶೇ 4.37ರಷ್ಟು ಮತ್ತು ವಿಪ್ರೊ ಶೇ 4.12ರಷ್ಟು ಗಳಿಕೆ ಕಂಡಿವೆ. ಎನ್‌ಟಿಪಿಸಿ ಶೇ 3.42ರಷ್ಟು, ಗ್ರಾಸಿಮ್ ಶೇ 3.30ರಷ್ಟು, ಬಿಪಿಸಿಎಲ್ ಶೇ 3.26ರಷ್ಟು, ಎಚ್‌ಡಿಎಫ್‌ಸಿ ಶೇ 3.16ರಷ್ಟು ಮತ್ತು ಎಕ್ಸಿಸ್ ಬ್ಯಾಂಕ್ ಶೇ 3.11ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಕ್ರಿಸ್‌ಮಸ್ ಮತ್ತು ಹೊಸ ವರ್ಷಾಚರಣೆಯ ಹಿನ್ನೆಲೆಯಲ್ಲಿ ಷೇರು ಮಾರುಕಟ್ಟೆಯಲ್ಲಿ ಅಷ್ಟೇನೂ ಚಟುವಟಿಕೆ ನಿರೀಕ್ಷಿಸುವಂತಿಲ್ಲ. ಹೊಸ ವರ್ಷದಲ್ಲಿ ತ್ರೈಮಾಸಿಕ ಫಲಿತಾಂಶಗಳು ಆರಂಭವಾಗುವುದರಿಂದ ಅದರತ್ತ ಹೂಡಿಕೆದಾರರ ದೃಷ್ಟಿ ನೆಟ್ಟಿದೆ. ಓಮೈಕ್ರಾನ್ ಪ್ರಕರಣಗಳು ಮತ್ತು ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಮ್ಯೂಚುವಲ್ ಫಂಡ್: ಓಮೈಕ್ರಾನ್, ಬಡ್ಡಿದರ ಹೆಚ್ಚಳದ ಸವಾಲು

ಉದ್ಯಮದ ನಿರ್ವಹಣಾ ಸಂಪತ್ತು

₹38.45 ಲಕ್ಷ ಕೋಟಿ — 2021ರ ನವೆಂಬರ್ ಅಂತ್ಯ

₹31 ಲಕ್ಷ ಕೋಟಿ — 2020ರ ಡಿಸೆಂಬರ್ ಅಂತ್ಯ



ನವದೆಹಲಿ (ಪಿಟಿಐ): ಓಮೈಕ್ರಾನ್ ಪ್ರಕರಣಗಳ ಹೆಚ್ಚಳ ಮತ್ತು ಆರ್‌ಬಿಐ ರೆಪೊ ದರ ಏರಿಕೆ ಸಾಧ್ಯತೆಯು ದೇಶದ ಮ್ಯೂಚುವಲ್ ಫಂಡ್ ಉದ್ಯಮಕ್ಕೆ 2022ರಲ್ಲಿ ಸವಾಲಾಗಿ ಪರಿಣಮಿಸಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಓಮೈಕ್ರಾನ್ ತಳಿಯು ಕೊರೊನಾ ಸಾಂಕ್ರಾಮಿಕದ ಮೊದಲ ಎರಡು ಅಲೆಗಳಷ್ಟು ತೀವ್ರವಾಗಿ ಇರಲಾರದು ಎಂದೂ ಕೆಲವು ತಜ್ಞರು ಹೇಳಿದ್ದಾರೆ.

‘ಕೋವಿಡ್ ಜೊತೆ ಬದುಕುವುದನ್ನು ಜಗತ್ತು ಕಲಿತಿದೆ. ಭಾರತದಲ್ಲಿ ಲಸಿಕೆ ನೀಡುವ ಕಾರ್ಯ ಬಹಳ ವೇಗವಾಗಿ ನಡೆದಿದೆ. ಹೀಗಾಗಿ, ಆರ್ಥಿಕತೆಯ ಮೇಲೆ ಓಮೈಕ್ರಾನ್ ಪರಿಣಾಮವು ಕೊರೊನಾದ ಮೊದಲ ಎರಡು ಅಲೆಗಳಷ್ಟು ವಿನಾಶಕಾರಿ ಆಗಿರಲಾರದು’ ಎಂದು ಬರೋಡಾ ಮ್ಯೂಚುವಲ್ ಫಂಡ್ ಕಂಪನಿಯ ಸಿಇಒ ಸುರೇಶ್ ಸೋನಿ ಹೇಳಿದ್ದಾರೆ.

ಬಡ್ಡಿದರವು ಕಡಿಮೆ ಮಟ್ಟದಲ್ಲಿ ಇರುವುದರಿಂದ ಮ್ಯೂಚುವಲ್ ಫಂಡ್ ಹೂಡಿಕೆ ಬಗ್ಗೆ ಅರಿವು ಹೆಚ್ಚಾಗುತ್ತಿದೆ. ಉತ್ತಮ ಹೂಡಿಕೆಯು ಉದ್ಯಮದ ನಿರ್ವಹಣಾ ಸಂಪತ್ತು ಹೆಚ್ಚಿಸುವಲ್ಲಿ ಕೊಡುಗೆ ನೀಡುತ್ತಿದೆ ಎಂದು ಹೇಳಿದ್ದಾರೆ.

ಈಕ್ವಿಟಿಯಲ್ಲಿ ಬಂಡವಾಳ ಹೂಡಿಕೆಯ ಪ್ರಮಾಣವು ಷೇರು ಮಾರುಕಟ್ಟೆ ಏರಿಕೆ ಕಾಣಲಿದೆಯೇ, ಇಲ್ಲವೇ ಎನ್ನುವುದರ ಮೇಲೆ ಅವಲಂಬಿತವಾಗಿರಲಿದೆ. ಸೂಚ್ಯಂಕ ಇಳಿಕೆ ಕಂಡಲ್ಲಿ ಬಂಡವಾಳದ ಹೊರಹರಿವು ಕಂಡುಬರಲಿದೆ. ಹೀಗಾಗಿ ಬಡ್ಡಿ ದರದ ಕುರಿತು ಆರ್‌ಬಿಐ ಯಾವ ನಿರ್ಧಾರ ತಳೆಯಲಿದೆ ಎನ್ನುವುದು ಮುಖ್ಯವಾಗಲಿದೆ ಎಂದು ಪ್ರೈಮ್ ಇನ್‌ವೆಸ್ಟರ್ಸ್.ಇನ್‌ನ ಸಹ ಸ್ಥಾಪಕಿ ವಿದ್ಯಾ ಬಾಲಾ ಹೇಳಿದ್ದಾರೆ.

ಅಲ್ಪಾವಧಿಯಲ್ಲಿ ಕೊರೊನಾದ ಹೊಸ ತಳಿ ಓಮೈಕ್ರಾನ್ ಹರಡುವಿಕೆ ಯಾವ ಸ್ವರೂಪದಲ್ಲಿ ಇರಲಿದೆ ಎನ್ನುವುದು ಬಂಡವಾಳ ಹರಿವಿನ ಮೇಲೆ ಪ್ರಭಾವ ಬೀರಲಿದೆ. ಒಂದೊಮ್ಮೆ ಸಾಂಕ್ರಾಮಿಕದ ಮೂರನೇ ಅಲೆ ಬಂದಲ್ಲಿ, ಅದರಿಂದಾಗಿ ಒಂದಿಷ್ಟು ಲಾಭ ಗಳಿಕೆಯ ವಹಿವಾಟು ನಡೆಯಬಹುದು ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾ ಸಂಸ್ಥೆಯ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ತಿಳಿಸಿದ್ದಾರೆ.

2021ರಲ್ಲಿ ನವೆಂಬರ್‌ವರೆಗೆ ಮ್ಯೂಚುವಲ್ ಫಂಡ್‌ಗಳಲ್ಲಿ ₹ 1.93 ಲಕ್ಷ ಕೋಟಿ ಬಂಡವಾಳ ಹೂಡಿಕೆ ಆಗಿದೆ.

ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ಈ ವರ್ಷದ ನವೆಂಬರ್‌ವರೆಗೆ ₹ 71,600 ಕೋಟಿ ಹೂಡಿಕೆ ಆಗಿದೆ. 2020ರಲ್ಲಿ ₹ 9,410 ಕೋಟಿಗಳಷ್ಟು ಬಂಡವಾಳ ಹೂಡಿಕೆ ಆಗಿದೆ.

ಪವನ್ ಅಮೋಘ ಆಟ: ಬುಲ್ಸ್‌ಗೆ ರೋಚಕ ಜಯ

ಬೆಂಗಳೂರು: ಅಂಕಣದಲ್ಲಿ ಮಿಂಚಿನ ಸಂಚಲನ ಮೂಡಿಸಿದ ಪವನ್ ಶೆರಾವತ್ ಅಮೋಘ ದಾಳಿಗಳ ನೆರವಿನಿಂದ ಬೆಂಗಳೂರು ಬುಲ್ಸ್ ತಂಡವು ಭಾನುವಾರ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಬೆಂಗಾಲ್ ವಾರಿಯರ್ಸ್ ಎದುರು ರೋಚಕ ಜಯ ಸಾಧಿಸಿತು.

ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 36–35ರಿಂದ ಬೆಂಗಾಲ್ ಬಳಗವನ್ನು ಮಣಿಸಿತು. 15 ಅಂಕಗಳನ್ನು ಗಳಿಸಿದ ನಾಯಕ ಪವನ್ ತಂಡದ ಗೆಲುವಿನ ರೂವಾರಿಯಾದರು. ಮಣಿಂದರ್ ಸಿಂಗ್ 17 ಅಂಕ ಗಳಿಸಿ ಬೆಂಗಾಲ್‌ಗೆ ಬಲ ತುಂಬಿದರು. ಆದರೆ ತಂಡವು ಗೆಲುವಿನ ಅಂಚಿನಲ್ಲಿ ಎಡವಿತು.

ಆದರೆ ಪಂದ್ಯದುದ್ದಕ್ಕೂ ಪವನ್ ಮತ್ತು ಮಣಿಂದರ್ ನಡುವಿನ ಜಿದ್ದಾಜಿದ್ದಿಯು ಮೈನವಿರೇಳಿಸಿತು. ಬೆಂಗಳೂರು ತಂಡದ ಚಂದ್ರನ್ ರಂಜೀತ್ ಕೂಡ ಮಿಂಚಿನ ದಾಳಿ ನಡೆಸಿದರು. ಆರು ಅಂಕ ಗಳಿಸಿದರು.

ಬೆಂಗಾಲ್ ತಂಡದಲ್ಲಿ ಆಲ್‌ರೌಂಡರ್ ಮೊಹಮ್ಮದ್ ನಬಿಭಕ್ಷ್ (8 ಪಾಯಿಂಟ್) ಕೂಡ ಅಮೋಘ ಆಟವಾಡಿದರು. ಆದರೆ, ತಂಡವು ಕೇವಲ ಒಂದು ಅಂಕ ಅಂತರದಿಂದ ಸೋತಿತು. ಬೆಂಗಳೂರು ತಂಡಕ್ಕೆ ಟೂರ್ನಿಯಲ್ಲಿ ಇದು ಎರಡನೇ ಜಯವಾಗಿದೆ.

ಬೆಂಗಾಲ್ ಆಟಗಾರನನ್ನು ಬುಲ್ಸ್ ಆಟಗಾರರು ಕ್ಯಾಚ್ ಮಾಡಿದರು

ರೋಚಕ ಟೈ: ಗುಜರಾತ್ ಜೈಂಟ್ಸ್ ಮತ್ತು ದಬಂಗ್ ಡೆಲ್ಲಿ ನಡುವಣ ನಡೆದ ಇನ್ನೊಂದು ಪಂದ್ಯವು 24–24ರಿಂದ ರೋಚಕ ಟೈನಲ್ಲಿ ಅಂತ್ಯವಾಯಿತು. ಡೆಲ್ಲಿ ತಂಡದ ನವೀನಕುಮಾರ್ (11 ಪಾಯಿಂಟ್) ಮತ್ತು ಗುಜರಾತ್ ತಂಡದ ರಾಕೇಶ್ ನರ್ವಾಲ್ (9 ಪಾಯಿಂಟ್ಸ್) ಜಿದ್ದಾಜಿದ್ದಿನ ಪೈಪೋಟಿಯಿಂದಾಗಿ ಉಭಯ ತಂಡಗಳು ಸೋಲಿನಿಂದ ತಪ್ಪಿಸಿಕೊಂಡವು.

ಗುಜರಾತ್ ತಂಡದ ಡಿಫೆಂಡರ್ ಸುನೀಲ್ ಕುಮಾರ್ ಕೂಡ ಮಿಂಚಿದರು ಅವರು ನಾಲ್ಕು ಅಂಕಗಳ ಕಾಣಿಕೆಯನ್ನು ತಂಡಕ್ಕೆ ನೀಡಿದರು.

ಇಂದಿನ ಪಂದ್ಯ (ರಾತ್ರಿ)
ತಮಿಳ್ ತಲೈವಾಸ್ Vs ಯು ಮುಂಬಾ 7.30
ಜೈಪುರ್ ಪಿಂಕ್ ಪ್ಯಾಂಥರ್ಸ್ Vs ಯು.ಪಿ.ಯೋಧಾ 8.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	3	2	-	1	13
ಬೆಂಗಾಲ್ ವಾರಿಯರ್ಸ್	3	2	1	-	11
ಬೆಂಗಳೂರು ಬುಲ್ಸ್	3	2	1	-	10
ಗುಜರಾತ್ ಜೈಂಟ್ಸ್	3	1	1	1	9
ಯು ಮುಂಬಾ	2	1	1	-	6
ಪಟ್ನಾ ಪೈರೇಟ್ಸ್	2	1	1	-	6
ಯು.ಪಿ.ಯೋಧಾ	2	1	1	-	6
ಜೈಪುರ ಪಿಂಕ್ ಪ್ಯಾಂಥರ್ಸ್	2	1	1	-	6
ಪುಣೇರಿ ಪಲ್ಟನ್	2	1	1	-	5
ತೆಲುಗು ಟೈಟನ್ಸ್	2	-	1	1	4
ತಮಿಳ್ ತಲೈವಾಸ್	2	-	1	1	3
ಹರಿಯಾಣ ಸ್ಟೀಲರ್ಸ್	2	-	2	-	2

(ಭಾನುವಾರದ ಪಂದ್ಯಗಳ ಅಂತ್ಯಕ್ಕೆ)

ಟೆಸ್ಟ್: ಕರ್ನಾಟಕದ ಜೋಡಿಯ ಶತಕದ ಜೊತೆಯಾಟ; ಭಾರತಕ್ಕೆ ಮೊದಲ ದಿನದ ಶ್ರೇಯ

ಕನ್ನಡಿಗ ರಾಹುಲ್ 'ಸೆಂಚುರಿಯನ್'

ಸೆಂಚುರಿಯನ್: ಸೂಪರ್‌ಸ್ಪೋರ್ಟ್ ಪಾರ್ಕ್‌ನಲ್ಲಿ ಭಾನುವಾರ ಕರ್ನಾಟಕದ ಪ್ರತಿಭೆಗಳದ್ದೇ ಪಾರಮ್ಯ. ದಕ್ಷಿಣ ಆಫ್ರಿಕಾ ಎದುರು ಆರಂಭವಾದ ಮೊದಲ ಟೆಸ್ಟ್‌ನಲ್ಲಿ ಕನ್ನಡಿಗ ರಾಹುಲ್ ಚಂದದ ಶತಕ ಬಾರಿಸಿದರು. ಗೆಳೆಯ ಮಯಂಕ್ ಅಗರವಾಲ್ ಜೊತೆ ಮೊದಲ ವಿಕೆಟ್‌ಗೆ ಶತಕದ ಜೊತೆಯಾಟವನ್ನೂ ಆಡಿದರು.

ಇದರಿಂದಾಗಿ ಭಾರತ ತಂಡವು ದಿನದಾಟದ ಮುಕ್ತಾಯಕ್ಕೆ 90 ಓವರ್‌ಗಳಲ್ಲಿ 3 ವಿಕೆಟ್‌ಗೆ 272 ರನ್ ಗಳಿಸಿತು. ರಾಹುಲ್ ಮತ್ತು ಅಜಿಂಕ್ಯ ರಹಾನೆ ಕ್ರೀಸ್‌ನಲ್ಲಿದ್ದಾರೆ.

ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮಯಂಕ್ ಮತ್ತು ರಾಹುಲ್ ಇನಿಂಗ್ಸ್ ಆರಂಭಿಸಿದರು. 18ನೇ ಓವರ್‌ನಲ್ಲಿ ಮಯಂಕ್ ಬ್ಯಾಟ್ ಹೊರಅಂಚಿಗೆ ತಾಗಿದ್ದ ಚೆಂಡನ್ನು ಹಿಡಿಯುವ ಪ್ರಯತ್ನದಲ್ಲಿ ಕೀಪರ್ ಕ್ವಿಂಟನ್ ಡಿ ಕಾಕ್ ಸಫಲರಾಗಲಿಲ್ಲ. ಇದು ಮಯಂಕ್‌ಗೆ ವರದಾನವಾಯಿತು. ಊಟದ ವಿರಾಮದ ವೇಳೆಗೆ ಈ ಜೋಡಿಯು 83 ರನ್ ಸೇರಿಸಿತು. ನಂತರವೂ ಇಬ್ಬರ ಜೊತೆಯಾಟವು ಬೌಲರ್‌ಗಳಿಗೆ ತಲೆನೋವಾಯಿತು. ಇವರಿಬ್ಬರ ಜೊತೆಯಾಟದಲ್ಲಿ 117 ರನ್‌ಗಳು ಸೇರಿದವು.

ತಮ್ಮ ಎರಡನೇ ಸ್ಪೆಲ್ ಬೌಲಿಂಗ್ ಮಾಡಲು ಬಂದ ಲುಂಗಿ ಗಿಡಿ ಈ ಜೊತೆಯಾಟವನ್ನು ಮುರಿದರು. ಎಲ್‌ಬಿಡಬ್ಲ್ಯು ಬಲೆಗೆ ಮಯಂಕ್ ಬಿದ್ದರು. ಆದರೆ, ಅಂಪೈರ್ ಎರಸ್ಮಸ್ ಔಟ್ ಕೊಡಲಿಲ್ಲ. ಆತಿಥೇಯ ತಂಡದ ನಾಯಕ ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ (ಯುಡಿಆರ್‌ಎಸ್) ಅವಕಾಶ ಬಳಸಿಕೊಂಡರು. ಯಶಸ್ವಿಯೂ ಆದರು. ನಂತರದ ಎಸೆತದಲ್ಲಿಯೇ ಚೇತೇಶ್ವರ್ ಪೂಜಾರ ಔಟಾದರು. ಲುಂಗಿ ಹ್ಯಾಟ್ರಿಕ್ ಅವಕಾಶಕ್ಕೆ ವಿರಾಟ್ ತಡೆಯೊಡ್ಡಿದರು. ಲಯ ಕಂಡುಕೊಳ್ಳಲು ಪ್ರಯತ್ನಿಸಿದ ಅವರು ಒಂದಿಷ್ಟು ಆಕರ್ಷಕ ಹೊಡೆತಗಳನ್ನು ಪ್ರಯೋಗಿಸಿ ಗಮನ ಸೆಳೆದರು. ರಾಹುಲ್ ಜೊತೆಗೆ 82 ರನ್‌ಗಳನ್ನೂ ಸೇರಿಸಿದರು.

ಇದ್ದೆಲ್ಲದರ ನಡುವೆ ರಾಹುಲ್ ಸಂಪೂರ್ಣ ಏಕಾಗ್ರತೆ ಸಾಧಿಸಿ ಬ್ಯಾಟಿಂಗ್ ಮಾಡಿದರು. ಬ್ಯಾಕ್‌ಫುಟ್ ಮತ್ತು ಫ್ರಂಟ್‌ಫುಟ್‌ಗಳಲ್ಲಿ ಸೈ ಎನಿಸಿಕೊಂಡರು. 127 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. 53ನೇ ಓವರ್‌ನಲ್ಲಿ ಮಲ್ಡರ್ ಬೌಲಿಂಗ್‌ನಲ್ಲಿ ರಾಹುಲ್ ಕ್ಯಾಚ್ ಕೈಬಿಟ್ಟ ಜೆನ್ಸೆನ್ ತಪ್ಪಿಗೆ ಆತಿಥೇಯ ತಂಡ ಕೈ ಕೈ ಹಿಸುಕಿಕೊಳ್ಳಬೇಕಾಯಿತು. ರಾಹುಲ್ ಶತಕದತ್ತ ದಾಪುಗಾಲಿಟ್ಟರು. ತಾವೆದುರಿಸಿದ 218ನೇ ಎಸೆತದಲ್ಲಿ ಶತಕದ ಗಡಿ ಮುಟ್ಟಿದರು. ರಾಹುಲ್‌ಗೆ ಇದು ಟೆಸ್ಟ್‌ನಲ್ಲಿ ಏಳನೇ ಶತಕ. ಅವರು ಕಳೆದ ಆಗಸ್ಟ್‌ನಲ್ಲಿ ಇಂಗ್ಲೆಂಡ್‌ನಲ್ಲಿ ಶತಕ ಗಳಿಸಿದ್ದರು.

ಬಹುತೇಕ ಕೊನೆಯ ಅವಕಾಶ ಪಡೆದುಕೊಂಡಿರುವ ರಹಾನೆ ಕೂಡ ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಅವರು 73 ರನ್ ಸೇರಿಸಿದ್ದಾರೆ.

ಶ್ರೇಯಸ್ ಅಯ್ಯರ್, ಇಶಾಂತ್ ಶರ್ಮಾ, ಹನುಮವಿಹಾರಿ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಶಾರ್ದೂಲ್ ಠಾಕೂರ್ ಸೇರಿದಂತೆ ನಾಲ್ವರು ಮಧ್ಯಮವೇಗಿ ಮತ್ತು ಸ್ಪಿನ್ನರ್ ಅಶ್ವಿನ್ ಅವಕಾಶ ಪಡೆದಿದ್ದಾರೆ.

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 3ಕ್ಕೆ 272 (90 ಓವರ್)
ಕೆ.ಎಲ್. ರಾಹುಲ್ ಬ್ಯಾಟಿಂಗ್ 122 (248ಎ, 4X16, 6X1), ಮಯಂಕ್ ಎಲ್‌ಬಿಡಬ್ಲ್ಯು ಬಿ ಲುಂಗಿ 60 (123ಎ, 4X9), ಪೂಜಾರ ಸಿ ಪೀಟರ್ಸನ್ ಬಿ ಲುಂಗಿ 0 (1ಎ), ಕೊಹ್ಲಿ ಸಿ ಮಲ್ಡರ್ ಬಿ ಲುಂಗಿ 35 (94ಎ, 4X4), ರಹಾನೆ ಬ್ಯಾಟಿಂಗ್ 40 (81ಎ, 4X8)
ಇತರೆ (ಬೈ 4, ಲೆಗ್‌ಬೈ 4, ನೋಬಾಲ್ 7) 15
ವಿಕೆಟ್ ಪತನ: 1–117 (ಮಯಂಕ್ ಅಗರವಾಲ್; 40.2), 2–117 (ಚೇತೇಶ್ವರ್ ಪೂಜಾರ; 40.3), 3–199 (ವಿರಾಟ್ ಕೊಹ್ಲಿ; 68.2)
ಬೌಲಿಂಗ್: ಕಗಿಸೊ ರಬಾಡ 20–5–51–0, ಲುಂಗಿ ಗಿಡಿ 17–4–45–3, ಮಾರ್ಕೊ ಜೆನ್ಸೆನ್ 17–4–61–0, ವಿಯಾನ್ ಮಲ್ಡರ್ 18–3–49–0, ಕೇಶವ್ ಮಹಾರಾಜ್ 18–2–58–0

ಕೆ.ಎಲ್.ರಾಹುಲ್
ರನ್ 122*
ಎಸೆತ 248
ಬೌಂಡರಿ 16
ಸಿಕ್ಸರ್ 1
ಸ್ಟ್ರೈಕ್‌ರೇಟ್ 49.19

ಬೌನ್ಸರ್ ಪೆಟ್ಟಿನಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ಮಯಂಕ್ ಅಗರವಾಲ್ –ಎಪಿ/ಪಿಟಿಐ ಚಿತ್ರ

ವಿಟಿಯು, ಕ್ರೈಸ್ಟ್ ಜಯದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಮತ್ತು ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲಯ ತಂಡಗಳು ಬೆಂಗಳೂರು ವಿಶ್ವವಿದ್ಯಾಲಯ ಆಶ್ರಯದಲ್ಲಿ ಭಾನುವಾರ ಆರಂಭಗೊಂಡ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಹಾಕಿ ಟೂರ್ನಿಯಲ್ಲಿ ಜಯ ಸಾಧಿಸಿದವು.

ವಿಟಿಯು 7–0ಯಿಂದ ಕಲಬುರ್ಗಿಯ ಗುಲ್ಬರ್ಗ ವಿವಿಯನ್ನು ಮತ್ತು ಕ್ರೈಸ್ಟ್ ವಿವಿ 1–0ಯಿಂದ ಬೆಳಗಾವಿಯ ರಾಣಿ ಚೆನ್ನಮ್ಮ ವಿವಿಯನ್ನು ಮಣಿಸಿತು. ದಾವಣಗೆರೆ ವಿವಿ, ಮಂಗಳೂರು ವಿವಿ ಮತ್ತು ಧಾರವಾಡದ ಕರ್ನಾಟಕ ವಿವಿ ತಂಡಗಳು ಸೋಲನುಭವಿಸಿದವು.

ಉದ್ಘಾಟನಾ ಪಂದ್ಯದಲ್ಲಿ ಕಣ್ಣೂರು ವಿವಿ 2–1ರಲ್ಲಿ ಧಾರವಾಡ ವಿವಿಯನ್ನು ಮಣಿಸಿದರೆ ಕೋಟಯಂನ ಮಹಾತ್ಮ ಗಾಂಧಿ ವಿವಿ 1–0ಯಿಂದ ಸೇಲಂನ ಪೆರಿಯಾರ್ ವಿವಿಯನ್ನು ಸೋಲಿಸಿತು.

ಪೆರಿಯಾರ್ ವಿವಿ ಹಾಗೂ ಎಂಜಿ ವಿವಿ ತಂಡಗಳ ನಡುವಿನ ಪಂದ್ಯದ ನೋಟ

ಕಾರೈಕುಡಿಯ ಅಳಗಪ್ಪ ವಿವಿ 3–1ರಲ್ಲಿ ಕಾಕಿನಾಡದ ಜೆಎನ್‌ಟಿಯುವನ್ನು, ಕಡಪದ ಯೋಗಿ ವೇಮನ ವಿವಿ 12–0ಯಿಂದ ದಾವಣಗೆರೆ ವಿವಿಯನ್ನು, ತಿರುಪತಿಯ ಶ್ರೀ ವೆಂಕಟೇಶ್ವರ ವಿವಿ 4–2ರಲ್ಲಿ ಕೊಯಮತ್ತೂರಿನ ರಾಮಕೃಷ್ಣ ಮಿಷನ್ ತಂಡವನ್ನು ಸೋಲಿಸಿತು.

ಮಹೆಬೂಬ್‌ನಗರದ ಪಾಲಮುರು ವಿವಿ 6–0ಯಿಂದ ಕರೀಂನಗರದ ಶಾತವಾಹನ ವಿವಿಯನ್ನು, ತಿರುವಳ್ಳೂರಿನ ಮನೋನ್ಮಣಿಯಂ ಸುಂದರರ್ ವಿವಿ 9–0ಯಿಮದ ಆಂಧ್ರದ ರಾಯಲ್‌ಸೀಮಾ ವಿವಿಯನ್ನು, ಚೆನ್ನೈನ ಅಣ್ಣಾ ವಿವಿ 5–0ಯಿಂದ ನೆಲಗೊಂಡದ ಎಂಜಿ ವಿವಿಯನ್ನು, ಕೇರಳ ವಿವಿ 7–0ಯಿಂದ ಶ್ರೀಕಾಕುಳಂನ ಡಾ.ಬಿ.ಆರ್.ಅಂಬೇಡ್ಕರ್ ವಿವಿಯನ್ನು, ವಿಶಾಖಪಟ್ಟಣದ ಆಂಧ್ರ ವಿವಿ 2–1ರಲ್ಲಿ ಮೆಳ್ಳಕೊಟ್ಟಿಯೂರ್‌ನ ಟಿಎನ್‌ಪಿಇಎಸ್‌ಯುವನ್ನು ಮತ್ತು ಹೈದರಾಬಾದ್‌ನ ಒಸ್ಮಾನಿಯಾ ವಿವಿ 6–0ಯಿಂದ ಮಂಗಳೂರು ವಿವಿಯನ್ನು ಮಣಿಸಿತು.

ಮೈಸೂರು ವಿವಿ ತಂಡ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಮಹಿಳಾ ತಂಡ ಶಂಕರ ಮಠ ಸಮೀಪದ ವಿವೇಕಾನಂದ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ವಾಜಪೇಯಿ ಕಪ್ ದಕ್ಷಿಣ ವಲಯ ವಾಲಿಬಾಲ್ ಟೂರ್ನಿಯಲ್ಲಿ ಭರ್ಜರಿ ಗೆಲುವು ಸಾಧಿಸಿತು. ತಮಿಳುನಾಡಿನ ಭಾರತಿಯಾರ್ ವಿಶ್ವವಿದ್ಯಾಲಯದ ಎದುರಿನ ಪಂದ್ಯದಲ್ಲಿ ಮೈಸೂರು ವಿವಿ 24-26, 25–20, 25–19ರಲ್ಲಿ ಜಯ ಗಳಿಸಿತು. ಪುರುಷರ ವಿಭಾಗದಲ್ಲಿ ಕೋಟಯಂನ ಎಂ.ಜಿ ವಿವಿ ರೇವಾ ವಿವಿಯನ್ನು 25-14, 25-12, 25-12ರಲ್ಲಿ ಸೋಲಿಸಿತು.

ಭಾರತಿಯಾರ್ ವಿವಿಯ ವಿ ಪ್ರೀತಿ ಅವರ ಸ್ಮ್ಯಾಷ್ ತಡೆಯಲು ಮುಂದಾದ ಮೈಸೂರು ವಿವಿಯ ಲಾವಣ್ಯ ಮತ್ತು ದೀಪ್ತಿ –ಪ್ರಜಾವಾಣಿ ಚಿತ್ರ

ಗೌಪ್ಯ ವರದಿ ಸೋರಿಕೆ: ಪೊಲೀಸರ ಮೊರೆ ಹೋದ ಸಿಎ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದ 'ಖ್ಯಾತನಾಮ' ಕ್ರಿಕೆಟಿಗನೊಬ್ಬ ಮಾದಕ ವಸ್ತು ಸೇವಿಸಿದ ಕುರಿತ ಗೌಪ್ಯ ವರದಿ ಮಾಧ್ಯಮಗಳಿಗೆ ಸೋರಿಕೆಯಾಗಿರುವುದರ ತನಿಖೆಗಾಗಿ ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಪೊಲೀಸರ ಮೊರೆ ಹೋಗಿದೆ.

ನಿಕ್ ಹಾಕ್ಲೆ

ಕ್ರಿಕೆಟ್ ಆಸ್ಟ್ರೇಲಿಯಾದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಿಕ್ ಹಾಕ್ಲೆ ಈ ಕುರಿತ ವಿಷಯವನ್ನು ಭಾನುವಾರ ತಿಳಿಸಿದರು. ಈ ಪ್ರಕರಣದ ಬಗ್ಗೆ 'ದ ಏಜ್' ಸುದ್ದಿಪತ್ರಿಕೆಯು ವರದಿಯೊಂದನ್ನು ಪ್ರಕಟಿಸಿರುವ ಹಿನ್ನೆಲೆಯಲ್ಲಿ ಕ್ರಿಕೆಟ್ ಆಸ್ಟ್ರೇಲಿಯಾ ಈ ಹೆಜ್ಜೆ ಇಟ್ಟಿದೆ.

'ಬೆಳಿಗ್ಗೆ ಈ ಲೇಖನವನ್ನು ನೋಡಿದೆ. ಇದರಲ್ಲಿರುವ ಮಾಹಿತಿಗಳು ಆಧಾರರಹಿತವಾಗಿದೆ. ಯಾವುದೇ ಮಾಹಿತಿ ಕದಿಯುವುದು ಅಪರಾಧ. ಈ ಕುರಿತು ಪೊಲೀ ಸರಿಗೆ ದೂರು ನೀಡಿದ್ದೇವೆ' ಎಂದು ನಿಕ್ ಅವರು ತಿಳಿಸಿದ್ದಾರೆ.

ಆಸ್ಟ್ರೇಲಿಯಾದ ಖ್ಯಾತ ಕ್ರಿಕೆಟಿಗನೊಬ್ಬ ಕೊಕೇನ್ ಸೇವನೆ ಮಾಡಿ ಬಾಲ್ಕನಿಯಲ್ಲಿ ಮಹಿಳೆಯರೊಂದಿಗೆ ನಗ್ನವಾಗಿ ನರ್ತಿಸುತ್ತಿದ್ದನೆಂದು ಮಹಿಳೆಯೊಬ್ಬರು ನೀಡಿರುವ ಮಾಹಿತಿ ಆಧರಿಸಿ ಪತ್ರಿಕೆಯು ವರದಿ ಮಾಡಿದೆ. ಮಾಹಿತಿ ನೀಡಿದ ಮಹಿಳೆಯು ತನ್ನನ್ನು 'ಹೈ ಕ್ಲಾಸ್ ಎಸ್ಕಾರ್ಟ್' ಎಂದು ಹೇಳಿರುವ ಧ್ವನಿ ಮುದ್ರಣ ಇದೆ ಎಂದೂ ವರದಿಯಾಗಿದೆ.

ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಟ್ರೋಫಿ ಜಯಿಸಿದ ಹಿಮಾಚಲ ಪ್ರದೇಶ ತಂಡದ ಸಂಭ್ರಮ –ಬಿಸಿಸಿಐ ಟ್ವಿಟರ್ ಚಿತ್ರ

ವಿಜಯ್ ಹಜಾರೆ ಟ್ರೋಫಿ: ತಮಿಳುನಾಡು ತಂಡಕ್ಕೆ ಆಘಾತ

ಹಿಮಾಚಲಪ್ರದೇಶ ಚಾಂಪಿಯನ್

ಜೈಪುರ (ಪಿಟಿಐ): ಶುಭಂ ಅರೋರಾ ಶತಕದ ಬಲದಿಂದ ಹಿಮಾಚಲ ಪ್ರದೇಶ ಮೊಟ್ಟಮೊದಲ ಸಲ ವಿಜಯ್ ಹಜಾರೆ ಟ್ರೋಫಿಯನ್ನು ಗೆದ್ದುಕೊಂಡಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಹಿಮಾಚಲ ಪ್ರದೇಶ ವಿ.ಜಯ ದೇವನ್ ನಿಯಮದನ್ವಯ 11 ರನ್‌ಗಳಿಂದ ಗೆದ್ದಿತು.

ಆರನೇ ಸಲ ಪ್ರಶಸ್ತಿ ಜಯಿಸುವ ತಮಿಳುನಾಡು ತಂಡದ ಕನಸು ಭಗ್ನವಾಯಿತು. ಅನುಭವಿ ವಿಕೆಟ್‌ಕೀಪರ್– ಬ್ಯಾಟರ್ ದಿನೇಶ್ ಕಾರ್ತಿಕ್ (116;103ಎ, 4X8, 6X7) ಸುಂದರ ಶತಕವೂ ವ್ಯರ್ಥವಾಯಿತು. ಮೊದಲು ಬ್ಯಾಟಿಂಗ್ ಮಾಡಿದ್ದ ತಮಿಳುನಾಡು 49.4 ಓವರ್‌ಗಳಲ್ಲಿ 314 ರನ್ ಗಳಿಸಿತು.

ವಿಕೆಟ್‌ಕೀಪರ್ ಬ್ಯಾಟರ್, ಶುಭಂ ಅರೋರಾ (ಅಜೇಯ 136; 131ಎ, 4X13, 6X1) ಅಮೋಘ ಶತಕದ ಬಲದಿಂದ ಹಿಮಾಚಲ ತಂಡವು 47.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 299 ರನ್ ಗಳಿಸಿತು.

ಸಂಜೆ ಐದು ಗಂಟೆ ಸುಮಾರಿಗೆ ಹಿಮಾಚಲ ತಂಡವು ಗೆಲುವಿಗಾಗಿ 15 ಎಸೆತಗಳಲ್ಲಿ 16 ರನ್ ಗಳಿಸಬೇಕಿತ್ತು. ಈ ಹೊತ್ತಿನಲ್ಲಿ ಮಂದಬೆಳಕಿನ ಕಾರಣ ಆಟ ಸ್ಥಗಿತಗೊಳಿಸಲಾಯಿತು. ಹಿಮಾಚಲ ಪ್ರದೇಶ ಉತ್ತಮ ರನ್ ಸರಾಸರಿ ಹೊಂದಿತ್ತು. ಆದ್ದರಿಂದ ವಿಜಯೀ ಎಂದು ಘೋಷಿಸಲಾಯಿತು.

ಸಂಕ್ಷಿಪ್ತ ಸ್ಕೋರು: ತಮಿಳುನಾಡು: 49.4 ಓವರ್‌ಗಳಲ್ಲಿ 314 (ದಿನೇಶ್ ಕಾರ್ತಿಕ್ 116, ಬಾಬಾ ಇಂದ್ರಜೀತ್ 80, ಶಾರೂಖ್ ಖಾನ್ 42, ಪಂಕಜ್ ಜೈಸ್ವಾಲ್ 59ಕ್ಕೆ4, ರಿಷಿ ಧವನ್ 62ಕ್ಕೆ3), **ಹಿಮಾಚಲ ಪ್ರದೇಶ:** 47.3 ಓವರ್‌ಗಳಲ್ಲಿ 4ಕ್ಕೆ 299 (ಶುಭಂ ಅರೋರಾ ಔಟಾಗದೆ 136, ಅಮಿತ್ ಕುಮಾರ್ 74, ರಿಷಿ ಧವನ್ ಔಟಾಗದೆ 42, ವಾಷಿಂಗ್ಟನ್ ಸುಂದರ್ 47ಕ್ಕೆ1) ಫಲಿತಾಂಶ: ಹಿಮಾಚಲ ಪ್ರದೇಶಕ್ಕೆ 11 ರನ್‌ಗಳ ಜಯ (ಮಂದಬೆಳಕಿನ ಕಾರಣ ಪಂದ್ಯ ಸ್ಥಗಿತ. ವಿಜೆಡಿ ನಿಯಮದನ್ವಯ).

ಸೆಮಿಫೈನಲ್‌ಗೆ ಸಾಯ್, ಪಿಎನ್‌ಬಿ

ಬೆಂಗಳೂರು: ಭಾರತ ಕ್ರೀಡಾ ಪ್ರಾಧಿಕಾರ (ಸಾಯ್), ಪಂಜಾಬ್ ನ್ಯಾಷನಲ್ ಬ್ಯಾಂಕ್ (ಪಿಎನ್‌ಬಿ), ರೈಲ್ವೆ ಮತ್ತು ಪೆಟ್ರೋಲಿಯಂ ತಂಡಗಳು ಇಲ್ಲಿ ನಡೆಯುತ್ತಿರುವ ಅಂತರ ಇಲಾಖೆ ಹಾಕಿ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪ್ರವೇಶಿಸಿದವು.

ಭಾನುವಾರ ಸಾಯ್ ಶೂಟೌಟ್‌ನಲ್ಲಿ ಸರ್ವಿಸಸ್ ತಂಡವನ್ನು, ಪಿಎನ್‌ಬಿ 5–0ಯಿಂದ ಐಟಿಬಿಪಿಯನ್ನು, ರೈಲ್ವೆ 3–1ರಲ್ಲಿ ಸೆಂಟ್ರಲ್ ಸಿವಿಲ್ ಸರ್ವಿಸಸ್ ತಂಡವನ್ನು, ಪೆಟ್ರೋಲಿಯಂ 3–2ರಲ್ಲಿ ಪಂಜಾಬ್ ಮತ್ತು ಸಿಂಡ್ ಬ್ಯಾಂಕ್ ತಂಡವನ್ನು ಸೋಲಿಸಿತು.

ಸೋಮವಾರ ಮಧ್ಯಾಹ್ನ 1 ಗಂಟೆಗೆ ಪಿಎನ್‌ಬಿ ಮತ್ತು ರೈಲ್ವೆ, 3 ಗಂಟೆಗೆ ಪೆಟ್ರೋಲಿಯಂ ಮತ್ತು ಸಾಯ್ ತಂಡಗಳು ಸೆಣಸಲಿವೆ.

ನಿಧನ ವಾರ್ತೆ

ಟೆನಿಸ್ ಕೋಚ್ ಸುರೇಂದ್ರ

ಮೈಸೂರು: ಟೆನಿಸ್ ಕೋಚ್ ಸುರೇಂದ್ರ (61) ಹೃದಯಾಘಾತದಿಂದ ರಾಮಕೃಷ್ಣನಗರ ನಿವಾಸದಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ. ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಭಾನುವಾರ ಅಂತ್ಯಕ್ರಿಯೆ ನೆರವೇರಿತು. ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯಲ್ಲಿ 20 ವರ್ಷ ಕೋಚ್ ಆಗಿ ಕಾರ್ಯನಿರ್ವಹಿಸಿ ಮಾರ್ಚ್‌ನಲ್ಲಿ ನಿವೃತ್ತರಾಗಿದ್ದರು. ರೆಫರಿ ಆಗಿಯೂ ಕಾರ್ಯನಿರ್ವಹಿಸಿದ್ದರು.

ಅಂಧರ ಕ್ರಿಕೆಟ್: ಭಾರತಕ್ಕೆ ಸರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರನೇ ಪಂದ್ಯದಲ್ಲೂ ಅಮೋಘ ಜಯ ಸಾಧಿಸಿದ ಭಾರತ ತಂಡ ಬಾಂಗ್ಲಾದೇಶ ಎದುರಿನ ಅಂಧರ ಟ್ವೆಂಟಿ20 ಕ್ರಿಕೆಟ್ ಸರಣಿಯನ್ನು ಕ್ಲೀನ್ ಸ್ವೀಪ್ ಮಾಡಿಕೊಂಡಿತು.

ಅಂಧರ ಕ್ರಿಕೆಟ್ ಸಂಸ್ಥೆ ಮತ್ತು ಸಿಎಬಿಎಂಪಿ ಭೋಪಾಲ್‌ನಲ್ಲಿ ಆಯೋಜಿಸಿದ್ದ ಮೂರು ಪಂದ್ಯಗಳ ಸರಣಿಯ ಕೊನೆಯ ಹಣಾಹಣಿಯಲ್ಲಿ ಭಾರತ ತಂಡ ಭಾನುವಾರ ನಾಲ್ಕು ವಿಕೆಟ್‌ಗಳ ಜಯ ಸಾಧಿಸಿತು. 133 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಭಾರತ 15.1 ಓವರ್‌ಗಳಲ್ಲಿ ದಡ ಸೇರಿತು.

ಆರಂಭದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡರೂ ದೀಪಕ್ ಮಲಿಕ್, ನಕುಲ್ ಬಿ ಮತ್ತು ವೆಂಕಟೇಶ್ವರ್ ರಾವ್ ಅವರ ಅಮೋಘ ಆಟದ ನೆರವಿನಿಂದ ಸುಲಭವಾಗಿ ಜಯ ಗಳಿಸಿತು. ಮೊದಲ ಪಂದ್ಯದಲ್ಲಿ ಭಾರತ 124 ರನ್‌ಗಳಿಂದ ಮತ್ತು ಎರಡನೇ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಜಯ ಗಳಿಸಿತ್ತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 132 (ಮೊಹಮ್ಮದ್ ಅಶಿಕುರ್ ರಹಿಮಾನ್ 18), ಮಹಬದುಲ್ ಹಸನ್ 3, ಮೊಹಮ್ಮದ್ ಅಸ್ಮತ್ ಅಲಿ 10, ಆರಿಫ್ ಉಲ್ಲಾ 37, ಅಬ್ದುಲ್ ಜೊಬಿರ್ 2, ಮೊಹಮ್ಮದ್ ಫೈಜಲ್ 2, ಮೊಹಮ್ಮದ್ ಸಲ್ಮಾನ್ 13, ಮೊಹಮ್ಮದ್ ರಿಜ್ವಿ ಹಸನ್ 21; ವೆಂಕಟೇಶ್ವರ್ ರಾವ್ 16ಕ್ಕೆ1, ನಕುಲ್ ಬಿ 8ಕ್ಕೆ2, ಲಲಿತ್ ಮೀನಾ 9ಕ್ಕೆ1, ಪ್ರವೀಣ್ ಕುಮಾರ್ 8ಕ್ಕೆ1, ವಿಜಯ ಕುಮಾರ್ 10ಕ್ಕೆ1); **ಭಾರತ:** 15.1 ಓವರ್‌ಗಳಲ್ಲಿ 6ಕ್ಕೆ 136 (ವಿಜಯ ಕುಮಾರ್ 12, ನಕುಲ್ ಬಿ 22, ದೀಪಕ್ ಮಲಿಕ್ 45, ವೆಂಕಟೇಶ್ವರ ರಾವ್ 22, ಪ್ರಕಾಶ್ ಜಯರಾಮಯ್ಯ 11; ಮೊಹಮ್ಮದ್ ಸಲ್ಮಾನ್ 33ಕ್ಕೆ2, ಮೊಹಮ್ಮದ್ ಅಸ್ಮತ್ ಅಲಿ 31ಕ್ಕೆ3). ಫಲಿತಾಂಶ: ಭಾರತಕ್ಕೆ 4 ವಿಕೆಟ್‌ಗಳ ಜಯ; 3 ಪಂದ್ಯಗಳ ಸರಣಿಯಲ್ಲಿ 3–0 ಜಯ.

ಡ್ರಾ ಪಂದ್ಯದಲ್ಲಿ ಕೇರಳ–ಜೆಎಫ್‌ಸಿ

ವಾಸ್ಕೊ: ಕೇರಳ ಬ್ಲಾಸ್ಟರ್ಸ್ ಎಫ್‌ಸಿ ಮತ್ತು ಶೆಮ್ಶೆಡ್‌ಪುರ ಎಫ್‌ಸಿ ತಂಡಗಳ ನಡುವೆ ಭಾನುವಾರ ರಾತ್ರಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯ 1–1ರ ಡ್ರಾದಲ್ಲಿ ಮುಕ್ತಾಯಗೊಂಡಿತು. ತಿಲಕ್ ಮೈದಾನ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ 14ನೇ ನಿಮಿಷದಲ್ಲಿ ಗ್ರೆಗ್ ಸ್ಟೀವರ್ಟ್ ಗಳಿಸಿದ ಗೋಲಿನೊಂದಿಗೆ ಜೆಎಫ್‌ಸಿ ಮುನ್ನಡೆ ಸಾಧಿಸಿತ್ತು. 27ನೇ ನಿಮಿಷದಲ್ಲಿ ಸಹಾಲ್ ಸಮದ್ ಕೇರಳ ಬ್ಲಾಸ್ಟರ್ಸ್ ಪರ ಸಮಬಲದ ಗೋಲು ಗಳಿಸಿದರು.

ಫತೋರ್ಡದ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಸೋಮವಾರ ನಡೆಯಲಿರುವ ಪಂದ್ಯದಲ್ಲಿ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ಮತ್ತು ಮುಂಬೈ ಸಿಟಿ ಎಫ್‌ಸಿ ತಂಡಗಳು ಸೆಣಸಲಿವೆ.

ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಆಸ್ಟ್ರೇಲಿಯಾ ಎದುರು ಕುಸಿದ ಇಂಗ್ಲೆಂಡ್

ಮೆಲ್ಬರ್ನ್ (ಎಎಫ್‌ಪಿ): ಪ್ಯಾಟ್ ಕಮಿನ್ಸ್ ವೇಗ ಮತ್ತು ನೇಥನ್ ಲಯನ್ ಸ್ಪಿನ್ ಮೋಡಿಯ ಮುಂದೆ ಇಂಗ್ಲೆಂಡ್ ತಂಡ ಸಾಧಾರಣ ಮೊತ್ತಕ್ಕೆ ಕುಸಿಯಿತು.

ಮೆಲ್ಬರ್ನ್ ಕ್ರೀಡಾಂಗಣದಲ್ಲಿ ಭಾನುವಾರ ಆರಂಭವಾದ ಆ್ಯಷಸ್ ಸರಣಿಯ ಮೂರನೇ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಪ್ರವಾಸಿ ಇಂಗ್ಲೆಂಡ್ 65.1 ಓವರ್‌ಗಳಲ್ಲಿ 185 ರನ್‌ಗಳಿಸಿ ಆಲೌಟ್ ಆಯಿತು. ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ (36ಕ್ಕೆ3) ಮತ್ತು ಲಯನ್ (36ಕ್ಕೆ3) ಇಂಗ್ಲೆಂಡ್‌ಗೆ ಬಲವಾದ ಪೆಟ್ಟು ಕೊಟ್ಟರು. ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿರುವ ಆತಿಥೇಯ ತಂಡವು ದಿನದಾಟದ ಕೊನೆಗೆ 16 ಓವರ್‌ಗಳಲ್ಲಿ 1 ವಿಕೆಟ್‌ಗೆ 61 ರನ್ ಗಳಿಸಿತು. ಮಾರ್ಕಸ್ ಹ್ಯಾರಿಸ್ (ಬ್ಯಾಟಿಂಗ್ 20) ಮತ್ತು ಡೇವಿಡ್ ವಾರ್ನರ್ (38; 42ಎ) ತಂಡಕ್ಕೆ ಉತ್ತಮ ಆರಂಭ ಕೊಟ್ಟರು.

ರೂಟ್ ಹೋರಾಟ– ಪ್ಯಾಟ್ ಆಟ: ಇಂಗ್ಲೆಂಡ್ ನಾಯಕ ಜೋ ರೂಟ್ (50; 82ಎಸೆತ, 4X4) ಮಾತ್ರ ಏಕಾಂಗಿ ಹೋರಾಟ ನಡೆಸಿದರು. ಆದರೆ ಉಳಿದ ಬ್ಯಾಟ್ಸ್‌ಮನ್‌ಗಳು ದೊಡ್ಡ ಇನಿಂಗ್ಸ್ ಕಟ್ಟಲು ಶ್ರಮಿಸಲಿಲ್ಲ.

ಟಾಸ್ ಗೆದ್ದ ಆಸ್ಟ್ರೇಲಿಯಾದ ನಾಯಕ ಕಮಿನ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅಲ್ಲದೇ ತಮ್ಮ ತಂಡಕ್ಕೆ ಆರಂಭದಲ್ಲಿಯೇ ಭರ್ಜರಿ ಯಶಸ್ಸಿನ ಕಾಣಿಕೆ ನೀಡಿದರು. ಪ್ರವಾಸಿ ತಂಡದ ಆರಂಭಿಕ ಬ್ಯಾಟರ್ ಹಸೀಬ್ ಹಮೀದ್ ವಿಕೆಟ್ ಅನ್ನು ಎರಡನೇ ಓವರ್‌ನಲ್ಲಿ ಗಳಿಸಿದ ಕಮಿನ್ಸ್, ಎಂಟನೇ ಓವರ್‌ನಲ್ಲಿ ಜ್ಯಾಕ್ ಕ್ರಾಲಿ ಮತ್ತು 27ನೇ ಓವರ್‌ನಲ್ಲಿ ಡೇವಿಡ್ ಮಲಾನ್ ವಿಕೆಟ್‌ಗಳನ್ನೂ ಕಬಳಿಸಿದರು.

ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ – ರಾಯಿಟರ್ಸ್ ಚಿತ್ರ

ಇದರಿಂದಾಗಿ ಇಂಗ್ಲೆಂಡ್ ತಂಡವು ಕೇವಲ 61 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಆತಂಕ ಎದುರಿಸಿತು. ರೂಟ್ ಈ ಆತಂಕವನ್ನು ದೂರ ಮಾಡಲು ಶ್ರಮಿಸಿದರು. ಆದರೆ ಬೆನ್ ಸ್ಟೋಕ್ಸ್ (25 ರನ್) ಮತ್ತು ಜಾನಿ ಬೆಸ್ಟೊ (35; 75ಎ) ಅವರಿಬ್ಬರು ಮಾತ್ರ ರೂಟ್‌ಗೆ ಸ್ವಲ್ಪ ಜೊತೆಗೂಡಿದರು. ಆದರೆ, ಉಳಿದ ಬ್ಯಾಟರ್‌ಗಳು ಬೇಗನೆ ಔಟಾದರು. ವೇಗಿ ಮಿಚೆಲ್ ಸ್ಟಾರ್ಕ್ ಬೌಲಿಂಗ್‌ನಲ್ಲಿ ರೂಟ್ ಔಟಾದರು. ಬೆಸ್ಟೋ ವಿಕೆಟ್ ಕೂಡ ಅವರ ಪಾಲಾಯಿತು. ಇನಿಂಗ್ಸ್‌ನ ಕೊನೆಯ ಹಂತದಲ್ಲಿ ಒಲಿ ರಾಬಿನ್ಸನ್ (22; 26ಎ, 4X3) ಅಲ್ಪ ಕಾಣಿಕೆ ನೀಡಿದರು. ಆದರೂ ತಂಡವು 'ದ್ವಿಶತಕ'ದ ಗಡಿ ಮುಟ್ಟಲಿಲ್ಲ.

ಸರಣಿಯ ಮೊದಲೆರಡೂ ಪಂದ್ಯಗಳಲ್ಲಿ ಇಂಗ್ಲೆಂಡ್ ತಂಡವು ಸೋಲು ಅನುಭವಿಸಿದೆ. ಸರಣಿ ಗೆಲುವಿನ ಆಸೆ ಜೀವಂತವಾಗುಳಿಯಬೇಕಾದರೆ ಈ ಪಂದ್ಯದಲ್ಲಿ ಜಯಿಸುವುದು ಇಂಗ್ಲೆಂಡ್‌ಗೆ ಅನಿವಾರ್ಯವಾಗಿದೆ.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್, ಮೊದಲ ಇನಿಂಗ್ಸ್: 65.1 ಓವರ್‌ಗಳಲ್ಲಿ 185 (ಜೋ ರೂಟ್ 50, ಬೆನ್ ಸ್ಟೋಕ್ಸ್ 25, ಜಾನಿ ಬೆಸ್ಟೊ 35, ರಾಬಿನ್ಸನ್ 22, ಮಿಚೆಲ್ ಸ್ಟಾರ್ಕ್ 54ಕ್ಕೆ2, ಪ್ಯಾಟ್ ಕಮಿನ್ಸ್ 36ಕ್ಕೆ3, ನೇಥನ್ ಲಯನ್ 36ಕ್ಕೆ3) **ಆಸ್ಟ್ರೇಲಿಯಾ, ಮೊದಲ ಇನಿಂಗ್ಸ್:** 16 ಓವರ್‌ಗಳಲ್ಲಿ 1 ವಿಕೆಟ್‌ಗೆ 61 ?ಮಾರ್ಕಸ್ ಹ್ಯಾರಿಸ್ ಬ್ಯಾಟಿಂಗ್ 20, ಡೇವಿಡ್ ವಾರ್ನರ್ 38, ಜೇಮ್ಸ್ ಆ್ಯಂಡರ್ಸನ್ 14ಕ್ಕೆ1).

ಮಹಿಳಾ ಕಬಡ್ಡಿ: ರಾಜ್ಯ ತಂಡದ ಆಯ್ಕೆ 29ರಂದು

ಬೆಂಗಳೂರು: ಮಹಾರಾಷ್ಟ್ರದಲ್ಲಿ ಜನವರಿ 16ರಿಂದ ನಡೆಯಲಿರುವ ಮಹಿಳೆಯರ ರಾಷ್ಟ್ರೀಯ ಕಬಡ್ಡಿ ಟೂರ್ನಿಗೆ ರಾಜ್ಯ ತಂಡದ ಆಯ್ಕೆ ಇದೇ 29ರಂದು ಯಶವಂತಪುರದ ಸುಬೇದಾರ್ ಪಾಳ್ಯದ ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಡೆಯಲಿದೆ.

ಆಯ್ಕೆ ಬಯಸುವವರಿಗೆ ವಯಸ್ಸಿನ ಮಿತಿ ಇಲ್ಲ. ಆದರೆ ತೂಕ 75 ಕೆ.ಜಿ ಒಳಗೆ ಇರಬೇಕು. ಆಧಾರ್ ಕಾರ್ಡ್‌ನ ಮೂಲ, ಪಾಸ್ ಪೋರ್ಟ್ ಅಳತೆಯ ನಾಲ್ಕು ಭಾವಚಿತ್ರ ಜೊತೆಗೆ ತರಬೇಕು. ಮ್ಯಾಟ್ ಶೂ ಹೊಂದಿರಬೇಕು. ಮಾಹಿತಿಗೆ 9945633003 ಸಂಪರ್ಕಿಸಬಹುದು ಎಂದು ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಸಿ.ಮಂಜುನಾಥ ಸಿಂಗ್ ತಿಳಿಸಿದ್ದಾರೆ.

24x7 Helpline: 83058 53333
ಗಜಕರ್ಣ, ತುರಿಕೆ, ಇಸಬು
ಆಯುರ್ವೇದಿಕ ಮಲ್ಹಮ್‌ನಿಂದ ಮುಕ್ತರಾಗಿ
ಇಚ್ಕೊ®
ಆಯುರ್ವೇದಿಕ ಮಲ್ಹಮ್
दाद, खाज, खुजली
• ಮೊದಲ ದಿನವೇ ಫಲಿತಾಂಶ ಕಾಣುವಿರಿ
• ಯಾವುದೇ ಜಿಗುಟುತನ, ಕಲೆಗಳಿಲ್ಲ

ರೈಟ್ ಶುಗರ್ ಟ್ಯಾಬ್ಲೆಟ್
ಹೌದು, ಇದೀಗ ಮಧುಮೇಹ ನಿಯಂತ್ರಿಸಲು ಸಾಧ್ಯವಿದೆ
ಕಳೆದ 15 ವರ್ಷಗಳಿಂದ ನಾನು ಮಧುಮೇಹ ಕಾಯಿಲೆಯಿಂದ ಬಳಲುತ್ತಿದ್ದೆ. ವಿವಿಧ ಚಿಕಿತ್ಸೆ ಪಡೆದ ನಂತರವೂ ಸಕ್ಕರೆ ನಿಯಂತ್ರಣಕ್ಕೆ ಬರಲಿಲ್ಲ. ಇದೀಗ ನಿಯಮಿತವಾಗಿ ನಾನು ರೈಟ್ ಶುಗರ್ ಟ್ಯಾಬ್ಲೆಟ್ ಸೇವಿಸುತ್ತಿದ್ದು, ಇದರ ಫಲಿತಾಂಶದಿಂದ ತುಂಬಾ ಸಂತಸಗೊಂಡಿದ್ದೇನೆ ಮತ್ತು ಸಂಪೂರ್ಣ ತೃಪ್ತಿ ದೊರೆತಿದೆ.
ಶ್ರೀ ಮನೋಜ್ ಸೇಠಿ
ಉದ್ಯಮಿ, ಇಂದೋರ್
• ಮಧುಮೇಹದಿಂದ ಉಂಟಾಗುವ ಜಟಿಲತೆಗಳನ್ನು ನಿವಾರಿಸಲು ರೈಟ್ ಶುಗರ್ ಟ್ಯಾಬ್ಲೆಟ್ ಸಹಕಾರಿಯಾಗಿದೆ. • ವೈಜ್ಞಾನಿಕ ಸಂಶೋಧನೆಯ ಫಲಿತಾಂಶ
• ಕ್ಲಿನಿಕಲ್ ಟ್ರಯಲ್ ಮೂಲಕ ಪ್ರಮಾಣಿಕೃತ
100% ಆಯುರ್ವೇದಿಕ
ಎಲ್ಲಾ ಪ್ರಮುಖ ಮೆಡಿಕಲ್ ಮತ್ತು ಆಯುರ್ವೇದಿಕ ಸ್ಟೋರ್‌ಗಳಲ್ಲಿ ಲಭ್ಯ. ಔಷಧ ಸೇವನಾ ಕ್ರಮವನ್ನು ಪ್ಯಾಕ್‌ನ ಮೇಲೆ ಮುದ್ರಿಸಲಾಗಿದೆ.